ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Monday, the 28th May, 1979 / Jyieshta 7, 1901. S.E.

The House met in the Assembly Chamber, Vidhana Soudha, at Twelve of the Clock.

[MR. SPEAKER (SRI. P. VENKATARAMANA) in the Chair.]

Budget Estimates for 1979-80 Demand for grants.

Demand Nos : 56, 57. and 58 (Debate Continued)

ಶ್ರೀ ಪಿ. ರಾಂದೇವ್.—ಮಾನ್ಯ ಅಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ. ಏನೆಂದರೆ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಸಬ್-ಇನ್‌ಸ್ಪೆಕ್ಟರ್ ಒಬ್ಬರನ್ನು ಪೋಲೀಸ್ ಕಾನ್‌ಸ್ಟೇಬಲ್ ಹೊಡೆದಿದ್ದಾರೆ. ಈ ವಿಚಾರವಾಗಿ ನಾನು ಸೂಚನೆ ಕಳುಹಿಸಿದ್ದೆ. ಇದು ಬಹಳ ಗಹನವಾದ ವಿಚಾರ.

ಅಧ್ಯಕ್ಷರು.—ನಾನು ಅದನ್ನು ನೋಡಿದ್ದೇನೆ. ಅದು ಸರಿಯಾದ ಕ್ರಮದಲ್ಲಿ ಇಲ್ಲದೇ ಇರುವುದರಿಂದ ಅದನ್ನು ತಿರಸ್ಕಾರಮಾಡಿದ್ದೇನೆ.

ಶ್ರೀ ಪಿ. ರಾಂದೇವ್.—ಸ್ವಾಮಿ, ಉತ್ತರ ಹಿಂದೂಸ್ಥಾನದಲ್ಲಿ ಆಗುವಂತೆ ಇಲ್ಲೂ ಲಾ ಅಂಡ್ ಆರ್ಡರ್ ಸಮಸ್ಯೆ ಉಂಟಾಗುತ್ತದೆ. ಆದ್ದರಿಂದ............

ಅಧ್ಯಕ್ಷರು.—ನಾನು ಪರಿಶೀಲನೆ ಮಾಡಿ ಅದನ್ನು ತಿರಸ್ಕಾರ ಮಾಡಿದ್ದೇನೆ ಒಂದು ಹೇಳಿದಮೇಲೆ ನೀವು ಮತ್ತೆ ಆ ಬಗ್ಗೆ ಪ್ರಸ್ತಾಪ ಮಾಡಬಾರದು.

ಶ್ರೀ ಪಿ. ರಾಂದೇವ್.—ಅದನ್ನು ಪ್ರಸ್ತಾಪ ಮಾಡುವುದಕ್ಕೂ ಅವಕಾಶವಿಲ್ಲವೇ

ಅಧ್ಯಕ್ಷರು.—ನೀವು ಹೇಳುವುದನ್ನೆಲ್ಲಾ ನಾನು ಅನುಮತಿಸುವುದಕ್ಕಾಗುವುದಿಲ್ಲ. ನಾನು ಈಗಾಗಲೇ ಹೇಳಿದ್ದೇನೆ, ಅದನ್ನು ತಿರಸ್ಕಾರ ಮಾಡಿದ್ದೇನೆ, ನೀವು ಮತ್ತೆ ಅದನ್ನು ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ

ಶ್ರೀ ಪಿ. ರಾಂದೇವ್.—ಹೀಗಾದರೆ ಹೇಗೆ ಸ್ವಾಮಿ ? ನಮ್ಮ ಹಕ್ಕುಬಾಧ್ಯತೆಗಳಿಗೆ ಚ್ಯುತಿ ತಂದರೆ ಹೇಗೆ ಸ್ವಾಮಿ?

ಅಧ್ಯಕ್ಷರು.—ಸರಿಯಾದ ಕ್ರಮದಲ್ಲಿ ಅದನ್ನು ತಾವು ಕಳುಹಿಸಿಕೊಡಿ. ಆಮೇಲೆ ಅದನ್ನು ನೋಡುತ್ತೇನೆ.

† ಶ್ರೀ ಹೆಚ್. ಡಿ. ಚೌಡಯ್ಯ (ಕೆರಗೋಡು).—ಸನ್ಮಾನ್ಯ ಸಭಾಧ್ಯಕ್ಷರೇ. ನಾನುಈಗ ನಮ್ಮ ಮುಂದೆ ಇರತಕ್ಕ ಸಮುದಾಯ ಅಭಿವೃದ್ಧಿ ಯೋಜನೆ ಹಾಗೂ ಪಂಚಾಯತ್‌ರಾಜ್ಯ ವ್ಯವಸ್ಥೆಗೆ ಸಂಬಂಧ ಪಟ್ಟಬೇಡಿಕೆಗಳೇನಿವೆ ಇದನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ನಾನು ಈ ಬೇಡಿಕೆಗಳನ್ನು ಪ್ರಬಲ ವಾಗಿ ವಿರೋಧಿಸುವುದಕ್ಕೆ ಇರುವ ಕಾರಣವಾದರೂ ಏನೆಂದರೆ ಈ ಖಾತೆಗಳನ್ನು ಹೊತ್ತಿರತಕ್ಕ ಸಂಬಂದ ಪಟ್ಟ ಮಂತ್ರಿಗಳು ಇದರ ಕಾರ್ಯನಿರ್ವಹಣೆಯಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಬಹಳ ವಿಷಾದದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಪಂಚಾಯತ್‌ರಾಜ್ ಹಾಗೂ ಸಮುದಾಯ ಅಭಿವೃದ್ಧಿ ಯೋಜನೆ

---

† indicates that remarks or speeches have not been revised by the member concerned.

ವ್ಯವಸ್ಥೆಗಳು ಈ ರಾಜ್ಯದಲ್ಲಿ ಹಾಗೂ ದೇಶದಲ್ಲಿ ಕಳೆದ ಎರಡು ಅಥವಾ ಮೂರು ದಶಕಗಳಿಂದ ಕೆಲಸ ಮಾಡಿಕೊಂಡುಬಂದಿರುವುದನ್ನು ಗಮನಿಸಿದರೆ ಗೊತ್ತಾಗುತ್ತದೆ, ಇದರ ಪ್ರಗತಿ ನಮ್ಮ ರಾಜ್ಯದಲ್ಲಿ ವರ್ಷೇ ವರ್ಷೇ ಕುಂಠಿತವಾಗುತ್ತಿದೆ. ಇದಕ್ಕೆ ನಾನು ಸರ್ಕಾರವನ್ನು ಸಂಪೂರ್ಣವಾಗಿ ದೂರುವುದಕ್ಕೆ ಹೋಗುವುದಿಲ್ಲ. ಸನ್ಮಾನ್ಯ ಮಂತ್ರಿಗಳಾದ ಕೆ. ಪ್ರಭಾಕರ್ ಅವರೇನಿದ್ದಾರೆ ಇವರ ಬಗ್ಗೆ ನನಗೆ ವೈಯುಕ್ತಿಕವಾಗಿ ಗೌರವವಿದೆ. ಆದಾಗ್ಯೂ ಕೂಡ ಕಳೆದ ಸುಮಾರು ಒಂದೂಕಾಲುವರ್ಷದಿಂದ ಹತ್ತಿರದಲ್ಲಿ ಹಾಗೂ ದೂರದಲ್ಲಿ ಈ ವ್ಯವಸ್ಥೆಯ ಕಾರ್ಯನಿರ್ವಹಣೆಯನ್ನು ನೋಡಿರುವುದರಿಂದ ನನಗಾದರೂ ಅನ್ನಿಸಿತು ಮಾನ್ಯ ಮಂತ್ರಿಗಳಿಗೆ ಈ ವ್ಯವಸ್ಥೆಯಲ್ಲಿ ಪೂರ್ಣವಾದ ಆಸಕ್ತಿ ಇದ್ದಂತೆ ಕಾಣುತ್ತಿಲ್ಲ. ಅವರಿಗೆ application ಕೂಡ ಇಲ್ಲ aptitude ಕೂಡ ಇಲ್ಲ ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಆದ್ದರಿಂದ ಈ ಸಂದರ್ಭದಲ್ಲಿ ಒಂದು ಸಲಹೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿದ್ದರೆ ಚನ್ನಾಗಿತ್ತು. ನಾನು ಮಾನ್ಯ ಮಂತ್ರಿಗಳನ್ನು ರಾಜೀನಾಮೆ ಕೊಡಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ, ಕಾರಣ ಅದು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಅವರ ಪಕ್ಷಕ್ಕೆ ಸಂಬಂಧಪಟ್ಟದ್ದು. ಆದರೆ ಒಂದು ಮಾತನ್ನು ಸನ್ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಅರಿಕೆ ಮಾಡಿಕೊಳ್ಳುತ್ತೇನೆ, ಪಂಚಾಯತ್‌ರಾಜ್ ಮತ್ತು ಸಮುದಾಯ ಅಭಿವೃದ್ಧಿ ಯೋಜನೆ ವ್ಯವಸ್ಥೆ ಈ ಎರಡು ಖಾತೆಗಳೇನಿವೆ ಆದು ರಾಜ್ಯದ ಶೇಕಡ ೮೦ರಷ್ಟು ಜನರ ಭವಿಷ್ಯವನ್ನು ನಿರ್ಧಾರ ಮಾಡತಕ್ಕ ಖಾತೆಗಳು ಪ್ರಮುಖವಾದ ಖಾತೆಗಳು ಆದ್ದರಿಂದ ಮಾನ್ಯ ಮಂತ್ರಿಗಳು ಈ ಎರಡು ಖಾತೆಗಳನ್ನು ಬೇರೆಯವರಿಗೆ ವಹಿಸಿಕೊಟ್ಟು ಅಂದರೆ ಮುಖ್ಯಮಂತ್ರಿಯವರಿಗೆ ವಹಿಸಿಕೊಟ್ಟು ತಾವು ಹಗುರವಾದ ಖಾತೆಯನ್ನು ತೆಗೆದುಕೊಂಡು ಕಾರ್ಯನಿರ್ವಹಿಸುವುದು ಸೂಕ್ತ ನಾನು ಈ ಮಾತನ್ನು ಬರೀ ವಿರೋಧಪಕ್ಷದ ಸದಸ್ಯನಾಗಿ ಮಾತ್ರ ಹೇಳುತ್ತಿಲ್ಲ ಈ ವ್ಯವಸ್ಥೆಯಲ್ಲಿ ಕಳೆದ ೨೫ ವರ್ಷಗಳಿಂದ ಕಿಂಚಿತ್ ಕೆಲಸ ಮಾಡಿಕೊಂಡು ಬಂದಿರುವ ಕಾರಣದಿಂದ ಮತ್ತು ವರ್ಷೇ ವರ್ಷೇ ಅದರ ಪ್ರಗತಿಯ ಒಂದು ಸಮೀಕ್ಷೆಯನ್ನು ನೋಡುತ್ತಾ ಬಂದಿರತಕ್ಕ ಕಾರಣದಿಂದ ಈ ಸಂದರ್ಭದಲ್ಲಿ ಸನ್ಮಾನ್ಯ ಸಭಾಧ್ಯಕ್ಷರ ಮುಖಾಂತರ ಸನ್ಮಾನ್ಯ ಮಂತ್ರಿಗಳಿಗೆ ಈ ಸಲಹೆಯನ್ನು ನೀಡುತ್ತಿದ್ದೇನೆ. ಮಾನ್ಯ ಪ್ರಭಾಕರ್ ಅವರು ಸ್ವಯಂಪ್ರೇರಿತರಾಗಿ ಈ ಖಾತೆಗಳನ್ನು ತೆರವು ಮಾಡಿ ಹಗುರವಾದ ಯಾವುದಾದರೂ ಖಾತೆಯನ್ನು ತೆಗೆದುಕೊಳ್ಳುವುದು ಸೂಕ್ತ. ಇಲ್ಲದೇಹೋದರೆ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ಶೇಕಡ ೮೦ ರಷ್ಟು ಜನರ ಕಲ್ಯಾಣ ಮತ್ತು ಅಭಿವೃದ್ಧಿಯನ್ನು ನಿಮ್ಮ ಕೈಯಲ್ಲಿ ಸಾಧಿಸುವುದಕ್ಕೆ ಸಾಧ್ಯವಿಲ್ಲ ಎಂಬ ಮಾತನ್ನು ಖಂಡತುಂಡವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಇಲಾಖೆಗೆ ಸಂಬಂಧಪಟ್ಟ ವಾರ್ಷಿಕ ವರದಿಯನ್ನು ನಾನು ನೋಡಿದ್ದೇನೆ. ಸಾಮುದಾಯಿಕ ಅಭಿವೃದ್ಧಿ ಯೋಜನೆಗೆ ಸಂಬಂಧಪಟ್ಟಂತೆ ಹೋದ ವರ್ಷ ಅಂದರೆ ೧೯೭೭-೭೮ನೇ ಸಾಲಿನಲ್ಲಿ ಒದಗಿಸಿದ್ದ ಹಣ ಕೇವಲ ೧೮ ಲಕ್ಷ ರೂಪಾಯಿಗಳು ಅದರಲ್ಲಿ ಖರ್ಚು ಮಾಡಿರುವುದು ಕೇವಲ ೯ ಲಕ್ಷ ರೂಪಾಯಿ ಮಾತ್ರ. ಇದರಲ್ಲಿ ವ್ಯವಸಾಯಕ್ಕೆ ಒದಗಿಸಿದ್ದ ಹಣ ೧ ಲಕ್ಷ ರೂಪಾಯಿ. ಇಡೀ ರಾಜ್ಯಕ್ಕೆ ೧೭೬ ತಾಲ್ಲೂಕುಗಳಿಗೆ ೧ ಲಕ್ಷ ರೂಪಾಯಿ ಒದಗಿಸಿದ್ದರೆ ಖರ್ಚುಮಾಡಿರುವುದು ೧೯ ಸಾವಿರ ರೂಪಾಯಿ ಮಾತ್ರ. ಇಷ್ಟು ಹಣವನ್ನು ಒಂದು ತಾಲ್ಲೂಕಿನಲ್ಲಿ ಅಥವಾ ಒಂದು ಪಂಚಾಯಿತಿಯಲ್ಲಿ ಖರ್ಚು ಮಾಡುವುದಕ್ಕೆ ಅವಕಾಶವಿದೆ. ವ್ಯವಸಾಯಕ್ಕೆ ಒಂದು ಲಕ್ಷ ರೂಪಾಯಿ ಇಟ್ಟಿದ್ದರೆ ಖರ್ಚು ಮಾಡಿರುವುದು ೩೨ ಸಾವಿರ ರೂಪಾಯಿ ಮಾತ್ರ. ಹೆಲ್ತ್ ಮತ್ತು ಸ್ಯಾನಿಟೇಷನ್‌ಗೆ ೩ ಲಕ್ಷ ೬೨ ಸಾವಿರ ರೂಪಾಯಿ ಇಟ್ಟಿದ್ದರೆ ಅದರಲ್ಲಿ ಕೇವಲ ೬೫ ಸಾವಿರ ರೂಪಾಯಿಯನ್ನು ಖರ್ಚು ಮಾಡಿದ್ದಾರೆ. ಕಮ್ಯುನಿಕೇಷನ್‌ಗೆ ಕೇವಲ ೧೦ ಸಾವಿರ ರೂಪಾಯಿ ಇಟ್ಟಿದ್ದು ಅದರಲ್ಲಿ ೩ ಸಾವಿರ ರೂಪಾಯಿಯನ್ನು ಮಾತ್ರ ಖರ್ಚು ಮಾಡಿದ್ದಾರೆ. ಕರ್ನಾಟಕ ವಿಕಾಸ ಪತ್ರಿಕೆ ಪ್ರಕಟಣೆಗೆ ೨,೧೮,೦೦೦ ರೂಪಾಯಿ ಒದಗಿಸಿದ್ದು ಖರ್ಚುಮಾಡಿರುವುದು ೧,೦೦೦ ರೂಪಾಯಿ ಮಾತ್ರ. Loans to village panchayats for creation of remunerative assets ಇದಕ್ಕೆ ೮ ಲಕ್ಷ ರೂಪಾಯಿ ಒದಗಿಸಿದ್ದು ೮ ಲಕ್ಷ ರೂಪಾಯಿ ಒದಗಿಸಿದ್ದು ೮ ಲಕ್ಷ ರೂಪಾಯಿಯನ್ನೂ ಖರ್ಚು ಮಾಡಿದ್ದಾರೆ ಇದು ಸಂತೋಷದ ವಿಷಯ ಒಟ್ಟು ೧೮ ಲಕ್ಷ ರೂಪಾಯಿಯಲ್ಲಿ ೯ ಲಕ್ಷ ರೂಪಾಯಿಯನ್ನು ಮಾತ್ರ ಖರ್ಚು ಮಾಡಿದ್ದಾರೆ. ಆದ್ದರಿಂದ ನಾನು ಹೇಳುತ್ತಿದ್ದೇನೆ ಸನ್ಮಾನ್ಯ ಮಂತ್ರಿಗಳಿಗೆ ಈ ಖಾತೆಯಲ್ಲಿ ಆಸಕ್ತಿ ಇಲ್ಲ ಅವರಿಗೆ ಮನಸ್ಸು ಇಲ್ಲ. ಆದ್ದರಿಂದ ಈ ಖಾತೆಯಿಂದ ನಿರ್ಗಮಿಸಿ ಬೇರೆ ಯಾರಿಗಾದರೂ ಇದನ್ನು ವಹಿಸಿಕೊಟ್ಟು ಅವರು ಬೇರೆ ಯಾವುದಾದರೂ ಹಗುರವಾದ ಖಾತೆಯನ್ನು ವಹಿಸಿಕೊಳ್ಳುವುದು ಸೂಕ್ತ ಎಂಬ ಸಲಹೆಯನ್ನು ಮತ್ತೊಮ್ಮೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈ ವರ್ಷ ಈ ಇಲಾಖೆಗೆ ೪೦ ಲಕ್ಷ ರೂಪಾಯಿ ಒದಗಿಸಿದ್ದಾರೆ. ಇದರಲ್ಲಿ ವ್ಯವಸಾಯಕ್ಕೆ ೮ ಲಕ್ಷ ರೂಪಾಯಿ ಒದಗಿಸಿದೆ, ಆದರೆ ಇದರ

ಆವಶ್ಯಕತೆ ಕಂಡುಬರುತ್ತಿಲ್ಲ. New extension projects ಏನಿದೆ ವ್ಯವಸಾಯ ಇಲಾಖೆಯಲ್ಲಿ ಅದರ ರಚನೆ ಈಗ ಬದಲಾವಣೆಯಾಗಿದೆ. ಬದಲಾವಣೆಯಾಗಿ ಈ ಬ್ಲಾಕ್ಸ್ ಇರತಕ್ಕ ಎಕ್ಸ್‌ಟೆನ್‌ಷನ್ ಸ್ಟಾಫ್ ಏನಿದ್ದಾರೆ ವ್ಯವಸಾಯದ ವಿಸ್ತರಣಾ ಕಾರ್ಯಕರ್ತರು ಇವರೆಲ್ಲರನ್ನೂ ವಾಪಸ್ ತೆಗೆದುಕೊಂಡು ವ್ಯವಸಾಯ ಇಲಾಖೆಯ ಮುಖಾಂತರವೇ ಈ ಕಾರ್ಯಕ್ರಮವನ್ನು ಕಾರ್ಯಗತ ಮಾಡಬೇಕೆಂದು ವ್ಯವಸ್ಥೆಯಾಗಿದೆ. ಆದ್ದರಿಂದ ಬ್ಲಾಕ್ಸ್‌ಗೆ ಒದಗಿಸಿರತಕ್ಕ ೮ ಲಕ್ಷ ರೂಪಾಯಿ ಹಣವನ್ನು ದಯಮಾಡಿ ಬೇರೆಯದಕ್ಕೆ ತೆಗೆದುಕೊಳ್ಳುವುದು ಸೂಕ್ತವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಹೆಲ್ತ್ ಅಂಡ್ ಸ್ಯಾನಿಟೇಷನ್ ವಿಷಯದ ಬಗ್ಗೆ ಹೇಳುವುದಾದರೆ ಇದಕ್ಕೆ ಕೇವಲ ೩ ಲಕ್ಷ ರೂಪಾಯಿ ಮಾತ್ರ ಒದಗಿಸಿದ್ದೀರಿ. ಇಷ್ಟೊಂದು ಸ್ವಲ್ಪ ಹಣವನ್ನು ಏತಕ್ಕೆ ಒದಗಿಸಿದರೋ ಗೊತ್ತಿಲ್ಲ. ಏತಕ್ಕೆಂದರೆ ನಮ್ಮ ರಾಜ್ಯದಲ್ಲಿ ೧೭೨ ತಾಲ್ಲೂಕು ಬೋರ್ಡ್ಸ್‌ಗಳು ಮತ್ತು ೮ ಸಾವಿರ ಪಂಚಾಯಿತಿಗಳು ಇರುವಾಗ ಈ ೩ ಲಕ್ಷ ರೂಪಾಯಿಗಳನ್ನು ಇಷ್ಟೊಂದು ತಾಲ್ಲೂಕು ಬೋರ್ಡ್‌ಗಳಿಗೂ ಮತ್ತು ಪಂಚಾಯಿತಿಗಳಿಗೂ ಯಾವರೀತಿ ಹಂಚುತ್ತೀರೋ ಅದು ಸ್ವಲ್ಪ ಅನುಮಾನಾಸ್ಪದವಾದಂಥಾ ವಿಷಯವಾಗಿದೆ.

ಇನ್ನು ಪಂಚಾಯಿತಿಗಳಲ್ಲಿ ಲಾಭದಾಯಕವಾದಂಥಾ ಆಸ್ತಿಗಳನ್ನು ಮಾಡತಕ್ಕಂಥಾದ್ದರ ಬಗ್ಗೆ ಏನು ಒಂದು ಕ್ರಿಯೇಟ್ ಮಾಡಿದ್ದೀರೋ ಅದು ಬಹಳ ಅತ್ಯಂತ ಅವಶ್ಯಕವಾದ್ದು. ಅದು ಮಾಡಲೇ ಬೇಕಾಗಿದೆ. ಇದಕ್ಕೆ ೪೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ. ಅದರಲ್ಲಿ ಕೊನೆ ಪಕ್ಷ ೩೦ ಲಕ್ಷ ರೂಪಾಯಿಗಳಷ್ಟನ್ನಾದರೂ ಕೂಡ ಖರ್ಚು ಮಾಡಿ ಅವು ತಮ್ಮದೇ ಆದಂಥಾ ಒಂದು ಆಸ್ತಿಯನ್ನು ಕ್ರಿಯೇಟ್ ಮಾಡಿಕೊಂಡು ಅಪ್ರೋಪ್ರಿಯೇಟ್ ಮಾಡಿಕೊಳ್ಳತಕ್ಕಂಥಾದ್ದು ಏನು ಇದೆ ಅದು ಬಹಳ ಸೂಕ್ತ ಎಂದು ನಾನು ಈ ಸಂದರ್ಭದಲ್ಲಿ ಸಲಹೆ ಕೊಡುವುದಕ್ಕೆ ಇಷ್ಟ ಪಡುತ್ತೇನೆ.

ಇನ್ನು ಮಹಿಳಾ ಮಂಡಳಿ ವಿಷಯದ ಬಗ್ಗೆ ಹೇಳುವುದಾದರೆ ಇವು ಬ್ಲಾಕ್ ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ಬಹಳ ಉತ್ತಮವಾದಂಥಾ ಕೆಲಸಗಳನ್ನು ಮಾಡುತ್ತಾ ಇದೆ ಎಂದು ಹೇಳುತ್ತೇನೆ. ಅಲ್ಲದೆ ಅವರಿಗೆ ಅನೇಕ ಅವಾರ್ಡ್‌ಗಳೂ ಕೂಡ ಬಂದಿರುವುದು ಕೂಡ ಬಹಳ ಸಂತೋಷದಾಯಕವಾದ ವಿಷಯವೇ ಸರಿ. ಆದರೆ ಈ ಬಗ್ಗೆ ಒಂದು ಮಾತು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಈ ಸಮುದಾಯ ಯೋಜನೆ ಏನು ಇದೆ ಇದು ಕಳೆದ ೨೬–೨೭ ವರ್ಷಗಳಿಂದಲೂ ಸಹ ಕೆಲಸ ಮಾಡಿರತಕ್ಕಂಥಾದ್ದನ್ನು ನೋಡಿದರೆ ವರ್ಷೇವರ್ಷೇ ಆದರ ಒಂದು ಪ್ರಗತಿ ಬಹಳ ಕುಂಠಿತವಾಗಿ ಬರುತ್ತಾ ಇದೆ, ಇದುಬಹಳ ಶೋಚನೀಯವಾದ ಸಂಗತಿಯಾಗಿದೆ. ಇದರಲ್ಲಿರುವ ಅಂಕಿಅಂಶಗಳನ್ನು ನೋಡಿದರೆ, ಈ ಅಂಕಿಅಂಶಗಳು ಬರೇ ಕೇವಲ ಪುಸ್ತಕದಲ್ಲಿ ಇದೆಯೇ ವಿನಾ ಇದರ ಕಾರ್ಯಕ್ರಮಗಳು ನೋಡಿದರೆ ಗ್ರಾಮಾಂತರ ಪ್ರದೇಶದಲ್ಲಿಯಾಗಲಿ ಅಥವಾ ಜಿಲ್ಲಾಮಟ್ಟದಲ್ಲಿಯಾಗಲೀ ಅಥವಾ ರಾಜ್ಯಮಟ್ಟದಲ್ಲಿಯಾಗಲಿ ನೋಡಿದರೆ, ಕೇಳಿದರೆ ಅಷ್ಟಾಗಿ ಆಗುತ್ತಾ ಇಲ್ಲ, ಈ ಮಹಿಳೆಯ ಮತ್ತು ಮಕ್ಕಳ ಅಭಿವೃದ್ಧಿ ಬಗ್ಗೆ ಪ್ರಗತಿ ಸಾಧಿಸುವುದರಲ್ಲಿ ಸರ್ಕಾರ ವಿಫಲತೆಯಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದುದರಿಂದ ಇದಕ್ಕೆ ಹೆಚ್ಚು ಹಣ ಒದಗಿಸಿಕೊಡಬೇಕು ಎಂದು ಹೇಳುತ್ತೇನೆ. ಈವೊತ್ತಿನ ದಿವಸ ಹಳ್ಳಿಗಾಡಿನಲ್ಲಾಗಲಿ, ಗ್ರಾಮಾಂತರ ಪ್ರದೇಶದಲ್ಲಾಗಲಿ ತಾಲ್ಲೂಕಾ ಮಟ್ಟದಲ್ಲಾಗಲಿ ಮಹಿಳೆಯರನ್ನು ಹೆಚ್ಚು ಹೆಚ್ಚಾಗಿ ವಿದ್ಯಾವಂತರನ್ನಾಗಿ ಮಾಡುವುದು ಬಹಳ ಆವಶ್ಯಕ ಇದೆ. ಆದುದರಿಂದ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣಕ್ಕೆ ತಾವು ಹೆಚ್ಚು ಹೆಚ್ಚು ಹಣ ಒದಗಿಸಿ ಕೊಟ್ಟು ಬ್ಲಾಕ್ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಮತ್ತು ಗ್ರಾಮಾಂತರ ಮಟ್ಟದಲ್ಲಿ ವಿಶೇಷವಾದ ಕಾರ್ಯಕ್ರಮವನ್ನು ಹಾಕಿಕೊಂಡು ಈ ಬಗ್ಗೆ ಸರ್ಕಾರ ಸಾಕಷ್ಟು ಆಸಕ್ತಿ ವಹಿಸಿ ಆ ಬಗ್ಗೆ ಸರಿಯಾದ ಒಂದು ಸೂಪರ್‌ವಿಷನ್ ಮತ್ತು ಗೈಡಲೈನ್ಸ್ ಅನ್ನು ಕೊಡತಕ್ಕಂಥಾ ಸರ್ಕಾರದ ಕರ್ತವ್ಯ ಹಾಗೂ ವಿವಿಧ ಹಂತದಲ್ಲಿರುವ ಸಿಬ್ಬಂದಿಗಳ ಒಂದುಕರ್ತವ್ಯ ಎಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಪೌಷ್ಟಿಕ ಆಹಾರ ಯೋಜನೆ ಬಗ್ಗೆ ಅಂಕಿಅಂಶಗಳನ್ನು ತಾವು ಒದಗಿಸಿ ಕೊಟ್ಟಿದ್ದೀರಿ. ಈ ಬಗ್ಗೆ ತಾವು ೪–೫ ಬ್ಲಾಕ್‌ಗಳನ್ನು ಸೆಲೆಕ್ಟ್ ಮಾಡಿದ್ದೀರಿ ಒಂದೊಂದು ಬ್ಲಾಕ್ಸ್‌ಗೂ ಎಷ್ಟು ಹಣ ಅಂತ ಕೊಟ್ಟಿದ್ದೀರಿ ? ಈ ಬಗ್ಗೆ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ಈ ಕಾರ್ಯಕ್ರಮಗಳಿಗೆಲ್ಲಾ ಈ ಹಣದಲ್ಲಿ ಈ ಒಂದು ಪ್ರಾಜೆಕ್ಟ್ಸ್ ಪ್ರಕಾರ ಯಾವ್ಯಾವ ರೀತಿ ಹಂಚುತ್ತೇವೆ ಇದನ್ನು ಯಾವ್ಯಾವ ರೀತಿ ಸ್ಕ್ರೂಟಿನಿ ಮಾಡುತ್ತೇವೆ ಮತ್ತು ಇದರಿಂದ ಎಷ್ಟುಮಕ್ಕಳಿಗೆ ಪ್ರಯೋಜನ ಆಗುತ್ತದೆ ಅನ್ನುವುದನ್ನು ಈ ರಿಪೋರ್ಟಿನಲ್ಲಿ ಹೇಳಿದ್ದೀರಿ. ತಮಗೆ ಹೇಳಬೇಕಾದರೆ ಈ

ಒಂದು ಪೌಷ್ಟಿಕ ಆಹಾರ ಯೋಜನೆ ೧೯೭೩–೭೪ ರಲ್ಲಿ ನಮ್ಮ ರಾಜ್ಯದಲ್ಲೇ ಪ್ರಪ್ರಥಮವಾಗಿ ಪ್ರಾರಂಭವಾಯಿತ್ತು ಎಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷರಿಗೂ ಪರಿಚಯ ಇರಬಹುದು. ತಾವು ಕೂಡ ಇದಕ್ಕೆ ಅಧ್ಯಕ್ಷರಾಗಿದ್ದೀರಿ. ತಾವು ಈ ಬಗ್ಗೆ ೪–೫ ಬ್ಲಾಕ್‌ಗಳನ್ನು ಏನು ಸೆಲೆಕ್ಟ್ ಮಾಡಿದೀರೋ ಅದು ಯಾವ್ಯಾವುದು ಎಂದರೆ ಗಂಗಾವತಿ, ಧಾರವಾಡ, ಮಂಡ್ಯ ಮತ್ತು ಆನೇಕಲ್ ಮತ್ತು ಸೋಮವಾರ ಪೇಟೆ. ಈ ೫ ಬ್ಲಾಕ್‌ಗಳಲ್ಲಿ ಪ್ರಥಮತ : ಈ ಯೋಜನೆ ಆರಂಭವಾಯಿತು. ಸರ್ಕಾರದ ಒಂದು ಒತ್ತಾಯದಿಂದ ಈ ಯೋಜನೆಯ ಕಾರ್ಯಕ್ರಮ ಪ್ರಾರಂಭವಾಯಿತು. ಇದು ಸುಮಾರು ೧೯೭೭–೭೮ರ ವರೆಗೂ ಕೂಡ ಒಂದೇ ಸಮನೆ ೪ ವರ್ಷಗಳ ಕಾಲ ಈ ಕಾರ್ಯಕ್ರಮ ನೂರಕ್ಕೆ ನೂರರಷ್ಟು ಫಲ ಪ್ರಗತಿಯಾಯಿತು, ಚೆನ್ನಾಗಿ ನಡೆಯಿತು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈ ಕಾರ್ಯಕ್ರಮಗಳು ನಡೆಯುವಾಗ ನಾನೇ ಸ್ವತಃ ಕೆಲವುದರಲ್ಲಿ ಭಾಗವಹಿಸಿದ್ದೇನೆ. ಆದುದರಿಂದ ನಾನು ಈ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆದರೆ ಇತ್ತೀಚೆಗೆ ಸರ್ಕಾರದ ವತಿಯಿಂದ ಇದಕ್ಕೆ ಕೊಡತಕ್ಕಂಥಾ ಧನ ಸಹಾಯ ಏನು ಇದೆಯೋ ಅದು ಮತ್ತು ಮಾರ್ಗದರ್ಶನ ಇವುಗಳ ಒಂದು ಕೊರತೆಯಿಂದ ಈ ಕಾರ್ಯಕ್ರಮಗಳು ಕುಂಠಿತವಾಗುತ್ತಾ ಇದೆ. ದುರ್ಬಲ ವರ್ಗದವರಿಗೆ ಸಹಾಯವಾಗತಕ್ಕಂಥಾ ಈ ಒಂದು ಯೋಜನೆ ಏನು ಇದೆ ಇದು ಈವೊತ್ತಿನ ದಿವಸ ಕುಂಠಿತವಾಗುತ್ತಾ ಇದೆ ಎಂದು ಹೇಳಲು ವಿಷಾದಿಸುತ್ತೇನೆ. ಇದರಲ್ಲಿ ಸೆಂಟ್ರಲ್ ಸರ್ಕಾರ್‌ನವರು ಮತ್ತು ಸ್ಟೇಟ್ ಸರ್ಕಾರ್‌ರವರು ಇಬ್ಬರೂ ಸೇರಿದ್ದಾರೆ ಎಂದು ಹೇಳಿದ್ದೀರಿ. ಈ ಬಗ್ಗೆ ನಾನು ಹೇಳುವುದೇನೆಂದರೆ ಒಂದು ವೇಳೆ ಸೆಂಟ್ರಲ್ ಸರ್ಕಾರ್‌ನವರು ಇದಕ್ಕೆ ಕೊಟ್ಟಿರತಕ್ಕಂಥಾ ಹಣ ಏನು ಇದೆ ಅದು ಎಲ್ಲಾ ಬ್ಲಾಕ್‌ಗಳಿಗೂ ಸಾಲದೇ ಹೋದರೆ ಸ್ಟೇಟ್ ಸರ್ಕಾರ್‌ನಿಂದಲಾದರೂ ಕೂಡ ಇದಕ್ಕೆ ಹೆಚ್ಚಿನ ಹಣ ಒದಗಿಸಿ ಇದನ್ನು ಮುಂದುವರೆಸಬೇಕಾದ್ದು ಅತ್ಯಂತ ಅವಶ್ಯಕ ಇದೆ ಎಂದು ಹೇಳುತ್ತೇನೆ. ಈವೊತ್ತಿನ ದಿವಸ ತಾವು ಇದರಲ್ಲಿ ವಿಫಲರಾಗಿದ್ದೀರಿ ಅನ್ನುವ ಮಾತನ್ನು ಹೇಳುತ್ತೇನೆ.

ಇನ್ನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ಹೇಳಬಯಸುವುದೇನೆಂದರೆ ತಾವು ಈ ಖಾತೆಯ ಮಂತ್ರಿಗಳಾಗಿದ್ದೀರಿ, ನಾನು ಈ ಕ್ಷೇತ್ರದ ಶಾಸಕನಾಗಿದ್ದೇನೆ, ತಾವು ನನ್ನ ಕ್ಷೇತ್ರಕ್ಕೆ ೪–೫ ಸಾರಿ ಬಂದಿದ್ದೀರಿ, ಅದರಲ್ಲಿ ಒಂದು ಸಾರಿಯಾದರೂ ಕೂಡ ತಾವು ನನಗೆ ಟೂರ್ ಪ್ರೋಗ್ರಾಂ ಅನ್ನು ಕಳುಹಿಸಲಿಲ್ಲಾ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನಾನು ಈ ಯೋಜನೆಯಲ್ಲಿ ೨೫ ವರ್ಷಗಳ ಕಾಲ ಸಕ್ರಿಯ ಪಾತ್ರವಹಿಸಿ ಕೆಲಸ ಮಾಡಿದ್ದೇನೆ, ಆದುದರಿಂದ ತಾವು ಈ ಕ್ಷೇತ್ರಕ್ಕೆ ಭೇಟಿ ಇತ್ತಾಗ ತಮ್ಮನ್ನು ನಾನು ಕರೆದುಕೊಂಡು ಹೋಗಿ ಇಲ್ಲಿ ನಡೆದಿರತಕ್ಕಂಥಾ ಕಾರ್ಯಕ್ರಮಗಳನ್ನು ತೋರಿಸೋಣ ಮತ್ತು ಇದರಲ್ಲಿರುವ ಲೋಪದೋಷಗಳನ್ನು ಅವರ ಗಮನಕ್ಕೆ ತರೋಣ ಎಂದು ಬಹಳ ಕುತೂಹಲಕಾರಿಯಾಗಿದ್ದೆ. ಆದರೆ ತಾವು ನನಗೆ ಟೂರ್ ಪ್ರೋಗ್ರಾಂ ಅನ್ನು ಕಳುಹಿಸುತ್ತಲೇ ಇರಲಿಲ್ಲ. ತಾವು ಯಾವಾಗ ಬಂದರೂ ಕೂಡ ಕಾರ್ಯಕ್ರಮವನ್ನು ಹಾಕಿಕೊಂಡು ಬಂದಾಗ ಟಿ.ಬಿ.ಗೆ. ಯಾರೋ ಮಂತ್ರಿಗಳ ಜೊತೆಯಲ್ಲೋ ಅಥವಾ ಇನ್ನಾರ ಜೊತೆಯಲ್ಲೋ ಬರುತ್ತಾ ಇದ್ದೀರಿ.

SRI C. M. ARUMUGHAM.—Whenever the Minister visit my constituency, I am also not receiving his tour programme I am not blaming the Minister for this; at least his Private Secretary should send the tour programme to the Members of the Assembly. He goes to the village without even informing the Tahsildar and the Block Development Officer. Whenever the Ministers go on tour, they should be amenable to the Members of the Assembly and also the public. If they do not send their tour programme to us how can we expect that they would send their tour programme to important persons of the Taluk or the Village. I think it is a serious lapse on the part of the Minister. At least in future he should arrange to send his tour programme to us.

MR. SPEAKER.—I will speak to Chief Minister, if necessary.

SRI M. V. RAJASEKHARAN.—This is not the case only with Sri K. Prabhakar, Minister for Rural Development and Panchayati Raj. Most of the Ministers do not send their tour programme to us. I request the Chair to give directions to the Ministers.

ಶ್ರೀ ಜಿ. ರಾಮೇಗೌಡ.—ಮಾನ್ಯ ಸದಸ್ಯರು ಎಲ್ಲರೂ ಟೂರ್ ಪ್ರೋಗ್ರಾಂ ಕಳುಹಿಸುವುದಿಲ್ಲ ಎಂದು ಹೇಳಿದರೆ ತಪ್ಪಾಗುತ್ತದೆ ಸ್ವಾಮಿ.

ಶ್ರೀ ಹೆಚ್. ಡಿ. ಚೌಡಯ್ಯ.—ಮಾನ್ಯ ಅರಣ್ಯ ಮತ್ತು ಆಹಾರ ಇಲಾಖಾ ಮಂತ್ರಿಗಳು ಹೇಳುವುದನ್ನು ನಾನು ಒಪ್ಪುತ್ತೇನೆ. ಅನೇಕರು ಟೂರ್ ಪ್ರೋಗ್ರಾಂ ಅನ್ನು ಕಳುಹಿಸುತ್ತಾರೆ ಇಲ್ಲ ಎಂದು ಹೇಳುವುದಿಲ್ಲಾ. ನಾನು ಈಗ ತಂದಿರುವ ಬೇಡಿಕೆ ಏನು ಇದೆಯೋ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಏನು ಇದ್ದಾರೋ ಅವರಿಗೆ ಹೇಳುತ್ತೇನೆ. ಅವರು ೪-೫ ಬಾರಿ ನನ್ನ ಕ್ಷೇತ್ರಕ್ಕೆ ಬಂದಿದ್ದರು, ಒಂದು ಬಾರಿಯೂ ಕೂಡ ಅವರು ನನಗೆ ಟೂರ್ ಪ್ರೋಗ್ರಾಂ ಕಳುಹಿಸಿಲ್ಲಾ. ಈ ಬಗ್ಗೆ ತಮಗೆ ಹೇಳಬೇಕಾದರೆ ಅವರು ಟೂರಿಗೆ ಹೋಗಿ ಬಂದ ಮೇಲೆ ಅನಂತರ ನಾನು ತಾಲ್ಲೂಕ್ ಬೋರ್ಡ್ ಅಧ್ಯಕ್ಷರನ್ನೂ ಮತ್ತು ಬಿ.ಡಿ.ಓ. ಅವರನ್ನೂ ಕೂಡ ಕೇಳಿದ್ದಲ್ಲಿ ಮಾನ್ಯ ಮಂತ್ರಿಗಳಿಗೆ ಯಾವ ಖಾತೆ ಸಂಬಂಧಪಡುತ್ತದೋ ಅದರ ಬಗ್ಗೆ ಭೇಟಿ ಮಾಡದೇ ಅವರಿಗೆ ಸಂಬಂಧಪಡದೇ ಇರತಕ್ಕಂಥಾ ಖಾತೆಗೆ ಭೇಟಿ ಕೊಟ್ಟು, ಸೂಪರ್‌ವಿಷನ್ ಮಾಡಿ ಮತ್ತು ಇನ್‌ಸ್ಪೆಕ್ಷನ್ ಮಾಡಿ ಹೋಗಿರತಕ್ಕಂಥಾದ್ದನ್ನು ನಾನು ಕೇಳಿದೆ. ಅದಕ್ಕೋಸ್ಕರವಾಗಿಯೇ ನಾನು ಈ ಮಾತನ್ನು ಹೇಳಿದ್ದು, ಏನೆಂದರೆ ನೀವು ಈ ಖಾತೆಗೆ ಮಂತ್ರಿಗಳಾಗಿರುವುದು ಸರಿಯಲ್ಲ, ನಿಮಗೆ ಇದರಲ್ಲಿ ಅಟಿಟ್ಯೂಡ್ ಇಲ್ಲಾ, ಇದರ ಬಗ್ಗೆ ನಿಮಗೆ ಆಸಕ್ತಿ ಇಲ್ಲ ಎಂದು. ನಾನು ತಮ್ಮನ್ನು ಕೈಮುಗಿದು ಕೇಳಿಕೊಳ್ಳುತ್ತೇನೆ ದಯವಿಟ್ಟು ನಿಮ್ಮ ಖಾತೆಯನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ವಹಿಸಿಬಿಟ್ಟು ನೀವು ಯಾವುದಾದರೂ ಒಂದು ಹಗುರವಾದ ಖಾತೆಯನ್ನು ತೆಗೆದುಕೊಳ್ಳಿ ಎಂದು. ನಾನು ನಿಮ್ಮನ್ನೇನೂ ಮಂತ್ರಿಗಳಾಗಿ ಇರಬೇಡಿ ಎಂದು ಹೇಳುವುದಿಲ್ಲಾ, ನೀವು ಮಂತ್ರಿಗಳಾಗಿಯೇ ಮುಂದುವರೆಯಿರಿ, ನೀವು ಮಂತ್ರಿಗಳಾಗಿ ಮುಂದುವರೆದರೆ ನನಗೇನೂ ಸಂಕಟವಿಲ್ಲಾ ಎಂದು ನಾನು ಈ ಮಾತನ್ನು ಮತ್ತೊಮ್ಮೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಪಂಚಾಯತ್ ರಾಜ್ ಇನ್ಸ್ಟಿಟ್ಯೂಷನ್ ಬಗ್ಗೆ ಈ ವರದಿಯಲ್ಲಿ ಈ ರೀತಿ ಹೇಳಿದ್ದೀರಿ. ಅದನ್ನು ಓದುತ್ತೇನೆ. ಅದು ಈ ರೀತಿ ಇದೆ.—

> "Panchayat Raj Institutions in the State, *viz.*, Panchayats at the village level, Taluk Boards at the Taluk level and District Development Councils at the District level have functioned well during the year 1978–79 ಎಂದು.

ಇದರಲ್ಲಿ functioned well ಎಂದು ಹೇಳಿದ್ದೀರಿ. ಇದು ತಮ್ಮ ಗಮನಕ್ಕೆ ಏನಾದರೂ ಬಂದಿದೆಯೇ? ತಮ್ಮ ಅಧಿಕಾರಿಗಳು ಏನಾದರೂ ಇದರ ಬಗ್ಗೆ ಪ್ರಿಂಟ್ ಮಾಡಿಸಿ ತಮ್ಮ ಗಮನಕ್ಕೆ ತಿಳಿಸಿದ್ದಾರಾ ಅಥವಾ ಇದರ ಬಗ್ಗೆ ಯಾವರೀತಿಯಾದರೂ ಏನಾದರೂ ಸರ್ಕ್ಯುಲೇಟ್ ಮಾಡಿದ್ದಾರಾ? ಈ ವಿಚಾರವನ್ನು ತಾವು ಈ ಖಾತೆಗೆ ಉತ್ತರ ಕೊಡುವಾಗ ತಿಳಿಸಬೇಕು ಎಂದು ನಾನು ಕೇಳುತ್ತೇನೆ. ಈವೊತ್ತಿನ ದಿವಸ ರಾಜ್ಯದಲ್ಲಿರುವ ತಾಲ್ಲೂಕಾ ಬೋರ್ಡ್ಸ್ ಮತ್ತು ಡಿಸ್ಟ್ರಿಕ್ಟ್ ಬೋರ್ಡ್‌ಗಳು ಮತ್ತು ಪಂಚಾಯಿತಿಗಳು ಯಾವ ರೀತಿಯಾಗಿ ಕೆಲಸ ಮಾಡುತ್ತವೆ ಸರಿಯಾಗಿ ಕೆಲಸ ಮಾಡುತ್ತವೆಯೋ ಇಲ್ಲವೇ ಅನ್ನುವುದು ತಮಗೆ ತಿಳಿದಿರಬೇಕು.

ಇದರ ಸಮೀಕ್ಷೆಯನ್ನು ನೀವು ಮಾಡಿದ್ದೀರಾ? ಇದಕ್ಕೆ ಸಂಬಂಧಪಟ್ಟಂತೆ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ನಡೆದಿರತಕ್ಕ ಸೆಮಿನಾರ್‌ಗಳು ಏನು ನಡೆದಿವೆ ಅವುಗಳಲ್ಲಿ ಸರ್ವಾನುಮತದಿಂದ ರೆಸಲ್ಯೂಷನ್ ಮಾಡಿ ನಮ್ಮ ರಾಜ್ಯದಲ್ಲಿ ಪಂಚಾಯತಿಗಳು ವಿಫಲವಾಗಿವೆ, ಇದಕ್ಕೆ ಪ್ರಬಲವಾದ ಕಾರಣ, ಪಂಚಾಯತಿಯ ಕಾರ್ಯದರ್ಶಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಶಿಫಾರಸ್ ಮಾಡಿದ್ದಾರೆ. ತಾವು ರಾಜ್ಯದಲ್ಲಿ ತಾಲ್ಲೂಕು ಬೋರ್ಡುಗಳು, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಬೋರ್ಡ್‌ಗಳು ಚೆನ್ನಾಗಿ ಕೆಲಸ ಮಾಡುತ್ತವೆ, ಪಂಚಾಯತಿಗಳು ಈ ಒಂದು ಕಾರಣದಿಂದ ಚೆನ್ನಾಗಿ ಕೆಲಸ ಮಾಡುತ್ತಿಲ್ಲ ಎನ್ನುವ ಮಾತನ್ನು ಹೇಳಿದ್ದರೆ ನಾನು ಸಂತೋಷಪಡುತ್ತಿದ್ದೆ. ಕಳೆದ ಅಕ್ಟೋಬರ್‌ನಲ್ಲಿ

ಸಿಎಫ್‌ಟಿಆರ್ ನಲ್ಲಿ ಮೈಸೂರು ಯೂನಿವರ್ಸಿಟಿಯ ಆಶ್ರಯದಲ್ಲಿ ಒಂದು ಸೆಮಿನಾರ್ ನಡೆಯಿತು. ಅದರಲ್ಲಿ ದಕ್ಷಿಣದ ನಾಲ್ಕು ರಾಜ್ಯದ ಪ್ರತಿನಿಧಿಗಳು ಪಾಲುಗೊಂಡಿದ್ದರು, ನಾನೂ ಕೂಡ ಇದರಲ್ಲಿ ಪಾಲುಗೊಂಡಿದ್ದೆ. ಅದರಲ್ಲಿಯೂ ಸಹ ಪಂಚಾಯತಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಅವುಗಳು ಕಾರ್ಯನಿರ್ವಹಣೆಯಲ್ಲಿ ಪೂರ್ಣ ವಿಫಲಗೊಂಡಿವೆ ಎನ್ನತಕ್ಕ ಮಾತನ್ನು ಎಲ್ಲರೂ ಕೂಡ ಒಪ್ಪಿದ್ದಾರೆ. ಕಳೆದ ಅಧಿವೇಶನದಲ್ಲಿ ಅನೇಕ ಸದಸ್ಯರುಗಳು ಪಂಚಾಯತಿಗೆ ಡ್ಯೂಯಲ್ ಕಂಟ್ರೋಲ್ ಇರುವುದು ಸರಿಯಲ್ಲ ಇದಕ್ಕೆ ಪ್ರತ್ಯೇಕ ವ್ಯವಸ್ಥೆ ಇರಬೇಕು ಎನ್ನುವ ಅಭಿಪ್ರಾಯವನ್ನು ಕೂಡ ವ್ಯಕ್ತಮಾಡಿದ್ದರು ಆದ್ದರಿಂದಲೇ ನಾನು ಹೇಳುವುದು ತಮಗೆ ಇದರಲ್ಲಿ ಸ್ವಲ್ಪ ಆಸಕ್ತಿ ಇಲ್ಲ, ಶ್ರದ್ಧೆ ಇಲ್ಲವೆಂದು. ಇವತ್ತು ರಾಜ್ಯದಲ್ಲಿ ವಿಲೇಜ್ ಅಕೌಂಟೆಂಟ್ ಮತ್ತು ಪಂಚಾಯತಿ ಸೆಕ್ರೆಟರಿ ಏನು ಇದ್ದಾರೆ, ಅವರುಗಳು ೮೪೮೦ ಜನ ಇದ್ದಾರೆ, ಅವರುಗಳಲ್ಲಿ ರಾಜ್ಯದಲ್ಲಿರುವ ನಾಲ್ಕು ಟ್ರೈನಿಂಗ್ ಸೆಂಟರುಗಳಿಂದ ಕೇವಲ ೫೩೨ ಜನಕ್ಕೆ ಟ್ರೈನಿಂಗ್ ಕೊಡಲಾಗಿದೆ ಕೇವಲ ೫೩೨ ಜನಕ್ಕೆ ಟ್ರೈನಿಂಗ್ ಕೊಟ್ಟಿರುವುದನ್ನು ತಾವು ಪ್ರಗತಿ ಎಂದು ಹೇಳುತ್ತೀರಾ ? ಪಂಚಾಯತಿ ರಾಜ್ಯಗಳ ಕಾನ್‌ಫರೆನ್ಸ್ ನ ಔಟ್‌ಕಂ ಏನು ಎನ್ನತಕ್ಕದ್ದನ್ನು ತಾವು ಹೇಳಿಲ್ಲ. ಇದರ ಬಗ್ಗೆ ಏನು ಕಾರ್ಯಕ್ರಮವನ್ನು ತಾವು ತೆಗೆದುಕೊಂಡಿದ್ದೀರಿ ಎನ್ನುವುದನ್ನು ಸರ್ಕಾರದವರು ನಮ್ಮ ಮುಂದಿಟ್ಟಿಲ್ಲ. ಇದನ್ನೆಲ್ಲಾ ನಾನು ನೋಡಿದಾಗ, ಮಾನ್ಯ ಮಂತ್ರಿಗಳಿಗೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಅನೇಕ ವಿಷಯಗಳಿಗೆ ಸ್ವಲ್ಪ ಆಸಕ್ತಿ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು ಎನ್ನುವ ಮಾತನ್ನು ನಾನು ಕಳಕಳಿಯಿಂದಹೇಳುವುದಕ್ಕೆ ಇಷ್ಟಪಡುತ್ತೇನೆ.

೧೨–೩೦ ಪಿ, ಎಂ.

ಇನ್ನೂ ರೂರಲ್ ವಾಟರ್‌ಸಪ್ಲೈ ಸ್ಕೀಂನ ಬಗ್ಗೆ—ನಾವು ಈ ಸ್ಕೀಂನ ಬಗ್ಗೆ ಪ್ರತಿಯೊಂದು ಅಧಿವೇಶನದಲ್ಲಿಯೂ ಕೂಡ ಪ್ರಶ್ನೆಯ ರೂಪದಲ್ಲಿ, ಅಥವಾ ಗಮನ ಸೆಳೆಯುವ ಸೂಚನೆಯ ರೂಪದಲ್ಲಿ ಕೇಳಿದಂಥ ವಿವರಗಳೆಲ್ಲಾ ಅರಣ್ಯರೋಧವಾಯಿತು. ರೂರಲ್ ವಾಟರ್ ಸಪ್ಲೈ ಸ್ಕೀಂನಲ್ಲಿ ಸರ್ಕಾರದವರು ಬೋರ್‌ವೆಲ್‌ಗಳನ್ನು ಹಾಕಿಸಿದ್ದಾರೆ. ಸಾಕಷ್ಟು ಬೋರ್‌ವೆಲ್‌ಗಳನ್ನು ಹಾಕಿಸಿದ್ದಾರೆ ನನ್ನ ತಾಲ್ಲೂಕಿನಲ್ಲಿ ಹೋದರೆ, ಇನ್ನೂ ಬೋರ್‌ವೆಲ್‌ಗಳನ್ನು ಹಾಕದೇ ಇರತಕ್ಕ ಗ್ರಾಮಗಳು ಇವೆ. ಆದರೆ ಹಾಕಿರತಕ್ಕ ಬೋರ್‌ವೆಲ್‌ಗಳು ಏನು ಇವೆ, ಅವುಗಳು ನಿಜವಾಗಿಯೂ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಕಳೆದ ಮಾರ್ಚ್ ತಿಂಗಳಲ್ಲಿ ಮುಖ್ಯ ಇಂಜಿನೀಯರ್ ಎಂ.ಐ.ಪಿ.ಎಚ್ ಇ. ಇವರು ನಮ್ಮ ತಾಲ್ಲೂಕಿಗೆ ೮–೧೦ ಬೋರ್‌ವೆಲ್‌ಗಳನ್ನು ಮಂಜೂರು ಮಾಡಿದ್ದಾರೆ. ಬೋರ್‌ವೆಲ್‌ಗಳನ್ನು ಹಾಕಿದರು, ಆದರೆ ಅದಕ್ಕೆ ಪಂಪುಗಳನ್ನು ಇನ್ನೂ ಫಿಕ್ಸ್ ಮಾಡಿಲ್ಲ. ಅವುಗಳಿಗೆ ಪ್ಲಾಟ್‌ಫಾರಂ ಕೂಡ ಕಟ್ಟಿಲ್ಲ. ಒಂದೆರಡು ಮೂರು ಕಡೆಗಳಲ್ಲಿ ಆಟವಾಡತಕ್ಕ ಮಕ್ಕಳು ಕಲ್ಲನ್ನು ಹಾಕಿ ಅವುಗಳು ಕೆಲಸ ಮಾಡುವುದಕ್ಕೂ ಕೂಡ ಸಾಧ್ಯವಾಗದೇ ಇರತಕ್ಕ ಪರಿಸ್ಥಿತಿ ಇದೆ. ಒಟ್ಟಿನಲ್ಲಿ ಈ ಇಲಾಖೆಯಲ್ಲಿ ಫಾಲೋ ಅಫ್ ಆಕ್ಷನ್ ಇಲ್ಲ, ಎನ್ನುವುದನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ವರ್ಷ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿ, ಅದರ ಪ್ರಕಾರ ಈ ಬೋರ್‌ವೆಲ್‌ಗಳ ಪಂಪುಸೆಟ್‌ಗಳನ್ನು ರಿಪೇರಿ ಮಾಡುವುದಕ್ಕೆ ಸೂಪರ್‌ವೈಸ್ ಮಾಡುವುದಕ್ಕೆ ಇನ್‌ಸ್ಪೆಕ್ಷನ್ ಮಾಡುವುದಕ್ಕೆ ಹೆಚ್ಚಿನ ಸಿಬ್ಬಂದಿಯನ್ನು ಬಲಪಡಿಸಬೇಕು ಎಂದು ಹೇಳಿದ್ದಾರೆ. ನನ್ನ ಕ್ಷೇತ್ರದಲ್ಲಿ ಎನ್.ಆರ್.ಡಬ್ಲ್ಯೂ.ಎಸ್. ಸ್ಕೀಂ ಗೆ ಸರ್ವೆ ಮಾಡಿ ಎಂದು ಅನೇಕ ಬಾರಿ ನಾನು ಅಸಿಸ್ಟೆಂಟ್ ಇಂಜಿನಿಯರ್ ಅವರನ್ನು ಕೇಳುತ್ತಿದ್ದೇನೆ. ಅವರು ಹೇಳುತ್ತಾರೆ, ಏನು ಮಾಡಲಿ. ನನಗಿರುವ ಜೀಪು ಹಳೆಯದು, ಅದು ಕಂಡಂ ಆಗಿದೆ, ಹೊಸ ಜೀಪು ಬೇಕು ಎಂದು ಕೇಳಿದ್ದೇವೆ ಎಂದು ಹೇಳುತ್ತಿದ್ದಾರೆ. ಜಿಲ್ಲಾಧಿಕಾರಿಗಳು ಇದಕ್ಕೆ ಶಿಫಾರಸ್ ಕೂಡ ಮಾಡಿದ್ದಾರೆ, ಮುಖ್ಯ ಇಂಜಿನಿಯರ್ ಅವರೂ ಶಿಫಾರಸ್ ಮಾಡಿದ್ದಾರೆ, ಕೊನೆಯಲ್ಲಿ ಹಣಕಾಸಿನ ಇಲಾಖೆಯವರು ಏನೋ ಒಂದು ಕ್ವಯರಿಯನ್ನು ಹಾಕಿ ಅದು ಮಂಜೂರು ಆಗಿಲ್ಲ. ಸರ್ಕಾರದವರು ತಮ್ಮ ಯೋಜನೆಗಳು ಫಲಪ್ರದವಾಗಬೇಕು ಎಂದು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ, ಪ್ರಾಪರ್ ಫಾಲೋ ಅಪ್ ಆಕ್ಷನ್ ಇಲ್ಲದೆ ಎಲ್ಲಾ ಹಂತದಲ್ಲಿಯೂ ಏನೂ ಪ್ರಯೋಜನವಾಗುತ್ತಿಲ್ಲ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ದಯಮಾಡಿ ಇದಕ್ಕೆ ಅಗತ್ಯವಾಗಿ ಬೇಕಾದಂಥ ಸಿಬ್ಬಂದಿ ಸಿಬ್ಬಂದಿಗೆ ಬೇಕಾದಂಥ ವಾಹನಗಳನ್ನು ಅತಿ ಶೀಘ್ರವಾಗಿ ಒದಗಿಸಬೇಕು ಎನ್ನತಕ್ಕಮಾತನ್ನು ನಾನು ಈ ಸಮಯದಲ್ಲಿ ಹೇಳುತ್ತೇನೆ.

ಇನ್ನು ನ್ಯಾಷನಲ್ ರೂರಲ್ ವಾಟರ್‌ಸಪ್ಲೈ ವಿಷಯದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಇದುವರೆಗೂ ತಾವು ಇದರಲ್ಲಿ ಕೈಗೊಂಡಂಥ ಕಾರ್ಯಕ್ರಮಗಳು ಎಲ್ಲಾ ಡಿಫಂಕ್ಟ ಆಗಿವೆ. ಇದಕ್ಕೆ ಕಾರಣವಾದರೂ ಕೂಡ ಪಂಚಾಯತಿಗಳು ತಾವು ಕೊಡಬೇಕಾದ ಎಲೆಕ್ಟ್ರಿಸಿಟಿ ಚಾರ್ಜನ್ನು ಕೊಡದೆ ಇರತಕ್ಕದ್ದು. ಈ ಒಂದು ಕಾರಣದಿಂದ ಸರ್ಕಾರದವರು ಪಂಚಾಯಂತಿಯವರು ರಿಪೇರಿ ಚಾರ್ಜಸ್ ಕೊಡಬೇಕಾಗಿಲ್ಲ, ಎಂದು ನಿಯಮಾವಳಿಯನ್ನು ರಿಲ್ಯಾಕ್ಸ್ ಮಾಡಿದ್ದಾರೆ, ಹಿಂದೆ ಯಾವ ಪಂಚಾಯತಿಯವರು ಹತ್ತು ಪರ್ಸೆಂಟ್ ವಂತಿಗೆಯನ್ನು ಕೊಟ್ಟಿದ್ದರೋ ಅಂಥವರು ಹೊಸದಾಗಿ ವಂತಿಗೆಯನ್ನು ಕೊಡಬೇಕಾಗಿಲ್ಲ ಸರ್ಕಾರದವರೇ ಇದರ ಬಗ್ಗೆ ಪೂರ್ಣ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾರೆನ್ನುವ ಮಾತನ್ನು ಹೇಳಿದ್ದಾರೆ. ಈ ದಿಸೆಯಲ್ಲಿ ನಾನು ಹೇಳುವುದೇನೆಂದರೆ, ಸರ್ಕಾರದ ಸಿಬ್ಬಂದಿ ಏನು ಇದೆ, ಅದನ್ನು ಇನ್ನೂ ಚುರುಕುಗೊಳಿಸಬೇಕು. ನಮ್ಮ ತಾಲ್ಲೂಕಿನಲ್ಲಿ ಡಿಫಂಕ್ಟ ಆಗಿರತಕ್ಕ ಯಾವ ಯೋಜನೆಗಳನ್ನು ತಗೆದುಕೊಳ್ಳುತ್ತಿಲ್ಲ ತೆಗೆದುಕೊಳ್ಳಬೇಕು ಎಂದು ನಾನು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿಯೂ ಹೇಳುತ್ತಿದ್ದೇನೆ, ಅಧಿಕಾರಿಗಳೂ ಸಹ ಮಾಡುತ್ತೇವೆಂದು ಹೇಳುತ್ತಿದ್ದಾರೆಯೇ ಹೊರತು ಈ ದಿಸೆಯಲ್ಲಿ ಅವರೂ ಸಹ ಮುಂದು ಹೋಗುವುದಕ್ಕೆ ಸಾಧ್ಯವಾಗಿಲ್ಲ. ಇದರ ಸಂಬಂಧವಾಗಿ ನಾನು ಮುಖ್ಯ ಇಂಜನಿಯರ್ ಅವರಿಗೂ ಸಹ ಪತ್ರ ಬರೆದಿದ್ದೇನೆ, ಆದರೂ ಕೂಡ ಕೆಲಸಗಳು ಆಗಿಲ್ಲ. ಸರ್ಕಾರದವರು ಇದರ ಬಗ್ಗೆ ಸರಿಯಾದಂಥ ಸಮೀಕ್ಷೆ ನಡೆಸಿ, ಪರಿಶೀಲನೆ ಮಾಡಬೇಕಾಗುತ್ತದೆ. ತಾವು ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟರಮಟ್ಟಿಗೆ ಪ್ರಗತಿಯಾಗಿದೆ ಎನ್ನುವುದನ್ನು ಯಶಸ್ವಿಯಾಗಿ ನೋಡಿಕೊಂಡು ಹೋದಲ್ಲಿ ನೂರಕ್ಕೆ ನೂರರಷ್ಟು ಇದರಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಐ.ಆರ್.ಡಿ.ಪಿ. ಮತ್ತು ಎಸ್.ಎಫ್.ಡಿ.ಎ. ಗಳ ಬಗ್ಗೆ ನನ್ನ ವೈಯುಕ್ತಿಕ ಅನುಭವವನ್ನು ಹೇಳುವುದಾದರೆ, ಈ ಎರಡು ಸ್ಕೀಂಗಳನ್ನು ಈ ಇಲಾಖೆಗೆ ವಹಿಸಿರತಕ್ಕದ್ದು ಸೂಕ್ತವಲ್ಲ ಎನ್ನುವುದು ನನ್ನ ಭಾವನೆ. ಇದಕ್ಕೆ ಕಾರಣವಾದರೂ ಕೂಡ ಇಷ್ಟೆ. ಇದರಲ್ಲಿ ಅಗ್ರಿಕಲ್ಚರಲ್ ಅಲೈಡ್ ಸಬ್ಜೆಕ್ಟ್ಸ್ ಇರುವುದರಿಂದ ಇದನ್ನು ವ್ಯವಸಾಯದ ಇಲಾಖೆಗೆ ವಹಿಸುವುದು ಸೂಕ್ತ ಎಂದು ನಾನು ಈ ಸಂಧರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಐ.ಆರ್.ಡಿ.ಪಿ. ಸ್ಕೀಂನಲ್ಲಿ ಹೋದ ವರ್ಷ ನಮ್ಮ ಜಿಲ್ಲೆಯ ೭ ತಾಲ್ಲೂಕುಗಳಲ್ಲಿ ೬ ತಾಲ್ಲೂಕುಗಳಲ್ಲಿ ಕೆಲಸ ಕಾರ್ಯಗಳನ್ನು ಮಾಡಬೇಕು ಎಂದು ಆಯ್ಕೆ ಮಾಡಿದರು. ಮಾರ್ಚಿ ತಿಂಗಳಲ್ಲಿ ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಾಗ ಈ ಯೋಜನೆಗಳ ಬಗ್ಗೆ ಜಿಲ್ಲಾಧಿಕಾರಿಗಳೊಂದಿಗೇ ಆಗಲಿ, ಜಿಲ್ಲೆಯ ಶಾಸಕರೊಂದಿಗೇ ಆಗಲೀ, ಚರ್ಚೆ ಮಾಡೋಣ ಎನ್ನತಕ್ಕ ಮನಂತೆ, ಅಭಿಮಾನ ಕೂಡ ಇವರಿಗೆ ಬರಲಿಲ್ಲ. ಆದ್ದರಿಂದ ಇದರಲ್ಲಿ ಒದಗಿಸಿದ್ದ ಹಣವನ್ನು ಮಾರ್ಚ್ ೩೧ರೊಳಗೆ ಸರಿಯಾದ ತಿಳುವಳಿಕೆ ಅಧಿಕಾರಿಗಳಿಗೆ ಇಲ್ಲದೆ ಇದ್ದುದರಿಂದ ಒಂದು ಪೈಸೆ ಡಿಸ್ಬರ್ಸ್ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಈ ಮಾತನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇದರ ಬಗ್ಗೆ ತಾವು ಒಂದು ವಿಚಾರಣೆ ಮಾಡಿಸಿ, ಇದಕ್ಕೆ ಯಾವ ಯಾವ ಅಧಿಕಾರಿಗಳು ಜವಾಬ್ದಾರಿ ಎನ್ನುವುದನ್ನು ನೋಡಬೇಕು, ನನ್ನ ಮಟ್ಟಿಗೆ ತಾವೇ ಇದಕ್ಕೆ ಹೆಚ್ಚಿಗೆ ಜವಾಬ್ದಾರಿ ಎಂದು ಖಂಡತುಂಡವಾಗಿ ಹೇಳುತ್ತೇನೆ. ಈ ಸ್ಕೀಂನಲ್ಲಿ ಮಂಡ್ಯ ಜಿಲ್ಲೆಗೆ ಸುಮಾರು ೪೫ ಲಕ್ಷ ರೂಪಾಯಿಗಳು ಸ್ಯಾಂಕ್ಷನ್ ಆಗಿ, ಮಾರ್ಚ್ ೩೧ ರೊಳಗೆ ಒಂದು ಪೈಸೆಯನ್ನು ಪಡೆಯುವುದಕ್ಕೆ ಸಾಧ್ಯವಾಗಿಲ್ಲ. ಈಚೆಗೆ ಮಂಡ್ಯ ಜಿಲ್ಲೆಗೆ ಸಬ್ಸಿಡಿ ಭಾಗ ಐದು ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ ಅದೂ ೨೦ ಲಕ್ಷ ರೂಪಾಯಿಗಳನ್ನು ಕೊಡುವ ಕಡೆ. ೪೫ ಲಕ್ಷ ರೂಪಾಯಿಗಳು ಮಂಜೂರಾದ ಕಡೆ ೧೦–೧೫ ಲಕ್ಷ ರೂಪಾಯಿಗಳನ್ನು ಡಿಸ್ಬರ್ಸ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ, ಮೊನ್ನೆ ತಾನೆ, ನಾನು ಸಂಬಂಧಪಟ್ಟ ಕಮಿಷನರ ಜೊತೆಗೆ ಮಾತನಾಡಿ ಕೇಳಿಕೊಂಡಾಗ ಅವರು ಇದರಲ್ಲಿ ಸ್ವಲ್ಪ ತೊಡಕುಗಳು ಇವೆಯೆಂದು ಹೇಳಿದರು. ಇಂಥ ತೊಡಕುಗಳನ್ನು ಬಿಡಿಸಬೇಕು ಮತ್ತು ಇವತ್ತು ಸಾಯಂಕಾಲ ಐದು ಗಂಟೆಯೊಳಗಾಗಿ, ಮಂಡ್ಯ ಜಿಲ್ಲೆಗೆ ಸಬ್ಸಿಡಿ ಭಾಗವನ್ನು ಕೊಡುವುದಕ್ಕೆ ಆಕ್ಷನ್ ತೆಗೆದುಕೊಳ್ಳಬೇಕು ದಯಮಾಡಿ ತಾವು ಫೋನ್ ಮಾಡಿಯಾದರೂ ಸಹ ಕೂಡಾ ಅಡ್ಮಿನಿಸ್ಟ್ರೇಟರ್ ಅವರಿಗೇ ಆಗಲಿ ಜಿಲ್ಲಾಧಿಕಾರಿಗಳಿಗಾಗಲೀ ಇದರ ಬಗ್ಗೆ ಆದೇಶ ಕೊಡಬೇಕು. ತಾವು ನಮ್ಮ ಜಿಲ್ಲೆಗೆ ಮಂಜೂರ್ಮಾಡಿರತಕ್ಕ ಹಣವನ್ನು ವಿಲೇವಾರಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು.

ಸ್ವಾಮಿ, ನಾನು ಪ್ರತಿಸಾರಿಯೂ ಖಂಡತುಂಡವಾಗಿ ಹೇಳುತ್ತಿದ್ದೇನೆ. ಈ ಸಾರಿಯೂ ಇದೇ ಅನಾದರಣೆ ಮುಂದುವರಿಯುವುದಾದರೆ ಮಾನ್ಯ ಮಂತ್ರಿಯವರ ಕಛೇರಿಯ ಮುಂದೆ ಅನ್ನ ಸತ್ಯಾಗ್ರಹ

ವನ್ನು ನಾನು ಖಂಡಿತವಾಗಿಯೂ ಮಾಡುತ್ತೇನೆ. ಮಾನ್ಯ ಸಚಿವರು ಇನ್ನು ಪಂಚಾಯತ್ ರಾಜ್ಯ ಮಂತ್ರಿಗಳಾಗಿ ಮುಂದುವರಿಯಲಾರರು ಎಂದು ನಾನು ಅಂದುಕೊಂಡಿದ್ದೇನೆ. ಏಕೆಂದರೆ, ನೀವು ಈ ಖಾತೆಯನ್ನು ಬಿಟ್ಟುಬಿಡಿ ಎಂದು ಕೇಳಿಕೊಂಡಿದ್ದೇನೆ. ಆದ್ದರಿಂದ ಇವರು ಇನ್ನು ಅದೇ ಸ್ಥಾನದಲ್ಲಿ ಮುಂದುವರಿಯಲಾರರು.

ಅಧ್ಯಕ್ಷರು.— ನಾನು ಪ್ರತಿಯೊಂದು ಸಾರಿಯೂ ಗಂಟೆ ಬಾರಿಸುತ್ತಾ ಹೋಗುತ್ತಿರುವುದು, ಮಾನ್ಯ ಸದಸ್ಯರು ಮಾತನಾಡುತ್ತಲೇ ಇರುವುದಾದರೆ ಅದು ಅಷ್ಟು ಚೆನ್ನಾಗಿ ಕಾಣುವುದಿಲ್ಲ.

ಶ್ರೀ ಹೆಚ್. ಡಿ. ಚೌಡಯ್ಯ.— ಸ್ವಾಮಿ, ನಾನು ಮಾತನಾಡಬೇಕಾದ್ದು ಇನ್ನೂ ಬಹಳಷ್ಟು ವಿಷಯಗಳಿದ್ದುವು, ಆದರೆ ಈಗಾಗಲೇ ೨-೩ ಸಾರಿ ಗಂಟೆ ಬಾರಿಸಿರುವುದರಿಂದ ಅದಕ್ಕೆ ನಾನು ತಲೆಬಾಗಬೇಕಾಗಿದೆ. ಕೊನೆಯದಾಗಿ ಒಂದು ಮಾತು ಹೇಳುವುದಾದರೆ ಶೇಕಡ ೮೦ರಷ್ಟು ಜನರ ಭವಿಷ್ಯವನ್ನು ನಿರ್ಮಾಣ ಮಾಡತಕ್ಕ ಸಾಮುದಾಯ ಅಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳು ಏನಿವೆ ಇವು ಚುರುಕಾಗಿನಡೆಯಬೇಕು. ಇದಾಗಬೇಕಾದರೆ ತಾಲ್ಲೂಕು ಬೋರ್ಡ್‌ನವರಿಗೆ ಮತ್ತು ಪಂಚಾಯಿತಿಯವರಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕು. ಈ ವಿಚಾರದಲ್ಲಿ ಮಾನ್ಯ ಮಂತ್ರಿಯವರಿಗೆ ನಿಜವಾಗಿ ಆಸಕ್ತಿ ಇದ್ದರೆ ತಮ್ಮ ಉತ್ತರದಲ್ಲಿ ತಿಳಿಸಬೇಕು.

ಅಧ್ಯಕ್ಷರು.— ನಾನು ಗಂಟೆ ಬಾರಿಸಿದರೂ ತಾವು ಲೆಕ್ಕಕ್ಕೆ ತೆಗೆದುಕೊಳ್ಳದೆ ಈ ರೀತಿ ಮಾತನಾಡುತ್ತಾ ಹೋಗುವುದಾದರೆ, ನನ್ನ ಮಾತಿಗೆ ಬೆಲೆಯೇ ಇಲ್ಲದಂತಾಗುತ್ತದೆ. ತಾವು ದಯವಿಟ್ಟು ತಮ್ಮ ಭಾಷಣವನ್ನು ಮುಗಿಸಬೇಕು. ಇನ್ನು ಮುಂದೆ ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಮಾತನಾಡಲು ೧೫ ನಿಮಿಷಗಳ ಕಾಲಾವಕಾಶವನ್ನು ಕೊಡುತ್ತೇನೆ. ಅವರು ಅಷ್ಟರಲ್ಲಿ ಮುಗಿಸದಿದ್ದರೆ, ಅವರನ್ನು ಕುಳಿತುಕೊಳ್ಳಿ ಎಂದು ಹೇಳಿ ಇನ್ನೊಬ್ಬ ಸದಸ್ಯರ ಹೆಸರನ್ನು ಕರೆಯುತ್ತೇನೆ. ಇನ್ನೂ ಬಹಳ ಜನ ಮಾನ್ಯ ಸದಸ್ಯರು ಮಾತನಾಡುವವರಿರುವುದರಿಂದ ನಾನು ಹೇಳುವುದಾದರೂ ಇಷ್ಟೆ. ೨ ಗಂಟೆಯೊಳಗಾಗಿ ಎಲ್ಲ ಮಾನ್ಯ ಸದಸ್ಯರು ಮಾತನಾಡಿದ್ದು ಮುಗಿಯಬೇಕು. ಮತ್ತು ೩ ಗಂಟೆಯೊಳಗೆ ಮಾನ್ಯ ಸಚಿವರ ಉತ್ತರ ಮುಗಿಯಬೇಕು. ಅನಂತರ ಇನ್ನೊಂದು ಡಿಮ್ಯಾಂಡನ್ನು ತೆಗೆದುಕೊಳ್ಳಬೇಕಾಗಿದೆ.

ಶ್ರೀ ಹೆಚ್. ಡಿ. ಚೌಡಯ್ಯ.— ಇನ್ನು ಹೆಚ್ಚು ಮಾತನಾಡದೆ ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI G. B. SHANKAR RAO (Hirekerur).— Mr. Speaker, Sir, there is one important point which I want to touch is regarding sinking of borewells in the entire State. This was a problem which was discussed last year, and agitated many of us. This time, I think the Government would take steps well in time and should plan ahead and see that problems which are very important affecting nearly 80 per cent of our rural population should be solved on a war footing basis. But, to my surprise, much head-way is not made in these days. I am happy that very recently, the Government has opened the eyes and started the works, because the Demands of the Department came before the House and the Members would raise the same on the floor of the House. The Government of India is giving 100 percent assistance for drilling borewells. They have indicated that they are going to give assistance to the State Governments to provide borewells to those villages where there is no drinking water facilities at all. But the task of the State Government is to provide the hand pumps which require at the time of sinking. The Chief Engineers of both North and South Divisions should have been

specifically instructed because they are given intructions to these people to purchase machines, spare parts and other things which are required to complete the schemes. I do not know why the Chief Engineer of North Division has not taken this matter seriously. Instead of purchasing and procuring hand pumps wherever they are available, he has invited tenders and along with it invited troubles also. I have written to the Government three months back that the Chief Engineer is not taking the matters seriously and also requested to see that the hand pumps and other things are purchased well in time. But till today, they have not been able to procure the hand pumps. Now they have started to purchase hand pumps. But they are of absolutely bad quality. The Government has sanctioned a scheme providing mechanics to go round the district wherever the hand pumps are out of order to get them repaired. They have not only to repair, but to see that they are well maintained. They have supplied the numbers as 20 thousand hand pumps but the number of hand pumps repaired comes to about 20,700 according to the information. I do not know how these figures are reconciled. The number of borewells drilled so far is about 20 thousand. In the course of seven years, I do not know how the number will be 20.700? Whether all the 20 thousand pumps have gone out of order? Even if we believe that, we have to think of the quality of pumps that the department has procured. The Government should see that the pumps are well maintained and obtain the guarantee of proper functioning of pumps at least for one or two years. By my experience, I should tell the House that no where in the village people are satisfied with the functioning of these hand pumps fitted by these contractors. Once in a week or once in a month it should be checked.

The tragedy of it all is that the amount of crores of rupees spent will be a sheer waste if the water that is necessary for the people in the rural areas is not made available even in summer. We expected rains, which have failed so far. ತಾವು ಚೀಫ್ ಇಂಜಿನಿಯರ್‌ಗೆ ಆದೇಶವನ್ನು ಕೊಟ್ಟಿದ್ದೀರಿ. ಎಲ್ಲೆಲ್ಲಿ ಈ ಪಂಪುಸೆಟ್ಟುಗಳಿಗೆ ಸಂಬಂಧಪಟ್ಟ ಮಿಷಿನ್‌ಗಳಿಗೆ ಬೇಕಾದಂತಹ ಸ್ಪೇರ್ ಪಾರ್ಟ್ಸ್ ಏನಿದೆ ಅದನ್ನು ಸ್ಟೋರ್ ಪರ್ಚೇಸ್ ಡಿಪಾರ್ಟ್‌ಮೆಂಟ್ ಮುಖಾಂತರ ಅಥವಾ ತಾವೇ ಸ್ವತಹ ಕೊಂಡುಕೊಳ್ಳಬಹುದೆಂದು ಹೇಳಿದ್ದೀರಿ. ಆದ್ದರಿಂದ ಈಗ ನಮ್ಮ ರಾಜ್ಯದಲ್ಲಿ ಸಾಕಷ್ಟು ಒಳ್ಳೆಯ ಹ್ಯಾಂಡ್ ಪಂಪುಗಳನ್ನು ತಯಾರು ಮಾಡುತ್ತಾರೆ. ಆದ್ದರಿಂದ ಈ ಇಲಾಖೆಯವರು ಎಲ್ಲೆಲ್ಲಿ ಹ್ಯಾಂಡ್‌ಪಂಪ್ ಹಾಗೂ ಸ್ಪೇರ್ ಪಾರ್ಟ್ಸ್‌ಗಳನ್ನು ತಯಾರು ಮಾಡುತ್ತಾರೆ ಅದನ್ನು ಇಲಾಖೆಯವರು ಕೊಂಡುಕೊಂಡು ಎಲ್ಲೆಲ್ಲಿ ಹ್ಯಾಂಡ್‌ಪಂಪ್‌ಗಳನ್ನು ಹಾಕಬೇಕೋ ಅಲ್ಲಲ್ಲಿ ಇವುಗಳನ್ನು ಅಳವಡಿಸಬೇಕು. ಪಂಪುಸೆಟ್ಟುಗಳು ಕೆಟ್ಟುಹೋಗಿದ್ದ ಪಕ್ಷದಲ್ಲಿ ಅಂಥವುಗಳಿಗೆ ಬೇಕಾದ ಸ್ಪೇರ್ ಪಾರ್ಟ್‌ಗಳನ್ನು ಇಲಾಖೆಯವರು ಕೊಂಡುಕೊಂಡು ಕೆಟ್ಟುಹೋಗಿರತಕ್ಕ ಪಂಪುಸೆಟ್ಟುಗಳನ್ನು ರಿಪೇರಿ ಮಾಡಿಸಿ ಗ್ರಾಮಾಂತರ ಪ್ರದೇಶದ ಜನಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವುದು ಬಹಳ ಮುಖ್ಯವಾದುದು. ಸರ್ಕಾರದವರು ಹಾಗೂ ಇಂಜಿನಿಯರ್‌ಗಳು ಇಂತಹ ಕಡೆಯೇ ಪಂಪುಸೆಟ್ಟು ಹಾಗೂ ಸ್ಪೇರ್ ಪಾರ್ಟ್

ಗಳನ್ನು ಕೊಂಡುಕೊಳ್ಳಬೇಕೆಂದು ಹೇಳಿದ್ದರೂ ಕೂಡ, ಅವುಗಳನ್ನು ಬಿಟ್ಟು ಎಲ್ಲಿ ಒಳ್ಳೆಯ ಖಾತ್ರಿಯಾದ ಪಂಪುಸೆಟ್ಟು ಹಾಗೂ ಬಿಡಿಭಾಗಗಳನ್ನು ತಯಾರು ಮಾಡುತ್ತಾರೆ ಅಲ್ಲಿಂದ ಕೊಂಡುಕೊಳ್ಳುವುದಕ್ಕೆ ಆದೇಶ ಕೊಡಬೇಕು.

ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ೪ ಕೋಟಿ ರೂಪಾಯಿಗೂ ಮಿಕ್ಕ ಹಣವನ್ನು ಒದಗಿಸಿದ್ದಾರೆ. ಈ ಹಣದಲ್ಲಿ ಒಂದೊಂದು ಕೊಳವೆ ಬಾವಿಗಳಿಗೆ ೧೦-೧೨ ರೂಪಾಯಿ ಖರ್ಚು ಮಾಡಿ ತೆಗೆದು ಮೇಲೆ ಅದಕ್ಕೆ ಪಂಪುಸೆಟ್ಟುಗಳನ್ನು ಅಳವಡಿಸಬೇಕಾಗುತ್ತದೆ. ಇಲ್ಲದೇಹೋದರೆ ಅದು ನಿರುಪಯುಕ್ತವಾಗುತ್ತದೆ ಹಾಗೂ ಹಣ ವ್ಯರ್ಥವಾಗುತ್ತದೆ. ಈ ಕಡೆ ಸರ್ಕಾರ ತಮ್ಮ ತೀವ್ರ ಗಮನವನ್ನು ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆದ್ಯತೆಯ ಮೇರೆಗೆ ಎಲ್ಲಾ ಕೆಲಸಗಳನ್ನು ಬದಿಗೊತ್ತಿ ಕುಡಿಯುವ ನೀರಿನ ಸೌಲಭ್ಯದ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ. ಈ ಸಾರಿ ದುರ್ದೈವದಿಂದ ಮಳೆ ಸಕಾಲದಲ್ಲಿ ಬಂದಿಲ್ಲ. ಬೇಸಿಗೆ ಮುಂದುವರಿಯುತ್ತಿದೆ. ಆದ್ದರಿಂದ ಈ ಬಗ್ಗೆ ಆದ್ಯ ಗಮನಕೊಡಬೇಕೆಂದು ಕೇಳುತ್ತೇನೆ. ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಬೇಕು. ಈ ಸಮಸ್ಯೆ ಬಹಳ ತೀವ್ರವಾದ ಸಮಸ್ಯೆ. ಹೋದ ಸಲ ಅನೇಕ ಮಾನ್ಯ ಸದಸ್ಯರು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಗಮನ ಸೆಳೆಯುವ ಸೂಚನೆಯನ್ನು ತಂದಿದ್ದರು. ಮಧುಗಿರಿ ಮತ್ತು ಕೊರಟಗೆರೆ ಈ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವ ಬಹಳಜಾಸ್ತಿ ಇದೆಯೆಂದು ಹೇಳಿದ್ದರು. ಇದೇ ರೀತಿ ರಾಜ್ಯದ ನಾನಾ ಕಡೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಕಠಿಣವಾಗಿದೆ. ಅದಕ್ಕಾಗಿ ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದು ಏನೆಂದರೆ ಈ ಒಂದು ಸಮಸ್ಯೆಯನ್ನು ಗಮನ ಸೆಳೆಯುವ ಸೂಚನೆಯ ಮುಖಾಂತರ ಸರ್ಕಾರದ ಗಮನಕ್ಕೆ ತರಬೇಕು ಎನ್ನುವ ಭಾವನೆ ಸರ್ಕಾರಕ್ಕೆ ಇರಕೂಡದು. ಸರ್ಕಾರದವರು ತಾವೇ ತಾವಾಗಿ ಸಮಸ್ಯೆಯನ್ನು ಅರಿತು ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಪಂಪುಸೆಟ್ಟುಗಳ ರಿಪೇರಿ ಮಾಡಿದ್ದೇವೆ ರಿಪೇರಿ ಕೆಲಸ ಆಗಿದೆ ಎಂದು ಹೇಳಿದರೆ ನನಗೆ ಅರ್ಥವಾಗುವುದಿಲ್ಲ. ಪ್ರತಿಯೊಂದುಜಿಲ್ಲೆಯಲ್ಲಿಯೂ ಮೊಬೈಲ್ ವ್ಯಾನ್ ಇದೆ. ಅವರು ಜಿಲ್ಲೆಯಲ್ಲಿ ಎಲ್ಲಾ ಕಡೆಗಳಲ್ಲಿಯೂ ತಿರುಗಾಡುತ್ತಾರೆ ಸುಮಾರು ೨೦ ಸಾವಿರ ಬಾವಿಗಳನ್ನು ರಿಪೇರಿ ಮಾಡಿದ್ದಾರೆ ಎಂದು ಹೇಳಿದ್ದಾರೆ. ಆದರೆ ನನ್ನ ಕ್ಷೇತ್ರದಲ್ಲಿ ನನಗೆ ಗೊತ್ತಿರುವ ಹಾಗೆ ಯಾವಾಗ ವ್ಯಾನು ಬಂದು ಯಾವಾಗ ಬಾವಿಗಳ ಪಂಪುಸೆಟ್ಟುಗಳನ್ನು ರಿಪೇರಿ ಮಾಡಿದರೋ ನನಗಂತೂ ಗೊತ್ತಿಲ್ಲ. ಸುಮ್ಮನೆ ಈ ಪುಸ್ತಕದಲ್ಲಿ ಬರೀ ಅಂಕಿ ಅಂಶಗಳನ್ನು ಮಾತ್ರ ತೋರಿಸಿದ್ದಾರೆ. ಸುಮ್ಮನೆ ಬರೀ ಅಂಕಿ ಅಂಶಗಳನ್ನು ತೋರಿಸಿದರೆ ಪ್ರಯೋಜನವಿಲ್ಲ. ಅದರಿಂದ ಜನಗಳಿಗೆ ಸಮಾಧಾನವಾಗುವುದಿಲ್ಲ. ಅವರಿಗೆ ಕುಡಿಯುವುದಕ್ಕೆ ನೀರು ಕೊಟ್ಟರೆ ಸಮಾಧಾನವಾಗುತ್ತದೆ. ಯಾರೋ ಕೆಳಗಿನವರು ಏನೋ ಹೇಳುತ್ತಾರೆ ಸಮಸ್ಯೆ ಅದರಿಂದ ಬಗೆಹರಿಯಿತು ಎಂದು ಹೇಳುವುದಕ್ಕಾಗುವುದಿಲ್ಲ. ಇದರ ಬಗ್ಗೆ ಸರ್ಕಾರದವರು ತಮ್ಮ ಗಮನವನ್ನು ತೀವ್ರವಾಗಿ ಹರಿಸಬೇಕು. ಆದಷ್ಟು ಮಟ್ಟಿಗೆ ಕೊಳವೆ ಬಾವಿಗಳನ್ನು ತೆಗೆಸಿ ಜನಗಳಿಗೆ ನೀರಿನ ಸೌಲಭ್ಯವನ್ನು ಒದಗಿಸಿ ಕೊಡಬೇಕು. ಎನ್.ಆರ್.ಡಬ್ಲ್ಯು. ಯೋಜನೆಯ ಮುಖಾಂತರ ಜನಗಳಿಗೆ ನಲ್ಲಿ ನೀರನ್ನು ಒದಗಿಸುವ ವ್ಯವಸ್ಥೆ ಮಾಡಬೇಕು. ಈ ಯೋಜನೆಯಲ್ಲಿ ಗ್ರಾಮಗಳಿಗೆ ನೀರನ್ನು ಒದಗಿಸಬೇಕಾದರೆ ಆಯಾ ಸಂಬಂಧಪಟ್ಟ ಪಂಚಾಯತಿಯವರು ತಮ್ಮ ಪಾಲಿನ ಹಣವನ್ನು ಕೊಡಬೇಕಾಗುತ್ತದೆ. ಈ ಯೋಜನೆಯನ್ನು ತೀವ್ರವಾಗಿ ಕಾರ್ಯಗತ ಮಾಡಬೇಕಿದ್ದರೆ ಮೊದಲು ಪಂಚಾಯತಿಯವರು ಎಷ್ಟು ಕಾಂಟ್ರಿಬ್ಯೂಷನ್ ಕೊಟ್ಟಿದ್ದರೋ ಅಷ್ಟಕ್ಕೇ ಸೀಮಿತವಾಗಬೇಕು. ಒಂದು ವೇಳೆ ಎಸ್ಟಿಮೇಟ್ ರಿವೈಸ್ ಆದರೂ ಕೂಡ ಸರ್ಕಾರದ ನೀತಿಯ ಪ್ರಕಾರ ಹೆಚ್ಚುವರಿಯಾದಂತಹ ಹಣವನ್ನು ಸರ್ಕಾರದವರೇ ಕೊಡಬೇಕಾಗುತ್ತದೆ. ಆದ್ದರಿಂದ ಸರ್ಕಾರಕ್ಕೆ ಹೆಚ್ಚು ಖರ್ಚು ಬರುತ್ತದೆ ಆದ್ದರಿಂದ ಆದಷ್ಟು ಜಾಗ್ರತೆ ಈ ಯೋಜನೆಯನ್ನು ಕಾರ್ಯಗತ ಮಾಡಬೇಕು. ಹಿಂದಿನ ವರ್ಷ ಮಾನ್ಯ ಮಂತ್ರಿಗಳು ಹೇಳಿದ್ದರು ಪ್ರಜಾಪ್ರಭುತ್ವದ ತಳಹದಿಯ ಮೇಲೆ ಈ ಸ್ಥಳೀಯ ಸಂಸ್ಥೆಗಳನ್ನು ಕಾನೂನು ಪ್ರಕಾರ ವ್ಯವಸ್ಥೆ ಮಾಡಿದ್ದೇವೆ ಎಂದು. ಆದರೆ ಇದುವರೆಗೂ ಆ ಸಂಸ್ಥೆಗಳು ಕೆಲಸ ಮಾಡಿರುವ ರೀತಿಯನ್ನು ನೋಡಿದರೆ ಯಾರಿಗೂ ತೃಪ್ತಿಯಿಲ್ಲ. ನಾವು ಪಂಚಾಯಿತಿಗಳನ್ನು ರಚನೆ ಮಾಡಿದ್ದೇವೆ. ಅಲ್ಲಿ ಏನೂ ಕೆಲಸವನ್ನು ಮಾಡಿಲ್ಲ. ಸೆಕ್ರೆಟರಿಗಳಿಗೆ ಸಂಬಳ ಕೊಡುವುದಕ್ಕೂ ಸಹಾ ದುಡ್ಡು ಇರುವುದಿಲ್ಲ. ಹೀಗಿರುವಾಗ ಟ್ಯಾಕ್ಸ್ ವಸೂಲು ಆಗುವುದಿಲ್ಲ. ಆದ್ದರಿಂದ ಪಂಚಾಯಿತಿಗಳು ಹೇಗೆ ಕೆಲಸ ಮಾಡುತ್ತವೆ ? ಇದನ್ನು ದೀರ್ಘವಾಗಿ ಆಲೋಚನೆ ಮಾಡಬೇಕು. ಪ್ರಜಾಪ್ರಭುತ್ವದ ಮೂಲಕ ತಾಲ್ಲೂಕು ಬೋರ್ಡು ಮತ್ತು

ಪಂಚಾಯಿತಿ ಸರಿಯಾಗಿ ಕೆಲಸ ಮಾಡಬೇಕಾದರೆ ಅವುಗಳಿಗೆ ಸಾಕಷ್ಟು ಅಧಿಕಾರ ಬೇಕು ಹಾಗೂ ಹಣ ಬೇಕು. ಹಾಗೂ ಸಾಮರ್ಥ್ಯವೂ ಬೇಕು. ಪ್ರಜಾಪ್ರಭುತ್ವದ ಅಂಗ ಸಂಸ್ಥೆಗಳು ಎಂದು ಕೆಲಸ ನಡೆಯಲಿ ಬಿಡಲಿ ಸುಮ್ಮನೆ ಸಮಾಧಾನ ಪಟ್ಟುಕೊಂಡರೆ ಹೇಗಾಗುತ್ತದೆ ? ೧೯೫೯ನೇ ಇಸವಿಯಲ್ಲಿ ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳನ್ನು ರಚನೆ ಮಾಡತಕ್ಕಂತಹ ಮತ್ತು ಅವುಗಳಿಗೆ ಅಧಿಕಾರ ಕೊಡತಕ್ಕಂತಹ ಒಂದು ಆಕ್ಟನ್ನು ಪಾಸು ಮಾಡಿದ್ದೇವೆ. ಇವು ಆ ಹೊತ್ತು ಯಾವ ಸ್ಥಿತಿಯಲ್ಲಿದ್ದವೋ ಇವತ್ತೂ ಅದೇ ಸ್ಥಿತಿಯಲ್ಲಿ ಇವೆ. ಪಂಚಾಯಿತಿ ಹಾಗೂ ತಾಲ್ಲೂಕು ಬೋರ್ಡಿನಲ್ಲಿರತಕ್ಕ ಹಣ ಬಹಳ ಕಡಿಮೆ. ಅವು ದೊಡ್ಡ ಸಂಸ್ಥೆಗಳು. ಸರ್ಕಾರದವರು ಏನು ಹಣ ಸಹಾಯ ಮಾಡುತ್ತಾರೆ ಅದರ ಮೇಲೆ ಅವು ಕೆಲಸ ಮಾಡುತ್ತವೆ. ಆದ್ದರಿಂದ ಅವು ನಿರೀಕ್ಷಿತ ಕೆಲಸ ಮಾಡುವುದಕ್ಕಾಗುವುದಿಲ್ಲ. ಅವುಗಳಿಗೆ ಅಡ್‌ಹಾಕ್ ಬೇಸಿಸ್‌ಮೇಲೆ ಹಣ ಕೊಡುತ್ತೇವೆಂದು ಹೇಳಿದ್ದಾರೆ. ಆ ರೀತಿ ಗ್ರಾಂಟ್ ಕೊಟ್ಟರೂ ಏನೂ ಆಗುವುದಿಲ್ಲ. ಅವುಗಳ ಆರ್ಥಿಕ ಪರಿಸ್ಥಿತಿಯನ್ನು ಬಲಪಡಿಸುವುದಕ್ಕೆ ಏನೇನು ಅವಕಾಶಗಳನ್ನು ಒದಗಿಸಿಕೊಡಬೇಕೋ ಅದನ್ನು ಕಾನೂನು ರೀತ್ಯ ಒದಗಿಸಿಕೊಡಬೇಕು ಇಷ್ಟು ಹೇಳಿ ಮುಂದಿನ ಬೇಸಿಗೆ ಬರುವ ಸಮಯಕ್ಕಾದರೂ ಈ ಮನೆಯ ಸದಸ್ಯರು ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಗಮನ ಸೆಳೆಯುವ ಸೂಚನೆಯನ್ನು ತರತಕ್ಕಂತಹ ಹವ್ಯಾಸಕ್ಕೆ ಅವಕಾಶ ಕೊಡದಹಾಗೆ ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

೧-೦೦ ಪಿ.ಎಂ.

† ಶ್ರೀ ಕೆ. ನಾರಾಯಣಪ್ಪ (ದೇವನಹಳ್ಳಿ).—ಸ್ವಾಮಿ ಅಧ್ಯಕ್ಷರೆ, ತಮ್ಮ ಮುಖಾಂತರ ಮಂತ್ರಿವರ್ಯರ ಬೇಡಿಕೆಗಳ ಬಗ್ಗೆ ಕೆಲವು ವಿಷಯಗಳನ್ನು ಮಾತನಾಡುತ್ತೇನೆ. ಪಂಚಾಯಿತಿ ರಚನೆಯಾಗಿ ಸುಮಾರು ೨೦ ವರ್ಷಗಳಾದವು. ಸರ್ಕಾರದವರು ಈ ಗ್ರೂಪ್ ಪಂಚಾಯಿತಿಗಳಿಗೆ ಚುನಾವಣೆಗಳನ್ನು ನಡೆಸಿ ಅಧಿಕಾರ ಕೊಟ್ಟು ತಮ್ಮತಮ್ಮ ಕರ್ತವ್ಯವನ್ನು ತಾವು ನಡೆಸಿಕೊಂಡು ಹೋಗಬೇಕೆಂದು ನಿಗದಿ ಮಾಡಿ ೨೦ ವರ್ಷಗಳಾಗಿದ್ದರೂ ಕೂಡ ಕೆಲವು ಪಂಚಾಯಿತಿ ಹೆಡ್‌ಕ್ವಾರ್ಟರ್ಸ್‌ಗಳಿಗೆ ರಸ್ತೆಗಳು ಇಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದ್ದರೂ ಕೂಡ ಅವರು ಏನೂ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಕೆಲವು ಕಡೆ ಎರಡು ಪಾರ್ಟಿಗಳು ಇದ್ದು ರಸ್ತೆ ನಿರ್ಮಿಸುವುದಕ್ಕೆ ಜಮೀನನ್ನು ಬಿಟ್ಟು ಕೊಡದೇ ಜಾನುವಾರುಗಳು ಹಾಗೂ ಗಾಡಿ ವಗೈರೆಗಳು ಹೋಗುವುದಕ್ಕೆ ತೊಂದರೆಯಾಗಿದೆ. ಗೊಬ್ಬರ ಗೋಡು ಸಾಗಿಸಬೇಕಾದರೆ ತೊಂದರೆಯಾಗಿದೆ, ಬೆಳೆ ಬೆಳೆದಿದ್ದನ್ನು ತರುವುದಕ್ಕೆ ತೊಂದರೆಯಾಗಿದೆ. ಅಂತಹ ತಾಲ್ಲೂಕುಗಳಲ್ಲಿ ನಮ್ಮ ತಾಲ್ಲೂಕೂ ಒಂದು. ಕೆಲವು ಹಳ್ಳಿಗಳಲ್ಲಿ ೩೦ ವರ್ಷಗಳಾದರೂ ರಸ್ತೆ ಇಲ್ಲ, ರಸ್ತೆಯಲ್ಲಿ ದ್ರಾಕ್ಷಿಗಿಡ ಹಾಕಿರುತ್ತಾರೆ, ಓಡಾಡುವುದಕ್ಕೆ ಅವಕಾಶವಿರುವುದಿಲ್ಲ. ಈ ದೂರು ಸರ್ಕಾರಕ್ಕೂ ಬಂದಿದೆ. ವಾಹನಗಳು ಓಡಾಡಬೇಕಾದರೆ ಮನೆಗಳನ್ನು ಅಡ್ಡಲಾಗಿ ಕಟ್ಟಿರುತ್ತಾರೆ, ಅದಂ ಅಕ್ವಿಸಿಷನ್ ಆಗಿ ಹಣ ಪಡೆದು ರಸ್ತೆಗೆ ಬಿಡಬೇಕು ಎಂದು ಇದ್ದರೂ ಕೂಡ ಇನ್ನೂ ಬಿಟ್ಟಿಲ್ಲ. ಗ್ರಾಮಗಳಲ್ಲಿ ಇಂತಹ ಅನೇಕಸಮಸ್ಯೆಗಳಿವೆ. ಇಂತಹ ಸಮಸ್ಯೆಗಳು ೩೦ ವರ್ಷಗಳಾದರೂ ಬಗೆಹರಿಯಲಿಲ್ಲ, ಮತ್ತೆ ಯಾವಾಗ ಬಗೆಹರಿಸುತ್ತೀರಿ. ಇದನ್ನು ರೈತರ ಏಳಿಗೆಯ ದೃಷ್ಟಿಯಿಂದ ಹೇಳುತ್ತಿದ್ದೇನೆ. ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಮ್ಮ ಸ್ನೇಹಿತರು ಹೇಳಿದ್ದಾರೆ. ಒಂದೊಂದು ಊರಿನಲ್ಲಿ ೨-೩ ಬೋರ್‌ವೆಲ್ಸ್ ಇದೆ. ೨-೩ ಓಪನ್‌ವೆಲ್ಸ್ ಇದೆ. ಇಷ್ಟು ಇದ್ದರೂ ನೀರಿಲ್ಲ, ೫೦ ಸಾವಿರ ರೂಪಾಯಿ ಒಂದು ಊರಿನ ಕುಡಿಯುವ ನೀರಿನ ಭಾವಿಗೆ ಖರ್ಚಾಗಿದೆ. ಇಷ್ಟಾದರೂ ನೀರಿಲ್ಲ ಎನ್ನುವುದಂ ತಪ್ಪಲಿಲ್ಲ. ಇದನ್ನು ಯಾವರೀತಿ ಬಗೆಹರಿಸಬೇಕು ಎನ್ನುವುದನ್ನು ಮಾನ್ಯ ಮಂತ್ರಿಗಳು ಯೋಚನೆಮಾಡಬೇಕು. ಕೆಲವು ಕಡೆ ಪಾಠಶಾಲೆಗಳಿಲ್ಲ, ಪಾಠಶಾಲೆಗಳಿರುವ ಕಡೆ ಕಟ್ಟಡಗಳು ಬಿದ್ದು ಹೋಗಿವೆ. ಪಾಠಶಾಲೆಗಳು ಬಿದ್ದುಹೋಗಿರುವುದನ್ನು ಪಂಚಾಯಿತಿಯವರು ಸರ್ಕಾರದಿಂದ ಹಣ ಪಡೆಯಲಿಲ್ಲ ಅಥವಾ ತಾವಾದರೂ ಹಾಕಿ ಮಾಡಿಸಲಿಲ್ಲ. ದೊಡ್ಡ ದೊಡ್ಡ ರೈತರು ಇರತಕ್ಕ ಗ್ರಾಮಗಳಲ್ಲಿ ಅವರು ಕೈಯಿಂದ ಚಂದಾ ಹಾಕಿಕೊಂಡು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಬೇಕು ಎನ್ನುವ ದೃಷ್ಟಿಯಿಂದ ಮಾಡುತ್ತಾರೆ. ಬಡತನವಿರತಕ್ಕ ಹಳ್ಳಿಗಳಲ್ಲಿ ಕ್ವೋಟಾ ಕೊಡುವುದಕ್ಕೆ ಆಗುವುದಿಲ್ಲ. ಪಂಚಾಯಿತಿ ಮುಖಂಡರು, ಛೇರ್ಮನ್‌ರವರು ತಮಗೆ ಬೇಕಾದ ಗ್ರಾಮಗಳಲ್ಲಿ ಮಾಡಿಸುತ್ತಾರೆ ; ಆದುದರಿಂದ ಯಾವ ಊರಿನಲ್ಲಿ ಪಾಠಶಾಲೆಗಳು ಇಲ್ಲ, ಯಾವ ಊರಿನಲ್ಲಿ ಪಾಠಶಾಲೆಗಳಿಗೆ ಬಿಲ್ಡಿಂಗ್ ಇಲ್ಲ ಅಂಥಾ ಕಡೆ ಮೊದಲು ಮಾಡಿಸಬೇಕು ಎಂದು ಸರ್ಕಾರ ಆಜ್ಞೆ ಮಾಡಬೇಕು. ಜೊತೆಗೆ ಯಾವ ಊರಿ

ನಲ್ಲಿ ರಸ್ತೆ ಇಲ್ಲ ಅಲ್ಲಿ ತಾವು ಕೊಟ್ಟಿರತಕ್ಕಂಥ ಹಣವನ್ನು ಉಪಯೋಗಿಸಿಕೊಂಡು ಮೊದಲು ರಸ್ತೆ ಮಾಡಬೇಕು ಎಂದು ಹೇಳಬೇಕು. ಗ್ರೂಪ್ ಪಂಚಾಯಿತಿ ರಸ್ತೆ ಮಾಡಬೇಕು ಎನ್ನುವುದನ್ನು ತಾವು ಕಡ್ಡಾಯ ಮಾಡಬೇಕು. ರಸ್ತೆ ವಿಷಯದಲ್ಲಿ ಕೋರ್ಟುಗಳಿಗೆ ಹೋಗಿರುವುದನ್ನು ಜಾಗ್ರತೆ ಇತ್ಯರ್ಥವಾಗುವ ಹಾಗೆ ಸರ್ಕಾರ ಆದೇಶಕೊಡಬೇಕು. ಇವತ್ತಿನದಿವಸ ಪ್ರತಿಯೊಂದಕ್ಕೂ ರೈತನನ್ನು ಕ್ವೋಟಾ ಕೇಳುತ್ತಿದ್ದಾರೆ. ಪ್ರೈಮರಿ ಸ್ಕೂಲಿಗೆ ೪-೫ ಸಾವಿರ ರೂಪಾಯಿಗಳನ್ನು ಕೇಳುತ್ತಾ ಇದ್ದೀರಿ. ಹೈಸ್ಕೂಲಿಗೆ ೫೦ ಸಾವಿರ ರೂಪಾಯಿಗಳನ್ನು ಕೇಳುತ್ತಾ ಇದ್ದೀರಿ, ಆಸ್ಪತ್ರೆಗೆ ೨೫-೩೦ ಸಾವಿರ ರೂಪಾಯಿಗಳನ್ನು ಕೇಳುತ್ತಾ ಇದ್ದೀರಿ. ಸರ್ಕಾರದವರು ಇಷ್ಟು ಹಣವನ್ನು ಕೊಡಬೇಕು ಎಂದರೆ ರೈತ ಹೇಗೆ ಕೊಡುತ್ತಾನೆ ಎನ್ನುವುದನ್ನು ಯೋಚನೆಮಾಡಬೇಕು. ಏಕೆಂದರೆ, ಕೆಲವು ವರ್ಷ ಮಳೆ ಬರುವುದಿಲ್ಲ, ಕೆಲವು ವರ್ಷ ಬೆಳೆ ಆಗುವುದಿಲ್ಲ, ಕೆಲವು ವರ್ಷ ಬೆಳೆ ಬೆಳೆದರೂ ಬೆಲೆ ಸಿಕ್ಕುವುದಿಲ್ಲ. ಇಂತಹ ಕಾಲದಲ್ಲಿ ಸರ್ಕಾರದಿಂದ ಬರತಕ್ಕ ಎಲ್ಲಾ ನೆರವನ್ನು ಪಡೆಯಲು ರೈತ ತನ್ನ ಕ್ವೋಟಾ ಕೊಡುವುದಕ್ಕೆ ಹೇಗೆ ಸಾಧ್ಯವೆನ್ನುವುದನ್ನು ಒಂದು ನಿಮಿಷ ನಾನು ವಿವರಿಸುತ್ತೇನೆ. ನಾವೆಲ್ಲಾ ಬಡ ರೈತರ ಮಕ್ಕಳು, ರೈತರ ಕಷ್ಟ ಏನು ಎನ್ನುವುದು ತಮಗೆಲ್ಲಾ ಗೊತ್ತಿದೆ. ಆದರೂ ಕೂಡ ಸರ್ಕಾರದವರು ನಿಗಾ ಕೊಡುತ್ತಿಲ್ಲ. ಇವತ್ತು ಕೆಲವು ಗ್ರಾಮಗಳಲ್ಲಿ ಜಮೀನು ಸ್ವಲ್ಪ ಇರತಕ್ಕ ಸಣ್ಣ ರೈತರು ಜಾಸ್ತಿ ಇದ್ದಾರೆ ಬಹಳ ನಿರ್ಗತಿಕರಾಗಿದ್ದಾರೆ. ರೈತರ ಅಭಿವೃದ್ಧಿಯಾಗಬೇಕಾದರೆ ಭೂಮಿ ಇರಬೇಕು. ಭೂಮಿಗೆ ಅರ್ಜಿ ಹಾಕಿದರೆ ೨೦ ವರ್ಷವಾದರೂ ಭೂಮಿ ಸಿಕ್ಕುವುದಿಲ್ಲ. ೨೦ ವರ್ಷವಾದರೂ ಒಂದು ಮನೆ ಸಿಕ್ಕುವುದಿಲ್ಲ. ಆದುದರಿಂದ ಸರ್ಕಾರದವರು ಯಾರಿಗೆ ಸುತರಾಂ ಮನೆಯಿಲ್ಲವೋ, ಯಾರಿಗೆ ಸುತರಾಂ ಜಮೀನಿಲ್ಲವೋ ಅವರಿಗೆ ಮೊದಲು ಕೊಡುವಹಾಗೆ ಕಾನೂನು ಮಾಡಲೇಬೇಕು. ತಾವು ಮಾಡುವುದರೊಳಗೆ ಗ್ರಾಮ ಮಟ್ಟದಲ್ಲಿ ಆಕ್ರಮಿಸಿಕೊಂಡರೆ ಅಂತಹವರಿಗೆ ಪಹಣಿ ವಗೈರೆ ಜಾಗ್ರತೆ ವಿತರಣೆಯಾಗುವುದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಏಕೆಂದರೆ, ರೈತನಿಗೆ ಬೇರೆ ಉದ್ಯೋಗವಿಲ್ಲ. ಸರ್ಕಾರಿ ಅಧಿಕಾರಿಗಳಿಗೆ ಅಥವಾ ವ್ಯಾಪಾರಸ್ಥರಿಗೆ ಮತ್ತು ನೌಕರಿಯಲ್ಲಿರತಕ್ಕವರಿಗೆ ಬೇಕಾದಷ್ಟು ಕೆಲಸಕಾರ್ಯಗಳಿರುತ್ತವೆ ಬೇಕಾದಷ್ಟು ಅನುಕೂಲಗಳಿರುತ್ತವೆ. ಆದರೆ ರೈತನು ಭೂಮಿ, ಕೋಳಿ ಕುರಿ, ಹಂದಿ, ಮೇಕೆ, ಹಸು ಎಮ್ಮೆ ಇವುಗಳನೆಲ್ಲಾ ಇಟ್ಟುಕೊಂಡು ಏಳಿಗೆ ಆಗಬೇಕು. ದೊಡ್ಡ ರೈತರಿಗೆ ಹತ್ತಾರು ಸಾವಿರ ಎಕರೆ ಇರುತ್ತದೆ ಇವು ಇಲ್ಲದೇ ಇದ್ದರೂ ಪರ್ವಾಗಿಲ್ಲ. ಆದರೆ ಸಣ್ಣ ರೈತರು ಇವನ್ನೇ ಅವಲಂಬಿಸಬೇಕಾಗಿದೆ. ಕೆಲವು ಸಂದರ್ಭಗಳಲ್ಲಿ ಈ ಪ್ರಾಣಿಗಳು ಖಾಯಿಲೆ ಬಂದು ಸತ್ತು ಹೋಗುತ್ತವೆ. ಮತ್ತೆ ಕಟ್ಟುವುದಕ್ಕೆ ಜಾಗವಿಲ್ಲದೆ ತೊಂದರೆಗೆ ಒಳಗಾಗುತ್ತವೆ ; ಬರಗಾಲ ಬಂದರೆ ಹುಲ್ಲು ಇಲ್ಲದೆ, ಮೇಯುವುದಕ್ಕೆ ಜಾಗವಿಲ್ಲದೆ ಸಾಯುತ್ತವೆ. ಇಷ್ಟು ತೊಂದರೆಗಳು ರೈತನಿಗೆ ಇರುವಾಗ ಅವನು ಕ್ವೋಟಾ ಕೊಡಲು ಸಾಧ್ಯವಿಲ್ಲ. ರೈತ ಅಲ್ಪಸ್ವಲ್ಪ ಚೆನ್ನಾಗಿ ಮನೆ ಕಟ್ಟಬೇಕು ಎಂದರೆ ಹತ್ತಾರು ಸಾವಿರ ರೂಪಾಯಿಗಳು ಬೇಕಾಗುತ್ತವೆ. ಹುಲ್ಲು ಮನೆ ಕಟ್ಟಿದರೆ ಅದು ಗಾಳಿಗೆ ಹೋಗುತ್ತದೆ, ಬೆಂಕಿಗೆ ಹೋಗುತ್ತದೆ. ಬಾವಿ ತೋಡಿದರೆ ಬಿದ್ದುಹೋಗುತ್ತದೆ. ಹೀಗಿರುವಾಗ ಕ್ವೋಟಾ ಕೊಡುವುದಕ್ಕೆ ರೈತನಿಗೆ ಹೇಗೆ ಸಾಧ್ಯ. ತನ್ನ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವುದಕ್ಕೆ ಮದುವೆ ಮುಂಜಿ ಮಾಡುವುದಕ್ಕೆ ಹೇಗೆ ಸಾಧ್ಯ. ಮಕ್ಕಳು ವಯಸ್ಸಿಗೆ ಬಂದಾಗ ಎಲ್ಲರಿಗೂ ಸೌಕರ್ಯ ಕೊಡಬೇಕಾದರೆ ರೈತನಿಗೆ ಕಷ್ಟವಾಗುತ್ತದೆ ಆದುದರಿಂದ ಹಳ್ಳಿಯವರು ಕ್ವೋಟಾ ಕೊಡಬೇಕು ಎನ್ನುವುದನ್ನು ತಾವು ಕಡ್ಡಾಯವಾಗಿ ನಿಲ್ಲಿಸಬೇಕು ಎನ್ನುವುದು ನನ್ನ ಕೋರಿಕೆ. ಜೊತೆಗೆ ಪಟ್ಟಣಕ್ಕೆ ಬಂದರೆ, ಇಲ್ಲಿ ಅರ್ಜಿ ಹಾಕಿದರೆ ಒಂದು ವರ್ಷಕ್ಕೆ ಸೈಟು ಸಿಗುತ್ತದೆ. ಲೋನ್ ಸಿಗುತ್ತದೆ, ದೀಪ ಇರುತ್ತದೆ, ರಸ್ತೆ ಇರುತ್ತದೆ, ಬಸ್ ಬರುತ್ತದೆ, ಆಸ್ಪತ್ರೆ ಇರುತ್ತದೆ, ಕಾಲೇಜು ಇರುತ್ತದೆ, ಎಲ್ಲಾ ಸೌಕರ್ಯಗಳು ಇರುತ್ತವೆ. ನೌಕರಿಗೆ ಹೋಗಬೇಕಾದರೆ ಬಸ್ ಬರುತ್ತದೆ ಆಫೀಸಿಗೆ ಹೋಗಬೇಕಾದರೆ ಬಸ್ ಬರುತ್ತದೆ, ಕಾಲೇಜಿಗೆ ಹೋಗಬೇಕಾದರೆ ಬಸ್ ಬರುತ್ತದೆ. ಪಟ್ಟಣದಲ್ಲಿ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಡಿ, ಬೇಡ ಎಂದು ಹೇಳುವುದಿಲ್ಲ, ಪಟ್ಟಣ ಬೆಳೆಯಬೇಕು. ಇವರಿಗೆ ಕೊಟ್ಟಮೇಲೆ ಹಳ್ಳಿಯವರಿಗೆ ೩೦ ವರ್ಷವಾದರೂ ಈ ಸೌಲಭ್ಯಗಳನ್ನು ಕೊಟ್ಟಿಲ್ಲ. ರೈತ ಇಷ್ಟೆಲ್ಲಾ ಕಷ್ಟಪಟ್ಟು ಇಷ್ಟೆಲ್ಲಾ ಬೆಳೆ ಬೆಳೆದರೂ ಕೂಡ ಒಂದೇ ರಾತ್ರಿಗೆ ಕಳ್ಳರು ಬಂದು ದವಸಧಾನ್ಯಗಳನ್ನು ತೆಗೆದುಕೊಂಡು ಹೋಗುತ್ತಾರೆ. ಇದು ಸರ್ಕಾರದ ಗಮನದಲ್ಲಿ ಇದೆಯೋ ಎಂದು ಕೇಳುತ್ತೇನೆ. ಪಟ್ಟಣಗಳಲ್ಲಿರುವ ಜನರಲ್ಲಿ ಬಂಗಾರ ಇದ್ದರೆ ಬ್ಯಾಂಕಿನಲ್ಲಿ ಹಾಕುತ್ತಾರೆ. ದುಡ್ಡು ಇದ್ದರೆ ಬ್ಯಾಂಕಿನಲ್ಲಿ ಹಾಕುತ್ತಾರೆ, ಪಟ್ಟಣದಲ್ಲಿರುವವರಿಗೆ ಕುಂದು ಕೊರತೆಗಳು ಅಷ್ಟು ಹೆಚ್ಚಿಗೆ ಇರುವುದಿಲ್ಲ. ಹಳ್ಳಿಯಲ್ಲಿರುವವರಿಗೆ ಅನೇಕ ತೊಂದರೆಗಳಿರುವುದರಿಂದ ಅವರು ಕ್ವೋಟಾ ಕೊಡುವುದನ್ನು ಮನ್ನಾ ಮಾಡಬೇಕು, ಇದರ ಬಗ್ಗೆ ಸರ್ಕಾರ ಆಜ್ಞೆ ಮಾಡಬೇಕು

ಎಂದು ಕೇಳಿಕೊಳ್ಳುತ್ತೇನೆ. ಇನ್ನು ಮಾನ್ಯ ಸ್ನೇಹಿತರು, ಮಂತ್ರಿಗಳು ಬರುತ್ತಾರೆ ನಮಗೆ ಯಾರಿಗೂ ತಿಳಿಸುವುದಿಲ್ಲ ಎಂದು ಹೇಳಿದರು. ಕೆಲವು ಮಂತ್ರಿಗಳು ತಿಳಿಸುತ್ತಾರೆ. ಕೆಲವು ಮಂತ್ರಿಗಳು ತಿಳಿಸುವುದಿಲ್ಲ. ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ನಮ್ಮ ತಾಲ್ಲೂಕಿಗೆ ಬರಬೇಕು ಎಂದು ಹೇಳಿದ್ದೆ ನಮ್ಮ ತಾಲ್ಲೂಕಿನಲ್ಲಿ ೩೦ ವರ್ಷಗಳಿಂದ ಎಂ.ಎಲ್.ಎ. ಇರಲಿಲ್ಲ, ಮೊದಲು ಡಿ.ಎಸ್. ಗೌಡರು ಇದ್ದರು, ಆಗ ಕೆಲಸಕಾರ್ಯಗಳಾಗಿತ್ತು. ಪ್ರಜೆಗಳು ನಮ್ಮನ್ನು ಏನು ಕೆಲಸ ಮಾಡಿದ್ದೀರಿ ಎಂದು ಕೇಳುತ್ತಾರೆ, ನಾವು ನಿಮ್ಮನ್ನು ಕೇಳುತ್ತೇವೆ. ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ತಾಲ್ಲೂಕಿಗೆ ಬರಬೇಕು ಎಂದು ಮನವಿಯನ್ನು ಕೊಟ್ಟಿದ್ದೆ ಅವರು ಅದನ್ನು ನೋಡಿದ್ದಾರೋ ಇಲ್ಲವೋ, ಬರುತ್ತಾರೋ ಇಲ್ಲವೋ ಅದರ ಬಗ್ಗೆ ಕೂಡ ಜವಾಬು ಕೊಟ್ಟಿಲ್ಲ. ಕೆಲವು ಮಂತ್ರಿಗಳು ಬಂದಿದ್ದಾರೆ, ಆದರೆ ನಮಗೆ ತಿಳಿಸುವುದೇ ಇಲ್ಲ. ಈ ರೀತಿ ಮಾಡುವ ಸರ್ಕಾರದ ವೈಖರಿ ಏನು. ನಾವು ಜನತಾಪಾರ್ಟಿಯವರು ಅದಕ್ಕೋಸ್ಕರ ತಿಳಿಸದೆ ಬರುತ್ತಾರೆ ಎಂದು ಜನರು ಹೇಳುತ್ತಾರೆ, ಇದರಿಂದ ರಾಜಕೀಯವನ್ನು ತಾವಾಗಿಯೇ ಬೆಳೆಸಿದಹಾಗೆ ಆಗುತ್ತದೆ. ಗೆದ್ದು ಬಂದ ಮೇಲೆ ಸಾರ್ವಜನಿಕ ಸೇವಾ ದೃಷ್ಟಿಯಿಂದ ಕೆಲಸಕಾರ್ಯಗಳನ್ನು ಮಾಡಬೇಕು. ಜನ ನಮ್ಮನ್ನು ಕೇಳುತ್ತಾರೆ ನಾವು ನಿಮ್ಮನ್ನು ಕೇಳುತ್ತೇವೆ ೧೭೫ ತಾಲ್ಲೂಕುಗಳು ಏನಿವೆ ಅವೆಲ್ಲಾ ಒಂದೇ ಎನ್ನುವ ಭಾವನೆ ಇರಬೇಕು. ದೇವನಹಳ್ಳಿ ತಾಲ್ಲೂಕಿನ ಒಂದು ಕೆಲಸವನ್ನೂ ತಾವು ಬಡ್ಜೆಟ್ಟಿನಲ್ಲಿ ಸೇರಿಸಿಲ್ಲ. ನಮ್ಮ ೩-೪ ಕೆಲಸಗಳಿದ್ದವು. ಈ ವರ್ಷ ಒಂದು ರಸ್ತೆ ಮಾತ್ರ ಸೇರಿದೆ. ಮಾನ್ಯ ಮುಖ್ಯ ಮಂತ್ರಿಗಳು ಎರಡೂ ವರೆ ಲಕ್ಷ ರೂಪಾಯಿಗಳ ಒಂದು ಬ್ರಿಡ್ಜನ್ನು ತೆಗೆದುಕೊಳ್ಳಿ ಎಂದು ಹೇಳಿದ್ದರು, ಅದನ್ನೂ ಈ ಬಡ್ಜೆಟ್‌ನಲ್ಲಿ ಕೈಬಿಟ್ಟಿದೆ. ಆದುದರಿಂದ ಸರ್ಕಾರದವರು ೧೭೫ ತಾಲ್ಲೂಕುಗಳೆಲ್ಲಾ ನಮ್ಮದೇ ಇದೆ ಎನ್ನುವ ಭಾವನೆಯಿಂದ ನಡೆಯಬೇಕು ಎಂದು ಹೇಳಿ, ಇಷ್ಟು ಹೊತ್ತು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ.ವೆಂಕಟರಾಮಯ್ಯ (ಹೊಸದುರ್ಗ ಕ್ಷೇತ್ರ).—ಸನ್ಮಾನ್ಯ ಅಧ್ಯಕರೇ, ನನಗೆ ಈ ದಿವಸ ಪಂಚಾಯತ್ ರಾಜ್ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ಮಹಾತ್ಮ ಗಾಂಧೀಜಿಯವರು ನೆನಸಿದಂತೆ ಇದು ಒಂದು ಅತಿ ಮುಖ್ಯವಾದ ಗ್ರಾಮಗಳ ಏಳಿಗೆಯ ಗುರಿಯನ್ನು ಸಾಧಿಸಲು ಮಾಧ್ಯಮವಾಗಿದೆ. ಪ್ರತಿಯೊಂದು ಗ್ರಾಮಗಳು ಮುಂದೆ ಬಾರದ ಹೊರತು ದೇಶ ಎಂದೆಂದಿಗೂ ಅಭಿವೃದ್ಧಿಯಾಗುವುದಿಲ್ಲ. ದೇಶ ಅಭಿವೃದ್ಧಿ ಹೊಂದಿದ ದೇಶ ಅನ್ನಿಸಿಕೊಳ್ಳಬೇಕಾದರೆ ಪ್ರತಿಯೊಂದು ಪಂಚಾಯಿತಿಗಳು ತಾಲ್ಲೂಕು ಬೋರ್ಡುಗಳು ಹೆಚ್ಚಿನ ಆಸಕ್ತಿಯಿಂದ ಕೆಲಸ ಮಾಡಬೇಕು ಆ ಬಗ್ಗೆ ಸರ್ಕಾರ ಕೂಡ ಇವತ್ತಿನ ದಿವಸ ಹೆಚ್ಚು ಗಮನ ಕೊಡುತ್ತಿದೆ. ಅಧಿಕಾರ ವಹಿಸಿ ಕೊಂಡಿರತಕ್ಕ ಮಂತ್ರಿಗಳು ಕೂಡ ಬಹಳ ಧಕ್ಷರು ಹಳ್ಳಿಗಾಡಿಗೆ ಮತ್ತು ತಾಲ್ಲೂಕಿಗೆ ತಕ್ಕಂತಹ ಸಹನೆಯುಳ್ಳ ಹಾಗೂ ವಿವೇಚನಾ ಪರರಾದ ಮಂತ್ರಿಗಳ ಕೈಗೇ ಈ ಖಾತೆಯನ್ನು ಕೊಡಲಾಗಿದೆ. ಅದು ಬಹಳ ಸಂತೋಷದ ವಿಷಯ. ಆದರೆ ಇನ್ನೂ ಹೆಚ್ಚು ಮುಂದುವರಿಯಬೇಕೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಪ್ರತಿಯೊಂದು ಪಂಚಾಯಿತಿಗಳು ಹಾಗು ತಾಲ್ಲೂಕು ಬೋರ್ಡುಗಳು ತಮ್ಮ ಸ್ವಂತ ಕಾಲಿನ ಮೇಲೆ ನಿಂತು ಕೆಲಸ ಮಾಡುವಂತಾಗಬೇಕು ಹಳ್ಳಿಗಳ ಕಡೆ ಬೆಳೆದಂತಹ ಪದಾರ್ಥಗಳು ಅಲ್ಲಿ ತಯಾರಿಸಲ್ಪಟ್ಟಂತಹ ಸಾಮಗ್ರಿಗಳು ಹೀಗೆಲ್ಲಾ ಅಲ್ಲಿ ಬಂದಂತಹ ಉತ್ಪತ್ತಿ ಗ್ರಾಮಗಳಿಗೆ ತಕ್ಕಷ್ಟು ಆಗಬೇಕು ಹಾಗೂ ಗ್ರಾಮಗಳ ಕೈಗಾರಿಕೆಗಳೇ ಕೂಡ ಮುಂದುವರಿಯಬೇಕೆಂದು ಹೇಳುತ್ತೇನೆ ಈಗ ಕೈಗಾರಿಕೆಗಳನ್ನು ನೋಡಿಕೊಳ್ಳಲು ಕೈಗಾರಿಕಾ ಎಕ್ಸ್‌ಟೆನ್‌ಷನ್ ಆಫೀಸರನ್ನೂ ಪಂಚಾಯಿತಿಗಳು ಸುವ್ಯವಸ್ಥಿತವಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಲು ಪಂಚಾಯಿತಿ ಎಕ್ಸ್‌ಟೆನ್‌ಷನ್ ಆಫೀಸರನ್ನೂ ಹಾಗು ವ್ಯವಸಾಯೋತ್ಪನ್ನಗಳು ಅಭಿವೃದ್ಧಿಯಾಗುವಂತೆ ನೋಡಿಕೊಳ್ಳಲು ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರನ್ನು ನೇಮಿಸಿ ಪ್ರತಿಯೊಂದು ಸೌಕರ್ಯವನ್ನು ಕೊಡಲಾಗಿದೆ, ಆದರೆ ಇದರಲ್ಲಿ ಒಂದು ಮಾಡಿದ್ದಾರೆ. ಅದೇನೆಂದರೆ ತಾಲ್ಲೂಕು ಬೋರ್ಡ್‌ಗಳಲ್ಲಿ ತರಬೇತಾಗದ ಬಿ.ಡಿ.ಓ. ಅವರು ಸರಿಯಾಗಿ ದಕ್ಷತೆಯಿಂದ ಕೆಲಸ ಮಾಡುವುದಿಲ್ಲ. ತರಬೇತಾದವರನ್ನು ಬೇರೆ ರೆವಿನ್ಯೂ ಇಲಾಖೆಗೆ ಹಾಕುತ್ತಾರೆ.ರೆವಿನ್ಯೂ ಗುಮಾಸ್ತರನ್ನು ಪಂಚಾಯಿತಿಗೆ ಹಾಕುತ್ತಾರೆ. ಹೀಗೆ ಸರ್ಕಾರ, ಮೀನು ತಿನ್ನದವರನ್ನು ಮೀನಿನ ಡೈರಕ್ಟರನ್ನಾಗಿಯೂ ಕೋಳಿ ಸಾಕುವುದಕ್ಕೆ ಬಾರದವರನ್ನು ಫೌಲ್ಟ್ರಿ ಫಾರಂ ಮ್ಯಾನೇಜರ್ ಆಗಿ ನೇಮಿಸುತ್ತಿದೆ. ಹೀಗಾಗಿ ಸರ್ಕಾರದ ಕಾರ್ಯಕ್ರಮಗಳು ತಲೆಕೆಳಗಾಗುತ್ತಿವೆ ಎಂದು ಹೀಗಾಗಬಾರದು ಯಾರ್ಯಾರು ಯಾವುಯಾವುದರಲ್ಲಿ ನುರಿತಿರುತ್ತಾರೋ ಅನುಭವನ್ನು ಪಡೆದಿರುತ್ತಾರೋ ಅಂಥವರನ್ನು ಅದೇ ಕಾರ್ಯಗಳನ್ನು ಮಾಡುವಂತೆ ನೇಮಿಸಿದರೆ ನಮ್ಮ ಕಾರ್ಯಕ್ರಮಗಳು ಹಿಂದು ಮುಂದಾಗುವುದಿಲ್ಲ ತಲೆಕೆಳಗಾಗುವುದಿಲ್ಲ. ಇನ್ನು ಗ್ರಾಮಸೇವ

ಕರುಗಳನ್ನು ನೇಮಿಸುವಾಗ ಪಟ್ಟಣದವರನ್ನು ತೆಗೆದುಕೊಂಡು ಹೋಗಿ ಹಳ್ಳಿಗಳಲ್ಲಿ ಕೆಲಸ ಮಾಡಿ ಎಂದು ಹೇಳುತ್ತಾರೆ ಅಲ್ಲಿ ಅವರಿಗೆ ಮನೆ ಇರುವುದಿಲ್ಲ ಮನೆ ಇದ್ದರೂ ನೀರು ಇರುವುದಿಲ್ಲ ಕಕ್ಕಸ್ಸು ಇರುವುದಿಲ್ಲ ಹೀಗಾಗಿ ಅವರು ಅಲ್ಲಿ ಇರುವುದಕ್ಕೆ ಇಷ್ಟಪಡದೆ ರಜ ಹಾಕಿ ಓಡಾಡುತ್ತಿರುತ್ತಾರೆ. ಆದ್ದರಿಂದ ಗ್ರಾಮ ಪಂಚಾಯಿತಿಗಳು ಏಳಿಗೆಯಾಗಬೇಕಾದರೆ, ಗ್ರಾಮ ಸೇವಕರುಗಳನ್ನು ನೇಮಿಸುವಾಗ ಹಳ್ಳಿಗಾಡಿನವರಿಗೆ ಹೆಚ್ಚು ಪ್ರಾಶಸ್ತ್ಯಕೊಡಬೇಕೆಂದು ಹೇಳುತ್ತೇನೆ ಹಳ್ಳಿಗಾಡಿನವರಾದರೆ ಚಾಪೆ ಮೇಲಾದರೂ ಕುಳಿತು ಕೊಳ್ಳುತ್ತಾರೆ. ಮಲಗಿಕೊಳ್ಳುತ್ತಾರೆ ಆದರೆ ಪಟ್ಟನಗರಿಗೆ ಕುರ್ಚಿ ಟೇಬಲ್, ಹಾಸಿಗೆ,ಮಂಚ ಎಲ್ಲ ಬೇಕು ಅವು ಅಲ್ಲಿ ಸಿಗುವುದಿಲ್ಲ ಹೀಗಾಗಿ ಗ್ರಾಮದ ಏಳಿಗೆ ಕಾರ್ಯ ಹಿಂದೆ ಬೀಳುತ್ತಿದೆ. ಇವತ್ತಿನ ದಿವಸ ಪಂಚಾಯಿತಿಗಳಲ್ಲಿ ಮೀಟಿಂಗ್ ನಡೆಸುವುದಿಲ್ಲ, ಗ್ರಾಮದ ಏಳಿಗೆಗೆ ಹೆಚ್ಚಿಗೆ ಗಮನ ಕೊಡುವುದಿಲ್ಲ. ದೊಡ್ಡಸ್ತಿಕೆಗೆ ಬಂದು ಸದಸ್ಯರನ್ನು ಕರೆದುಕೊಂಡು ಒಂದೊಂದು ಗ್ರೂಪ್ ಕಟ್ಟುತ್ತಾ ಹೋಗುತಾರೆ. ಹೀಗೆ ಪಂಚಾಯಿತಿಗಳಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ಕಾರ್ಯಗಳು ನಡೆಯದೆ ಇದ್ದರೆ ಗ್ರಾಮಾಭಿವೃಧ್ಧಿಯಾಗಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇತ್ತ ಕಡೆ ಸರ್ಕಾರದವರು ತೀವ್ರ ಗಮನ ಹರಿಸಿ ಅಲ್ಲಿ ಚನ್ನಾಗಿ ಕೆಲಸ ಮಾಡಿಕೊಂಡು ಹೋಗುವಂತಹವರನ್ನು ನೇಮಿಸಿದರೆ ಪಂಚಾಯಿತಿಗಳು ಸುವ್ಯವಸ್ಥಿತವಾಗಿ ನಡೆದುಕೊಂಡು ಹೋಗಿ ದೇಶ ಸುಭಿಕ್ಷ ದೇಶವಾಗುತ್ತದೆ. ಈಗ ಸರ್ಕಾರದವರು ಗ್ರಾಮದ ಏಳಿಗೆಗಾಗಿ ಹೆಚ್ಚು ಹಣ ಕೊಡುತ್ತಿದ್ದಾರೆ ಅದರಲ್ಲಿ ಹಿಂದುಳಿದವರಿಗೆ ಮತ್ತು ನಿಮ್ಮ ವರ್ಗದವರಿಗೆ ಕೂಡ ಕೊಡುತ್ತಿದ್ದಾರೆ. ಆದರೆ ಅವರಿಗೆ ಕೊಟ್ಟ ಹಣವನ್ನೆಲ್ಲ ಮದ್ಯಪಾನ ಮಾಡಿಯೇ ಹಾಳು ಮಾಡಿ ಬಿಡುತ್ತಾರೆ. ಸಣ್ಣ ಭೂ ಹಿಡುವಳಿಗೆ ಕೈಗಾರಿಕೆಗಳಿಗೆ ಜಮೀನ ಅಭಿವೃದ್ಧಿಗೆ ಎಂದು ಕೊಟ್ಟದ್ದನ್ನೆಲ್ಲ ಕುಡಿದೇ ಹಾಳು ಮಾಡುತ್ತಾರೆ, ಆದ್ದರಿಂದ ಮೊದಲು ಪಾನನಿರೋಧವನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ. ಪಾನ ನಿರೋಧವನ್ನು ಜಾರಿಗೆ ತರದ ಹೊರತು ಖಂಡಿತ ಬಡವರ ಏಳಿಗೆಯಾಗುವುದಿಲ್ಲ ಹಿಂದುಳಿದವರು ಮುಂದಕ್ಕೆ ಬರುವುದಿಲ್ಲ ಆದ್ದರಿಂದ ಸರ್ಕಾರದವರು ಬಡವರು ಕುಡಿಯತಕ್ಕ ವಸ್ತು ಏನಿದೆ ಅದನ್ನು ಮೊದಲು ತೆಗೆಯಬೇಕೆಂದೂ ಮತ್ತು ಸಾಹುಕಾರರು ಕುಡಿಯುವುದನ್ನು ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ. ದೊಡ್ಡ ದೊಡ್ಡ ಪಾನೀಯಗಳನ್ನು ಸರ್ಕಾರವೇ ತಯಾರಿಸಿ ವಿತರಣೆ ಮಾಡುವುದು ಒಳ್ಳೆಯದೆಂದು ಕೂಡ ಹೇಳುತ್ತೇನೆ. ಅಲ್ಲದೆ ಶ್ರೀಮಂತರು ಯಾರ್‍ಯಾರಿದ್ದಾರೆ ಅವರಿಗೆ ಲೈಸೆನ್ಸ್ ಕೊಟ್ಟು ಪಾನವನ್ನು ತಯಾರಿಸುವಂತೆ ಮಾಡುವುದರಿಂದ ಸರ್ಕಾರಕ್ಕೆ ಹೆಚ್ಚು ಲಾಭ ಬರುತ್ತದೆ. ಆದರೆ ಬಡವರು ಕುಡಿಯುವುದನ್ನು ಮಾತ್ರ ಮೊದಲು ನಿಲ್ಲಿಸಬೇಕು ಕೆಏಂದರೆ ಅನೇಕ ಜನರು ಅಭಿವೃದ್ಧಿ ಕಾರ್ಯಗಳಿಗಾಗಿ ಕೊಟ್ಟ ಹಣವನ್ನೆಲ್ಲ ಕುಡಿಯುವ ಸಲುವಾಗಿಯೇ ಉಪಯೋಗಿಸಿ ಕೊಳ್ಳುತ್ತಾರೆ. ಇದರಿಂದ ನಮ್ಮ ದೇಶ ಖಂಡಿತ ಅಭಿವೃದ್ಧಿಯಾಗುವುದಿಲ್ಲ ದೇಶ ಅಭಿವೃದ್ಧಿಯಾಗಬೇಕಾದರೆ ಹಿಂದುಳಿದವರು ಮುಂದಕ್ಕೆ ಬರಬೇಕಾದರೆ ನಿಮ್ಮ ವರ್ಗದವರು ಏಳಿಗೆಯಾಗಬೇಕಾದರೆ ಮೊದಲು ಪಾನ ನಿರೋಧವನ್ನು ಜಾರಿಗೆ ತರಬೇಕಾಗುತ್ತದೆ ಅದನ್ನು ಜಾರಿಗೆ ತರದೆ ದೇಶ ಅಭ್ಯೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ ಇನ್ನೊಂದು ವಿಚಾರ ಏನೆಂದರೆ ಯಾರ್‍ಯಾರು ಯಾವ್ಯಾವ ರಂಗದಲ್ಲಿ ತರಬೇತಿಯನ್ನು ಹೊಂದಿರುತ್ತಾರೋ ಅಂಥವರನ್ನು ಆಯಾಯ ರಂಗಕ್ಕೆ ನೇಮಿಸಬೇಕು ಪಂಚಾಯಿತಿ ರಂಗದಲ್ಲಿ ತರಬೇತಿ ಹೊಂದಿದವರನ್ನು ಪಂಚಾಯಿತಿಗೆ ನೇಮಿಸಿ ಹೆಚ್ಚು ಪ್ರೋತ್ಸಾಹ ಕೊಡಬೇಕು ಗ್ರಾಮ ಸೇವಕರನ್ನು ನೇಮಿಸಿಕೊಳ್ಳುವಾಗ ಮಾತ್ರ ಪಟ್ಟಣಿಗರನ್ನು ತೆಗೆದುಕೊಳ್ಳಬಾರದು ಏಕೆಂದರೆ ಅವರು ಹಳ್ಳಿಗೆ ಹೋದರೂ ಅಲ್ಲಿ ಕೆಲಸ ಮಾಡುವುದಿಲ್ಲ ಕೇವಲ ಸಂಬಳಕ್ಕೋಸ್ಕರ ಹೋಗುತ್ತಾರೆ. ಮೆರಿಟ್ ಮೇಲೆ ಕನ್ಸಿಡರ್ ಮಾಡುತ್ತೇವೆಂದು ಹೇಳಿ ಹಳ್ಳಿಗರನ್ನು ಹಿಂದಕ್ಕೆ ಹಾಕಿ ಪಟ್ಟಣಿಗರನ್ನು ಮುಂದಕ್ಕೆ ತಂದು ನೇಮಿಸುತ್ತೀರಿ. ಇದು ಐ.ಎ.ಎಸ್. ಅಧಿಕಾರಿಗಳು ಮಾಡತಕ್ಕ ಒಂದು ಕೆಲಸ. ಪಾಪ ಹಳ್ಳಿಗರಿಗೆ ಮೆರಿಟ್ ಎಲ್ಲಿ ಬರಬೇಕು ಮನೆಗೆ ಹೋದ ಕೂಡಲೇ ದನ ಕಾಯುವುದು ಎಮ್ಮೆ ಕಾಯುವುದು ಹುಲ್ಲು ಹಾಕುವುದು ಬೇಸಾಯ ಮಾಡುವುದು ಇವೇ ದಿನನಿತ್ಯದ ಕೆಲಸಗಳಾಗಿರುವಾಗ ಮೆರಿಟ್ ಬರುವುದಾದರೂ ಹೇಗೆ? ಹೀಗಿರುವಾಗ ಮೆರಿಟ್ ಬರುವುದಕ್ಕೆ ಸಾಧ್ಯವಿಲ್ಲ ಆದ್ದರಿಂದ ಹೆಚ್ಚು ಮಾರ್ಕ್ಸ್ ಬಾರದಿದ್ದರೂ ಕೂಡ ಅವರಿಗೆ ಅಲ್ಲಿನ ಪರಿಸರದ ಅನುಭವ ಇರುವುದರಿಂದ ಮತ್ತು ಅಲ್ಲಿನ ವಾತಾವರಣಕ್ಕೆ ಹೊಂದಿಕೊಂಡು ಹೋಗುವುದರಿಂದ ಅವರಿಗೆ ಆದ್ಯತೆ ನೀಡಿ ಗ್ರಾಮ ಪಂಚಾಯಿತಿಗಳಿಗೆ ನೇಮಕ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಅವರಾದರೆ ಅಲ್ಲಿ ಚನ್ನಾಗಿ ಕೆಲಸ ಮಾಡುತ್ತಾರೆ ಮತ್ತು ಗ್ರಾಮವೂ ಅಭಿವೃದ್ಧಿಯಾಗುತ್ತದೆ ಅದನ್ನು ಬಿಟ್ಟು ಸೂಟು ಬೂಟು ಹಾಕಿಕೊಂಡಿರುವ ಪಟ್ಟಣಿಗರನ್ನು ಹಳ್ಳಿಗೆ ಹೋಗಿ ಕೆಲಸ ಮಾಡಿ ಎಂದರೆ ಅವರು ಅಲ್ಲಿ ಖಂಡಿತ ಕೆಲಸ ಮಾಡುವುದಿಲ್ಲ. ಬೇಕಾದರೆ ಕೇವಲ ಅಟೆಂಡನ್ಸ್ ತೋರಿಸುತ್ತಾರೆ ಆದರೆ ಪಂಚಾಯಿತಿಗಳು ಏಳಿಗೆಯಾಗುವುದಿಲ್ಲ ಇನ್ನು ಗ್ರಾಮ ಪಂಚಾಯಿತಿಗಳ ಅಭಿವೃದ್ಧಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು ಈಗ

ಕೊಟ್ಟಿರತಕ್ಕ ಹಣ ಸಾಲದು ಅಷ್ಟೇ ಅಲ್ಲದೆ ಅವಕ್ಕೆ ಹೆಚ್ಚಿನ ಅಧಿಕಾರವನ್ನು ಕೂಡ ಕೊಡಬೇಕೆಂದು ಹೇಳುತ್ತೇನೆ ಒಮ್ಮೆ ಒಬ್ಬರು ತಾಲ್ಲೂಕು ಬೋರ್ಡ್ ಅಧ್ಯಕ್ಷರಿಗೆ ಒಬ್ಬ ಬಿ.ಡಿ.ಓ. ಹೇಳಿದ–ನೀವು ಕೇವಲ ಗೌರವಕ್ಕೋಸಕರ ಇರುವುದೇ ವಿನಹ ನಿಮಗೆ ಏನೇನು ಅಧಿಕಾರ ಇಲ್ಲ ಎಂದು. ಹೀಗೆ ಯಾವುದಾದರೂ ಒಂದು ಕೆಲಸದ ಕಡೆಗೆ ಗಮನ ಕೊಡಬೇಕೆಂದರೆ ಅವರಿಗೆ ಅಧಿಕಾರ ಇರುವುದಿಲ್ಲ. ಆದ್ದರಿಂದ ಅವರಿಗೆ ಪೂರ್ಣ ಅಧಿಕಾರವನ್ನು ಕೊಡಿ ಎಂದು ಹೇಳುತ್ತೇನೆ. ಒಟ್ಟಿನಲ್ಲಿ ಪಂಚಾಯಿತಿಗೆ ಮತ್ತು ತಾಲ್ಲೂಕು ಬೋರ್ಡಿಗೆ ಹೆಚ್ಚಿನ ಒಂದು ಅಧಿಕಾರವನ್ನು ಕೊಡಿ ಎಂದು ಹೇಳುತ್ತೇನೆ .ಆಗ ಮಾತ್ರ ಸುಸೂತ್ರವಾಗಿ ಕೆಲಸ ಕಾರ್ಯಗಳನ್ನು ನಿರ್ವಹಿಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ. ಇವತ್ತಿನ ದಿವಸ ಪಂಚಾಯಿತಿಯ ಅಧ್ಯಕ್ಷರಾಗಲಿ ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಲಿ ಕೇವಲ ರುಜು ಮಾಡಿಕೊಂಡು ಇರುವವರು ಅನ್ನಿಸಿಕೊಳ್ಳುತ್ತಿದ್ದಾರೆಯೇ ವಿನಹ ಯಾವ ಕಾರ್ಯವನ್ನು ದಕ್ಷತೆಯಿಂದ ಮಾಡುವುದಕ್ಕಾಗುತ್ತಿಲ್ಲ ಆದ್ದರಿಂದ ಇವರುಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ನಾನು ಶಿಸ್ತನ್ನು ಪಾಲಿಸತಕ್ಕವನಾದ್ದರಿಂದ ಹೆಚ್ಚಿಗೆ ಕಾಲವನ್ನು ತೆಗೆದುಕೊಳ್ಳದೆ ಕೊನೆಯದಾಗಿ ಒಂದು ಮಾತು ಹೇಳಿ ಮುಗಿಸುತ್ತೇನೆ ಒಟ್ಟಿನಲ್ಲಿ ಪಂಚಾಯಿತಿಗೆ ನೇಮಿಸುವಾಗ ಆ ರಂಗದಲ್ಲಿ ತರಬೇತಿಯನ್ನು ಪಡೆದವರನ್ನೇ ನೇಮಿಸಬೇಕು (ಗುಮಾಸ್ತರನ್ನು ಬಿ.ಡಿ.ಓ. ಆಗಿ ಬಿ.ಡಿ.ಓ. ಅನ್ನು ರೆವಿನ್ಯೂ ಅಧಿಕಾರಿಯಾಗಿ, ಸಿವಿಲ್ ಇಂಜಿನಿಯರನ್ನು ಮೆಕ್ಯಾನಿಕಲ್ ಇಂಜಿಯರ್ ಆಗಿ ಮೆಕ್ಯಾನಿಕಲ್ ಇಂಜಿನಿಯರನ್ನು ಸಿವಿಲ್ ಇಂಜಿನಿಯರ್ ಆಗಿ ನೇಮಿಸಬಾರದು) ಸರ್ಕಾರ ಗ್ರಾಮ ಪಂಚಾಯಿತಿಗಳ ಏಳಿಗೆಗೆ ಹೆಚ್ಚು ಗಮನ ಕೊಡಬೇಕು ಪಂಚಾಯಿತಿಗಳಿಗೆ ಅದಿಕಾರಿಗಳನ್ನು ನೇಮಿಸುವಾಗ ಪಟ್ಟಣಿಗರನ್ನು ನೇಮಿಸದೆ ಹಳ್ಳಿಗಾಡಿನವರಿಗೆ ಪ್ರಾಶಸ್ತ್ಯ ಕೊಡಬೇಕು ಮೆರಿಟ್ ಅನ್ನು ಹಳ್ಳಿಗಾಡಿನವರಿಗೆ ಅನ್ವಯಿಸಬಾರದು ಹಾಗು ಮಧ್ಯಪಾನವನ್ನು ಸಂಪಪೂರ್ಣವಾಗಿ ನಿಷೇಧ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ನನ್ನ ಈ ನಾಲ್ಕು ಮಾತುಗಳನ್ನು ಮಾನ್ಯ ಅಧ್ಯಕ್ಷರು ಮತ್ತು ತಾವೆಲ್ಲರೂ ಶಾಂತತೆಯಿಂದ ಕೇಳಿದ್ದಕ್ಕೆ ಎಲ್ಲರಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

†ಶ್ರೀ ಡಿ.ಟಿ. ಮಾಯಣ್ಣ (ಹುಲಿಯೂರು ದುರ್ಗ)–ಮಾನ್ಯ ಅಧ್ಯಕ್ಷರೇ, ಸಮುದಾಯದ ಅಭಿವೃದ್ಧಿ. ಡಿ.ಪಿ.ಎ.ಪಿ. ಪ್ರೋಗ್ರಾಂ, ಲೋಕಲ್ ಬಾಡೀಸ್ ಕಾಂಪನ್‌ಸೇಷನ್ ಕೊಡುವುದು- ಈ ವಿಚಾರಗಳ ಬಗ್ಗೆ ನಾನು ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ನಮ್ಮ ಸಮಾಜದಲ್ಲಿ ಸಾಮಾನ್ಯವಾಗಿ ಎಲ್ಲರೂ ಕೂಡ ನಮಗಾಗಿ, ನಾನು ಎಲ್ಲರಿಗಾಗಿ ಎಂಬ ಭಾವನೆ ಇರಬೇಕು. ಇಂಥ ಸಮಾಜವನ್ನು ಸಮುದಾಯ ಯೋಜನೆಯನ್ನು ಜಾರಿಗೆ ತರುವ ಮೂಲಕ ರೂಪಿಸಬೇಕು. ಆದರೆ ಆ ದಿಸೆಯಲ್ಲಿ ಹೆಚ್ಚಾಗಿ ಕೆಲಸ ಮಾಡದೆ ಇರುವುದರಿಂದ ನಮ್ಮ ಸಮಾಜ ಒಂದು ಸರ್ವಾಧಿಕಾರಿ ಆಡಳಿತಕ್ಕೆ ಸಿಕ್ಕಿ ನಶಿಸಿ ಹೋಗುತ್ತಿದೆ. ಏತಕ್ಕೆಂದರೆ ಮೊದಲಿನಿಂದಲೂ ತಾಲ್ಲೂಕು ಅಭಿವೃದ್ಧಿ ಮಂಡಳಿಯಲ್ಲಿ ಈ ಕಾರ್ಯ ನಿರ್ವಹಣೆ ಮಾಡತಕ್ಕಂಥ ಜನಗಳು, ಸಾಮಾನ್ಯ ಜನರನ್ನು ಸಮುದಾಯ ಅಭಿವೃದ್ಧಿ ಯೋಜನೆಯಲ್ಲಿ ಸೇರಿಸಿಕೊಂಡು ಕೆಲಸ ಮಾಡುತ್ತಿದ್ದರು. ಈಗ ಬರುಬರುತ್ತಾ ಏನಾಗಿದೆ ಎಂದರೆ ಅಲ್ಲಿ ಮೊದಲಿನ ರೀತಿ ಉತ್ತಮವಾದ ಕೆಲಸಕಾರ್ಯಗಳು ನಡೆಯದೇ ಇರುವುದರಿಂದ ಜನರು ಸಮುದಾಯ ಅಭಿವೃದ್ಧಿ ಯೋಜನೆಯಿಂದ ದೂರ ಹೋಗುತ್ತಿದ್ದಾರೆ. ಇದನ್ನು ತಾವು ತಪ್ಪಿಸಿ, ಜನರನ್ನು ಹೆಚ್ಚು ಹೆಚ್ಚಾಗಿ ಇದರಲ್ಲಿ ಇನ್‌ವಾಲ್ವ್ ಮಾಡುವುದಕ್ಕೆ ಹೊಸ ಯೋಜನೆಯನ್ನು ತರಬೇಕು ; ಈಗಿರತಕ್ಕಂಥ ಪದ್ಧತಿಯನ್ನು ಬದಲಾಯಿಸಿಕೊಳ್ಳಬೇಕು. ಹಳ್ಳಿಗಾಡಿನಲ್ಲಿ ಪಂಚಾಯತಿಗಳು. ತಾಲ್ಲೂಕು ಅಭಿವೃದ್ಧಿ ಮಂಡಲಿಗಳು, ಜಿಲ್ಲಾ ಪರಿಷತ್ತುಗಳು ಅಭಿವೃದ್ಧಿ ಕಾರ್ಯಗಳನ್ನು ಮಾಡುವಾಗ, ಅವಕ್ಕೆ ಹಣದ ಮುಗ್ಗಟ್ಟು ಇರುವುದರಿಂದ ಹೆಚ್ಚಿನ ಅಭಿವೃದ್ಧಿ ಕೆಲಸಕಾರ್ಯಗಳು ಆಗುತ್ತಾ ಇಲ್ಲ. ಈಗಿರತಕ್ಕಂಥ ಪಂಚಾಯತಿಗಳು ಬಹಳ ಚಿಕ್ಕಮಟ್ಟದ್ದಾಗಿವೆ. ಅಲ್ಲದೇ ಹಣದ ಮುಗ್ಗಟ್ಟಿನಿಂದ ಈ ಪಂಚಾಯಿತಿಗಳು ಈ ರಸ್ತೆ ಮಾಡುವುದಕ್ಕೆ, ಗ್ರಾಮಕ್ಕೆ ಬೇಕಾದ ಎಲ್ಲಾ ಸೌಕರ್ಯಗಳನ್ನು ಒದಗಿಸುವುದಕ್ಕೆ ಆಗುತ್ತಾ ಇಲ್ಲ. ಈಗ ಚಿಕ್ಕದಾಗಿರತಕ್ಕಂಥ ಪಂಚಾಯಿತಿಗಳನ್ನು ಏರಿಯಾ ನೋಡಿಕೊಂಡು, ಅಲ್ಲಿರತಕ್ಕಂಥ ಜನಸಂಖ್ಯೆಯನ್ನು ನೋಡಿಕೊಂಡು ದೊಡ್ಡದು ಮಾಡಬೇಕು. ಕಂದಾಯದಿಂದ ಬರತಕ್ಕಂಥ ಹಣವನ್ನು ಅವರು ಹೆಚ್ಚು ಹೆಚ್ಚಾಗಿ ವಸೂಲು ಮಾಡಬೇಕು. ಆ ಹಣದಲ್ಲಿ ಅವರು ಹಳ್ಳಿಗಳಲ್ಲಿ ರಸ್ತೆಗಳ ನಿರ್ಮಾಣ, ದೀಪದ ವ್ಯವಸ್ಥೆ ಮುಂತಾದ ಅಭಿವೃದ್ಧಿ ಕಾರ್ಯಗಳನ್ನು ಹೆಚ್ಚು ಹೆಚ್ಚಾಗಿ ಮಾಡಬೇಕು, ಅವರು ಕಂದಾಯದ ಹಣವನ್ನು ವಸೂಲು ಮಾಡದೇ ಹೋದರೆ ಈ ಅಭಿವೃದ್ಧಿ ಕಾರ್ಯಗಳನ್ನು ಮಾಡತಕ್ಕಂಥ ದಿಶೆಯಲ್ಲಿ ಬಹಳ ಕಷ್ಟಗಳು ಉಂಟಾಗುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಹಳ್ಳಿಗಳಲ್ಲಿ ಲೈಟ್ ಇರುವುದಿಲ್ಲ. ರಸ್ತೆಗಳನ್ನು

ಮಾಡಿದ್ದರೂ ಅದಕ್ಕೆ ರಿಪೇರಿ ಮಾಡಿರುವುದಿಲ್ಲ; ಇಂತಹ ಸ್ಥಿತಿಯಲ್ಲಿ ಪಂಚಾಯಿತಿಗಳು ಕೆಲಸ ಮಾಡುತ್ತಿವೆ. ಆದ್ದರಿಂದ ಅವಕ್ಕೆ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳಲು ಅನುಕೂಲವಾಗುವಂತೆ ಹೆಚ್ಚಿನ ಹಣವನ್ನು ಒದಗಿಸಬೇಕು. ಈ ತಾಲ್ಲೂಕು ಅಭಿವೃದ್ಧಿ ಮಂಡಲಿಯಲ್ಲಿ ಜಾನುವಾರುಗಳನ್ನು ಉತ್ತಮ ರೀತಿಯಲ್ಲಿ ಚಿಕಿತ್ಸೆ ಮಾಡಲು ವೆಟರಿನರಿ ಇನ್ಸ್‌ಪೆಕ್ಟರ್ ಇರುತ್ತಾರೆ, ಸಣ್ಣ ಕೈಗಾರಿಕೆ ಅಭಿವೃದ್ಧಿ ಮಾಡಲು ಕೈಗಾರಿಕಾ ಎಕ್ಸ್‌ಟೆನ್‌ಷನ್ ಆಫೀಸರ್ ಇರುತ್ತಾರೆ. ರಸ್ತೆಗಳನ್ನು ಮಾಡಿಸಲು ಪಿ.ಡಬ್ಲ್ಯು.ಡಿ. ಇಲಾಖೆಗೆ ಸಂಬಂಧಪಟ್ಟ ಆಫೀಸರ್‌ಗಳು ಇರುತ್ತಾರೆ. ಆದರೆ ಅವರು ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡಲು ಹಣವಿಲ್ಲದೇ ಆಫೀಸಿನಲ್ಲೇ ಕುಳಿತಿರುತ್ತಾರೆ. ಹಣವಿಲ್ಲದೇ ಅವರು ಹಳ್ಳಿಗಾಡುಗಳಿಗೆ ಹೋಗಿ ಕೆಲಸಕಾರ್ಯಗಳನ್ನು ಮಾಡುವುದಿಲ್ಲ. ಆದ್ದರಿಂದ ಅವರಿಗೆ ಹೆಚ್ಚು ಹೆಚ್ಚಾಗಿ ಹಣವನ್ನು ಒದಗಿಸಿ ಈ ಎಲ್ಲಾ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡುವಂತೆ ತಾವು ವ್ಯವಸ್ಥೆ ಮಾಡಬೇಕು. ಹಳ್ಳಿಗಾಡಿನಲ್ಲಿ ರಸ್ತೆಗಳ ನಿರ್ಮಾಣ ಕಾರ್ಯ, ರಸ್ತೆಗಳ ರಿಪೇರಿ ಕಾರ್ಯ, ಸ್ಕೂಲ್ ಕಟ್ಟಡಗಳ ಕಾರ್ಯ, ಜನಗಳಿಗೆ ಬೇಕಾದಂಥ ಅವಶ್ಯಕತೆಗಳನ್ನು ಒದಗಿಸಿಕೊಡುವುದು, ಈ ಕಾರ್ಯಗಳನ್ನೆಲ್ಲಾ ಸರಿಯಾದ ರೀತಿಯಲ್ಲಿ ನಿರ್ವಹಿಸಲು ಅವರಿಗೆ ಸಾಕಷ್ಟು ಹಣವನ್ನು ಕೊಡದೇ ಹೋದರೆ ಹಳ್ಳಿಗಳ ಅಭಿವೃದ್ಧಿಯಾಗುವುದಿಲ್ಲ, ಅದರ ಜೊತೆಗೆ ಸಾಮಾಜಿಕ ವಿಕಾಸವೂ ಆಗುವುದಿಲ್ಲ. ಅಲ್ಲಿ ಸಾಮಾಜಿಕ ವಿಕಾಸವಾಗಬೇಕಾದರೆ ರೈತರಿಗೆ ಆರ್ಥಿಕ ಅನುಕೂಲತೆಗಳನ್ನು ಒದಗಿಸಿಕೊಡಬೇಕು, ಬೆಳೆ ಬೆಳೆಯುವುದಕ್ಕೆ ಬೇಕಾದ ಆಧುನಿಕ ರೀತಿಯ ಸಲಕರಣೆಗಳನ್ನೂ ಒದಗಿಸಿಕೊಡಬೇಕು. ಈ ದಿಶೆಯಲ್ಲಿ ತಾವು ಕೆಲಸ ಮಾಡಬೇಕು. ಹಳ್ಳಿಗಾಡಿನಲ್ಲಿ ಸಾಮಾನ್ಯವಾಗಿ ಜನರು ಬಹಳ ಕಷ್ಟದಿಂದ ಜೀವನ ಮಾಡುತ್ತಿದ್ದಾರೆ. ಇಡೀ ದೇಶಕ್ಕೆ ಉತ್ಪತ್ತಿ ಮಾಡತಕ್ಕಂಥ ಜನ, ಪಟ್ಟಣಗಳಲ್ಲಿ ಸ್ಲಮ್‌ಗಳಲ್ಲಿ ವಾಸ ಮಾಡತಕ್ಕಂಥ ಜನರ ರೀತಿಯಲ್ಲಿ ಅಲ್ಲಿ ವಾಸ ಮಾಡುತ್ತಿದ್ದಾರೆ, ಪಟ್ಟಣದಲ್ಲಿ ಸ್ಲಮ್ ಏರಿಯಾದಲ್ಲಿ ಕೂಡ ನಾವು ಒಳ್ಳೆಯ ರಸ್ತೆಗಳು, ದೀಪದ ವ್ಯವಸ್ಥೆಯನ್ನಾದರೂ ಕಾಣುತ್ತೇವೆ. ಅಲ್ಲಿ ಅವರಿಗೆ ಯಾವ ಸರಿಯಾದ ರಸ್ತೆಗಳಾಗಲೀ, ದೀಪದ ವ್ಯವಸ್ಥೆಯಾಗಲೀ ಇಲ್ಲ. ಸರ್ಕಾರದವರು ಹಳ್ಳಿಗಳ ಕಡೆ ನಿಗಾ ಕೊಟ್ಟು ಅಲ್ಲಿ ಒಳ್ಳೆಯ ರಸ್ತೆಗಳನ್ನು ಮಾಡಿಸಿಕೊಟ್ಟು ವಿದ್ಯುದ್ದೀಪಗಳನ್ನು ಹಾಕಿಸಿಕೊಟ್ಟು, ಆ ಹಳ್ಳಿಗಳು ಪಟ್ಟಣಗಳ ರೀತಿ ವಿಕಾಸವಾಗುವುದಕ್ಕೆ ಅವಕಾಶ ಮಾಡಿಕೊಡಬೇಕು. ಈ ರೀತಿ ವಿಕಾಸವಾದರೆ ನಮ್ಮ ಸಮಾಜಕ್ಕೆ ಅದರಿಂದ ಒಳ್ಳೆಯದಾಗುತ್ತದೆ ಎಂದು ನಾನು ತಮಗೆ ಸಲಹೆ ಕೊಡುತ್ತಿದ್ದೇನೆ. ಮತ್ತೊಂದು ವಿಚಾರವೇನೆಂದರೆ ಹಳ್ಳಿಗಳಲ್ಲಿ ಯುವಕರಿಗಾಗಿ ಯೂತ್‌ಕ್ಲಬ್‌ಗಳನ್ನು ರಚನೆ ಮಾಡಿ, ಅಲ್ಲಿ ಅವರಿಗೆ ಆಧುನಿಕ ರೀತಿಯ ವ್ಯವಸಾಯೋಪಕರಣಗಳನ್ನು ಒದಗಿಸಿ ಕೊಟ್ಟು ಆಧುನಿಕ ರೀತಿಯಲ್ಲಿ ವ್ಯವಸಾಯ ಮಾಡುವುದರ ಬಗ್ಗೆ ಅವರನ್ನು ತಯಾರು ಮಾಡಬೇಕು. ಅಲ್ಲದೇ ಹಳ್ಳಿಗಳಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿಪಡಿಸಲು ಹಾಗೂ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸಲು ಈ ಯೂತ್‌ಕ್ಲಬ್‌ಗಳಿಗೆ ಹಣ ಸಹಾಯವನ್ನು ಮಾಡಬೇಕು, ಇನ್ನು ಹಳ್ಳಿಗಳಲ್ಲಿ ಮಹಿಳಾ ಮಂಡಲಿಗಳು ಎಂದು ಇರುತ್ತವೆ. ಅಲ್ಲಿನ ಕೆಲಸ ಕಾರ್ಯಗಳೆಲ್ಲಾ ಹಳ್ಳಿಯ ನಾಗರೀಕತೆಯಂತೆಯೇ ನಡೆಯುತ್ತಿವೆ. ಅವರು ಶಿಶು ವಿಹಾರಗಳನ್ನು ನಡೆಸುತ್ತಾರೆ. ಅವರು ಸಣ್ಣ ಮಕ್ಕಳನ್ನು ಈಗಿನ ಕಾಲಕ್ಕೆ ತಕ್ಕಂತೆ ತರಪೇತು ಮಾಡುತ್ತಾ ಇಲ್ಲ. ಅದಕ್ಕೆ ಬೇಕಾದ ವ್ಯವಸ್ಥೆಯೂ ಇಲ್ಲಿ ಇಲ್ಲ. ಸರ್ಕಾರದವರು ಈ ಕಡೆಗೆ ಗಮನಹರಿಸಿ ಅವರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಹಳ್ಳಿಗಳಲ್ಲಿ ಹರಿಜನ ಕಾಲೋನಿಗಳು ಎಂದು ಇರುತ್ತವೆ; ಇಂತಹ ಕಡೆ ೧೦೦ರಿಂದ ೨೦೦ ಮನೆಗಳು ಇರುತ್ತದೆ. ಆ ಜನರು ತಮ್ಮ ಸಣ್ಣ ಸಣ್ಣ ಮಕ್ಕಳನ್ನು ಮಹಿಳಾ ಮಂಡಲಗಳಲ್ಲಿ ಬಿಟ್ಟು ಕೂಲಿನಾಲಿ ಮಾಡುವುದಕ್ಕೆ ಹೋಗುತ್ತಾರೆ. ಅಲ್ಲಿ ಮಹಿಳಾ ಮಂಡಲದ ಅಧಿಕಾರ ವರ್ಗದವರು ಈ ಸಣ್ಣ ಮಕ್ಕಳ ಯೋಗಕ್ಷೇಮವನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ. ಆದ್ದರಿಂದ ಅಂತಹ ಕಡೆ ಸರ್ಕಾರದವರು ೧೮ ಪರ್ಸೆಂಟ್ ಹಣದಿಂದ ಶಿಶುವಿಹಾರಗಳನ್ನು ಸ್ಥಾಪನೆ ಮಾಡಿ ಸಣ್ಣ ಮಕ್ಕಳು ಕಡ್ಡಾಯವಾಗಿ ನರ್ಸರಿಗೆ ಹೋಗುವ ಹಾಗೆ ಮಾಡಬೇಕು. ಮತ್ತು ಮಕ್ಕಳಿಗೆ ೧೮ ಪರ್ಸೆಂಟ್ ಹಣದಿಂದ ಏನೇನು ಅನುಕೂಲತೆಗಳನ್ನು ಕೊಡಬೇಕೋ ಆ ಎಲ್ಲಾ ಅನುಕೂಲತೆಗಳನ್ನು ಕೊಟ್ಟು ಆ ಮಕ್ಕಳು ನರ್ಸ್‌ರಿಗೆ ಹೋಗುವುದಕ್ಕೆ ಅನುಕೂಲ ಮಾಡಿಕೊಡಬೇಕು. ಹಳ್ಳಿಗಳಲ್ಲಿ ಹಾಸ್ಟಲ್‌ಗಳಲ್ಲಿ ಓದುತ್ತಿರತಕ್ಕಂಥ ಬಡವರ ಮಕ್ಕಳಿಗಾಗಿ ತಾವು ಹಣವನ್ನು ಒದಗಿಸಿಕೊಡುತ್ತಿದ್ದೀರಿ. ಈ ಹಣ ಸರಿಯಾದ ರೀತಿಯಲ್ಲಿ ಯುಟಿಲೈಸ್ ಆಗುತ್ತಾ ಇಲ್ಲ; ಬಡಮಕ್ಕಳ ಖರ್ಚು ಅಭಿವೃದ್ಧಿಗಾಗಿ ಖರ್ಚಾಗುತ್ತಾ ಇಲ್ಲ. ಈ ವಿಚಾರದಲ್ಲಿ ತಾವು ಗಮನಹರಿಸಿ ಆ ಹಣವೆಲ್ಲಾ ಅವರ ಅಭಿವೃದ್ಧಿಗೆ ವಿನಿಯೋಗವಾಗುವಂತೆ ವ್ಯವಸ್ಥೆ ಮಾಡಬೇಕು. ಮತ್ತೊಂದು ವಿಚಾರವೇನೆಂದರೆ ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಹಳ್ಳಿಗಳಲ್ಲಿ ೧೦ ಎಕರೆ ಪ್ರದೇಶದಲ್ಲಿ ಸಣ್ಣ ಸಣ್ಣ ಕಟ್ಟೆಗಳನ್ನು ಕಟ್ಟಿಸುತ್ತಿದ್ದಾರೆ. ಸಾಮಾನ್ಯವಾಗಿ ಒಂದು ತಾಲ್ಲೂಕಿಗೆ ಸರಕಾರದಿಂದ

೫, ೧೦ ಸಾವಿರ ರೂಪಾಯಿಗಳಷ್ಟು ಹಣ ಬರುತ್ತದೆ. ಇದರಿಂದ ಎಷ್ಟು ಕೆರೆ-ಕಟ್ಟೆಗಳನ್ನು ರಿಪೇರಿ ಮಾಡಬಹುದು ಎಂಬುದನ್ನು ತಾವು ಯೋಚನೆ ಮಾಡಬೇಕು ಪಿ.ಡಬ್ಲ್ಯು.ಡಿ. ಇಲಾಖೆಯವರು ಹೆಚ್ಚು ಹಣವಿಲ್ಲದೇ ಸಣ್ಣ ಸಣ್ಣ ಕಟ್ಟೆಗಳನ್ನು ಕಟ್ಟುತ್ತಿದ್ದಾರೆ. ಇದರಿಂದ ಹಳ್ಳಿಗಳಲ್ಲಿ ಹೆಚ್ಚು ಅನುಕೂಲವಾಗುತ್ತಾ ಇಲ್ಲ ಆದ್ದರಿಂದ ಸರ್ಕಾರದವರು ತಾಲ್ಲೂಕು ಅಭಿವೃದ್ಧಿ ಮಂಡಲಿಯವರಿಗೆ ಹಾಗೂ ಪಿ.ಡಬ್ಲ್ಯು.ಡಿ. ಇಲಾಖೆಯವರಿಗೆ ಹೆಚ್ಚು ಹಣವನ್ನು ಕೊಟ್ಟು ಕೆರೆಕಟ್ಟೆಗಳ ಅಭಿವೃದ್ಧಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಡಿ.ಪಿ.ಎ.ಪಿ. ಪ್ರೋಗ್ರಾಂನಲ್ಲಿ ತಮ್ಮ ಇಲಾಖೆಯವರು ಕೆಲವು ಕಟ್ಟೆಗಳನ್ನು ಕಟ್ಟಿಸುತ್ತಾರೆ. ಹಳ್ಳಿಗಳಲ್ಲಿ ಏನಾಗುತ್ತಿದೆ ಎಂದರೆ ಜನರು ಹೆಚ್ಚಾಗಿ ಗೋವುಗಳಿಗೆ ನೀರು ಕುಡಿಸುವ ಕಟ್ಟೆಗಳಾಗಿ ಇದನ್ನು ಉಪಯೋಗಿಸುತ್ತಾರೆ. ಇದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ನೀರಾವರಿ ಕಟ್ಟೆಗಳನ್ನು ತಾವು ಕಟ್ಟಿಸಿಕೊಡಬೇಕು ಎಂದು ಸಲಹೆ ಮಾಡುತ್ತೇನೆ. ಇನ್ನೊಂದು ವಿಚಾರ ಎಂದರೆ ಹಳ್ಳಿಗಳಲ್ಲಿ ಈ ಅಗ್ರಿಕಲ್ಚರಲ್ ಪ್ರೋಗ್ರಾಂ ಮಾಡಲು ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರ್ ಇರುತ್ತಾರೆ. ಅವರು ಹಳ್ಳಿಯಲ್ಲಿಯ ರೈತರನ್ನೆಲ್ಲಾ ಕರೆಸಿ, ಮಾಡರ್ನ್ ಎಕ್ವಿಪ್‌ಮೆಂಟ್ ಉಪಯೋಗಿಸಿಕೊಂಡು ಹೇಗೆ ವ್ಯವಸಾಯ ಮಾಡಬೇಕೆಂಬುದರ ಬಗ್ಗೆ ವಿಚಾರ ತಿಳಿಸುತ್ತಾರೆ. ಹಿಂದೆ ಆ ಆಫೀಸರ್ ಈ ಕೆಲಸವನ್ನು ಮಾಡುತ್ತಿದ್ದರು. ಈಗ ಏನಾಗಿದೆ ಎಂದರೆ ಈ ಕೆಲಸವನ್ನು ಮಾಡಲು ಅವರಿಗೆ ಸರಿಯಾಗಿ ಹಣ ಇಲ್ಲದೇ ಇರುವುದರಿಂದ ಅವರು ಹಳ್ಳಿಗೆ ಹೋಗದೇ ಆಫೀಸಿನಲ್ಲಿ ಸುಮ್ಮನೆ ಕುಳಿತುಕೊಂಡು ಕಾಲ ಕಳೆಯುತ್ತಾರೆ. ಅವರಿಗೆ ಹೆಚ್ಚು ಹಣವನ್ನು ತಾವು ಕೊಟ್ಟು ಅವರು ಈ ಕೆಲಸವನ್ನು ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕು, ಹಳ್ಳಿಗಾಡುಗಳಲ್ಲಿ ಜನರು ಸಣ್ಣ ಸಣ್ಣ ಕೈಗಾರಿಕೆಗಳನ್ನು ಮಾಡುತ್ತಿದ್ದಾರೆ. ರೈತರಿಗೆ ಬೇಕಾದ ನೇಗಿಲು, ಕಬ್ಬಿಣದ ಸಾಮಾನುಗಳು, ಮರಮುಟ್ಟಿನ ಸಾಮಾನುಗಳನ್ನು ಹಳೆಯ ರೀತಿಯಲ್ಲಿ ಮಾಡುತ್ತಾರೆ. ಅಂತಹವರಿಗೆ ತಾವು ಹೆಚ್ಚು ಹಣ ಕೊಟ್ಟು ಅವರು ಆಧುನಿಕ ರೀತಿಯಲ್ಲಿ ಆ ಸಾಮಾನುಗಳನ್ನು ತಯಾರು ಮಾಡಲು ಅವಕಾಶ ಮಾಡಿಕೊಡಬೇಕು. ನ್ಯಾಷನಲ್ ಎಕ್ಸ್‌ಟೆನ್‌ಷನ್ ಸ್ಕೀಮ್ ಪ್ರಕಾರ ತಾವು ಅವರಿಗೆ ಈ ಒಂದು ವ್ಯವಸ್ಥೆ ಮಾಡಿಕೊಡಬೇಕೆಂದು ಹೇಳುತ್ತೇನೆ. ಈ ರೀತಿ ತಾವು ಈ ಸಂಸ್ಥೆಗಳಿಗೆ ಒಂದು ಹೊಸ ಹುರುಪನ್ನು ಕೊಟ್ಟು ಈ ಸಂಸ್ಥೆಗಳನ್ನು ಜೀರ್ಣೋದ್ಧಾರ ಮಾಡಿದರೆ ದೇಶಕ್ಕೆ ಒಳ್ಳೆಯದಾಗುತ್ತದೆ ಎಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ.ಕೆ. ಕಳ್ಳಿಗುಡ್ಡ (ಬಾಗಲಕೋಟೆ)—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಮಂತ್ರಿಗಳು ಈ ಸಭೆಯಲ್ಲಿ ಮಂಡಿಸಿರತಕ್ಕ ಬೇಡಿಕೆಯನ್ನು ನಾನೂ ಸ್ವಾಗತಿಸುತ್ತಾ ಈ ವಿಚಾರದಲ್ಲಿ ೪ ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ಕಡೆಯ ಮಾನ್ಯ ಸದಸ್ಯರನೇಕರು ಈ ವಿಚಾರದಲ್ಲಿ ಮಾನ್ಯ ಮಂತ್ರಿಯವರಿಗೆ ಅನೇಕ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಅವರಿಗೆ ಅದಕ್ಕಾಗಿ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಸ್ವಾಮಿ, ನಮ್ಮ ಕಡೆ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಆಫೀಸು ಮಸೀದಿ ಇದ್ದ ಹಾಗೆ ಇದೆ. ಆಫೀಸಿನ ಒಳಗೆ ಏನೂ ಇಲ್ಲ, ಒಂದು ಕುರ್ಚಿ ಇಲ್ಲ, ಮೇಜು ಇಲ್ಲ. ಏನಾದರೂ ಸಭೆ ಕರೆಯಬೇಕಾದರೆ ಬೇರೆ ಕಡೆಯಿಂದ ಕುರ್ಚಿ ಮೇಜುಗಳನ್ನು ತರಬೇಕಾಗಿದೆ. ಅಲ್ಲಿ ಸಂಬಂಧಪಟ್ಟಂಥ ಆಫೀಸರುಗಳು ಇರುತ್ತಾರೆ ; ಅವರ ಹತ್ತಿರ ಯಾವ ಮಾತೂ ನಡೆಯುವ ಹಾಗೆ ಇಲ್ಲ; ಯಾರಿಂದಲಾದರೂ ಒಂದು ಅರ್ಜಿ ಹೋದರೆ ಅದಕ್ಕೆ ಅವರು ವ್ಯಾಲ್ಯೂ ಕೊಡುವುದಿಲ್ಲ. ಬಡಬಗ್ಗರಿಗೆ ದನ, ಕುರಿ, ಹಂದಿ ಕೊಳ್ಳಲು ಮತ್ತು ಸಣ್ಣ ಕೈಗಾರಿಕೆ ನಡೆಸಲು ಸಾಲ ಕೊಡುವ ವಿಚಾರದಲ್ಲಿ ಒಂದು ಫಾರಂಅನ್ನು ಇಟ್ಟುಕೊಂಡಿದ್ದಾರೆ. ಬಡಬಗ್ಗರಿಗೆ ಆ ಫಾರಂಅನ್ನು ಕೊಡುತ್ತಾ ಇಲ್ಲ. ಬ್ಯಾಂಕ್‌ನವರಿಗೆ ರೆಕ್‌ಮೆಂಡೇಷನ್ ಮಾಡಿ ಸಾಲವನ್ನೂ ಸಹ ಕೊಡಿಸುತ್ತಾ ಇಲ್ಲ. ಹೀಗಿರುವಾಗ ಆ ಫಾರಂಅನ್ನು ಏತಕ್ಕೆ ಪ್ರಿಂಟ್ ಮಾಡಿಸಿದರು ಎಂದು ನಾನು ಕೇಳಬಯಸುತ್ತೇನೆ. ಈ ಬಗ್ಗೆ ಮಾನ್ಯ ಮಂತ್ರಿಯವರು ಗಮನಹರಿಸಿ ಇದನ್ನು ವಿಚಾರ ಮಾಡಬೇಕು.

೧-೩೦ ಪಿ. ಎಂ.

ಸ್ವಾಮಿ, ಇವೊತ್ತು ಪಂಚಾಯಿತಿಗಳ ವಿಚಾರ ಹೇಳಬೇಕು ಅಂದರೆ ಒಂದು ಊರುಗಳಲ್ಲೂ ಕೂಡ ಲೈಟ್ ಇಲ್ಲ. ಕಂಬ ಇರುತ್ತದೆ ಆದರೆ ಅದಕ್ಕೆ ಬಲ್ಪ್ ಇರುವುದಿಲ್ಲ. ಇವರಿಗೆ ಬಿಲ್ಲು ಕೊಡತಕ್ಕಂತಹ ಶಕ್ತಿ ಇರುವುದಿಲ್ಲ, ಸರ್ಕಾರದವರು ಸಹಾಯ ಮಾಡುವುದಿಲ್ಲ, ಸಹಾಯ ಮಾಡಿದ್ದು ಉಳಿಯುವುದಿಲ್ಲ. ಪಂಚಾಯಿತಿಗಳಲ್ಲಿ ಪಂಚಾಯಿತಿ ಸೆಕ್ರೆಟರಿ ಇರುತ್ತಾನೆ, ಗ್ರಾಮ ಸೇವಕ ಇರುತ್ತಾನೆ ಅವರಿಗೆ ಅಲ್ಲಿ ಮನೆಗಳು

ಇರುವುದಿಲ್ಲವಾದ್ದರಿಂದ ಅವರು ಅಲ್ಲಿ ಇರುವುದಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳಾದ ಪ್ರಭಾಕರ್ ಇರುವಾಗಲೇ ಗ್ರಾಮ ಸೇವಕರಿಗೆ ಮನೆಗಳನ್ನು ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಪಂಚಾಯಿತಿಗಳಲ್ಲಿ ಏನಾಗಿದೆ ಅಂದರೆ ಪಂಚಾಯಿತಿ ಸೆಕ್ರೆಟರಿಗಳು ಆ ಹಳ್ಳಿಯಲ್ಲೇ ಒಬ್ಬರಿಗೊಬ್ಬರಿಗೆ ನ್ಯಾಯ ಹಚ್ಚಿ ಕೆಲಸ ಮಾಡಿಕೊಂಡು ಹೋಗುವುದು ನಡೆಯುತ್ತಿದೆ. ಇನ್ನು ಬಿಜಾಪುರ ಜಿಲ್ಲೆ ನಮ್ಮ ಬಾಗಲಕೋಟೆಯಲ್ಲಿ ಅಂದರೆ ಎಲ್ಲಾ ಆಫೀಸುಗಳಲಿಯೂ ಕೂಡ ಒಬ್ಬೊಬ್ಬರು ಅಧಿಕಾರಿಗಳು ಕುರ್ಚಿಯಲ್ಲಿ ಕುಳಿತಿರುತ್ತಾರೆ. ಬಾಗಲಕೋಟೆ ತಾಲ್ಲೂಕಿನಲ್ಲಿ ಒಂದೇ ದಿವಸ ೩೦-೪೦ ದನಗಳು ಸತ್ತವು. ಅಲ್ಲಿ ದನಗಳಿಗೆ ಔಷಧಿ ಕೊಡಬೇಕಾದಂತಹ ಟ್ಯೂಬ್‌ಗಳು ಇಲ್ಲ ಎಂದು ಹೇಳುತ್ತಾರೆ. ಮುಖ್ಯ ಮಂತ್ರಿಗಳು ಒಮ್ಮೆ ಪ್ರವಾಸ ಕೈಗೊಂಡಾಗ ಒಬ್ಬ ಕಾಂಪೌಂಡರ್‌ಗೆ ಸಸ್ಪೆಂಡ್ ಮಾಡಲಿಕ್ಕೆ ಆದೇಶ ಕೊಟ್ಟರು, ಅದು ಇನ್ನೂ ಆಗಿಲ್ಲ, ಅಲ್ಲಿಯ ಅಧಿಕಾರಿಗಳು ಸಮಾಧಾನ ಹೇಳಿದ್ದಾರೋ ಏನೋ ಗೊತ್ತಿಲ್ಲ. ಆತನನ್ನು ಸಸ್ಪೆಂಡ್ ಮಾಡಬೇಕೆಂಬ ವಿಚಾರ ಮುಖ್ಯವಲ್ಲ. ಮುಂದೆ ದನಗಳ ದವಾಖಾನೆಗಳಲ್ಲಿ ಈ ರೀತಿ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದು ನಾನು ಈ ಮಾತನ್ನು ಹೇಳುತ್ತೇನೆ. ಇವೊತ್ತು ಏನಾಗಿದೆ ಅಂದರೆ ಆಫೀಸುಗಳಲ್ಲಿ ಯಾವ ಅಧಿಕಾರಿಗಳು ಸರಿಯಾಗಿ ಇರುವುದಿಲ್ಲ. ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್ ಹತ್ತಿರ ಜೀಪ್‌ಗಳು ಮಾತ್ರ ನಿಂತಿರುತ್ತವೆ. ಒಂದೊಂದು ಜೀಪಿಗೂ ಒಂದು ಲಕ್ಷ ರೂಪಾಯಿ ಖರ್ಚಾಗುತ್ತದೆ. ಆದುದರಿಂದ ಅವುಗಳನ್ನು ಮಾರುವುದು ಒಳ್ಳೆಯದು. ಏಕೆಂದರೆ ಇವರಿಗೆ ಜೀಪುಗಳು ಏತಕ್ಕೆ ಇರಬೇಕು ಎಂದು ಗೊತ್ತಾಗುತ್ತಾ ಇಲ್ಲ. ಆದರೂ ಹೊಸ ಜೀಪುಗಳನ್ನು ಕೊಡಬೇಕೆಂದು ಎಲ್ಲರೂ ಕೇಳಿ ಕೊಂಡಿದ್ದಾರೆ. ಮೊನ್ನೆ ಪಂಚಾಯಿತ ರಾಜ್ಯ ಸಮ್ಮೇಳನ ಮಾಡಿದಾಗ ಹೇಳಿದ್ದಾರೆ. ಇನ್ನು ಬಾಗಲಕೋಟೆಯ ಕೆಲವು ಊರುಗಳಲ್ಲಿ ರೊಕ್ಕ ತುಂಬಿದ್ದಾರೆ. ಆದರೆ ಆ ಯೋಜನೆಗಳು ಯಾವಾಗ ಆಗುತ್ತದೆಯೋ ಗೊತ್ತಿಲ್ಲ. ಇವೊತ್ತು ಹಳ್ಳಿಗಳಲ್ಲಿ ರೋಡ್ ಸರಿಯಾಗಿಲ್ಲ. ಪ್ರತಿಯೊಂದು ರಸ್ತೆಗಳಲ್ಲೂ ಕೂಡ ಸಣ್ಣ ಸಣ್ಣ ಹಳ್ಳಗಳು ಬೀಳುತ್ತಿವೆ. ಆದುದರಿಂದ ತಾವು ಪಿ.ಡಬ್ಲ್ಯೂ.ಡಿ. ಅವರಿಗೆ ಹೇಳಿ ಟಾರ್ ರೋಡ್ ಮಾಡಿಸುವುದು ಬೇಡ, ಮೊದಲು ಹಳ್ಳಿಗಳಿಗೆ ಹೋಗಲಿಕ್ಕೆ ರಸ್ತೆಗಳನ್ನು ಮೊದಲು ಮಾಡಿಸಿಕೊಡಬೇಕೆಂದು ಹೇಳುತ್ತೇನೆ. ಇನ್ನು ಟೌನ್ ಪಂಚಾಯಿತಿಯೇ ಇರಲಿ, ವಿಲೇಜ್ ಪಂಚಾಯಿತಿಯೇ ಇರಲಿ, ಯಾವುದೇ ಪಂಚಾಯಿತಿಯಲ್ಲೂ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ. ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನಲ್ಲಿಯೂ ಕೂಡ ರೊಕ್ಕವಿಲ್ಲ. ಆದುದರಿಂದ ಅಲ್ಲಿಗೆ ವರ್ಕ್ ಮಾಡಲಿಕ್ಕೆ ಜನ ಹೋಗುವುದಿಲ್ಲ. ಇವೊತ್ತು ಪಂಚಾಯಿತಿಗಳ ಕೀಲಿ ಕೈಯನ್ನು, ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್ ಕೀಲಿ ಕೈಯನ್ನು ಮಾನ್ಯ ಮಂತ್ರಿಗಳು ತಮ್ಮ ಕೈಯಲ್ಲಿ ಇಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಗ್ರಾಮಸೇವಕರುಗಳಿಗೆ ಎಣ್ಣೆ ಸ್ಪ್ರೇ ಮಾಡುವುದು ಅವರ ಕಡೆಗೆ ಬರುತ್ತದೆ, ಅದನ್ನೆಲ್ಲಾ ಶ್ರೀಮಂತರ ಹೊಲದಲ್ಲಿ ಸ್ಪ್ರೇ ಮಾಡುತ್ತಾರೆ ಹೊರತು ಬಡವರ ಹೊಲಗಳಿಗೆ ಸ್ಪ್ರೇ ಮಾಡುವುದಿಲ್ಲ. ಅವರು ಶ್ರೀಮಂತರ ಹೊಲದಲ್ಲಿ ಅಡ್ಡಾಡಿ ಬರುತ್ತಾರೆಯೇ ಹೊರತು ಬಡವರ ಹೊಲಗಳ ಕಡೆಗೆ ಹೋಗಿ ನೋಡುವುದಿಲ್ಲ. ಅವನು ಅಲ್ಲಿ ಹೋಗಲಿಕ್ಕೆ ಕಾರಣ ಏನು, ಇವೊತ್ತು ಒಂದು ತಂತಿ ಹೋದರೂ ಅವರಿಗೆ ಹೋಗುತ್ತದೆ, ಒಂದು ಫೋನು ಹೋದರು ಅವರಿಗೆ ಹೋಗುತ್ತದೆ. ಇದರಿಂದ ಬಡವರಿಗೆ ಅನುಕೂಲ ಸಿಕ್ಕುವುದಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳಾದ ಪ್ರಭಾಕರ್ ಅವರು ಪೂರ್ಣವಾಗಿ ಸಿಟ್ಟಿಗೆದ್ದು ಈ ಖಾತೆಯನ್ನು ಸಂಧಾರಣೆ ಮಾಡಬೇಕೆಂದು ಅಧ್ಯಕ್ಷರವರ ಮುಖಾಂತರ ತಮ್ಮನ್ನು ಕೇಳಿಕೊಳ್ಳುತ್ತೇನೆ. ಇನ್ನು ಬ್ಯಾಂಕಿನವರು ಸಾಲ ಕೊಡತಕ್ಕ ಪದ್ಧತಿ ಏನಿದೆ ಅದರ ಬಗ್ಗೆ ಅವರು ಹಿಂದಿನ ಸಾಲ ಕೊಟ್ಟಿಲ್ಲ ಎಂದು ಹೇಳುವುದು ಇದೆ. ಇವೊತ್ತು ವ್ಯಾಪಾರಸ್ಥರು ಯಾರು ಕೊಟ್ಟಿದ್ದಾರೆ, ಕೋಟ್ಯಾಂತರ ರೂಪಾಯಿ ಕೊಡದೇ ಇರುವುದು ಇದೆ. ಇವರದು ಒಂದು, ಎರಡು ಸಾವಿರ ರೂಪಾಯಿಗಳು ಇರುತ್ತದೆ ಆದುದರಿಂದ ನಿಮ್ಮ ಶಿಫಾರಸ್ಸಿನ ಪ್ರಕಾರ ಬ್ಯಾಂಕಿನಲ್ಲಿ ರೊಕ್ಕ ಕೊಡುವ ವ್ಯವಸೆ ಮಾಡಬೇಕೆಂದು ಕೇಳಿಕೊಂಡು, ಸನ್ಮಾನ್ಯ ಅಧ್ಯಕ್ಷರು ಗಂಟೆ ಬಾರಿಸುವುದಕ್ಕಿಂತ ಮೊದಲೇ ನನ್ನ ಭಾಷಣ ಮುಗಿಸಬೇಕೆಂದು ತಿಳಿದು, ಅಧ್ಯಕ್ಷರು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಲ್.ಟಿ. ತಿಮ್ಮಪ್ಪ ಹೆಗ್ಗಡೆ (ಸಾಗರ).—ಸನ್ಮಾನ್ಯ ಸಭಾಧ್ಯಕ್ಷರೇ, ಈ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿರಾಜ್ ಸಚಿವರು ಮಂಡಿಸಿದ ೧೯೭೯-೮೦ನೇ ಸಾಲಿನ ಡಿಮ್ಯಾಂಡ್‌ಗಳನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ ಕೆಲವೊಂದು ಸಲಹೆಗಳನ್ನು ಕೊಡಲಿಕ್ಕೆ ಅಪೇಕ್ಷೆ ಪಡುತ್ತೇನೆ, ಶೇಕಡ ೮೦ ಜನ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಅಲ್ಲಿ ವಾಸಮಾಡತಕ್ಕ ರೈತರೇ ಬೆನ್ನೆಲುಬು, ಗ್ರಾಮೀಣ ಅಭಿವೃದ್ಧಿಯಾಗದೇ ದೇಶ ಅಭಿವೃದ್ಧಿಯಾಗಲಿಕ್ಕೆ ಸಾಧ್ಯವಿಲ್ಲ. ಅವರಿಗೆ ಉದ್ಯೋಗಾವಕಾಶ

ಗಳನ್ನು ಕಲ್ಪಿಸಿ ಅನಂತರ ಅವಶ್ಯಕ ಸೌಲಭ್ಯಗಳನ್ನು ಕಲ್ಪಿಸಿ, ಅವರು ಪಟ್ಟಣಗಳ ಕಡೆಗೆ ವಲಸೆ ಬರುವುದನ್ನು ತಪ್ಪಿಸಬೇಕೆಂದು ೨೫-೩೦ ವರ್ಷಗಳಿಂದ ಹೇಳುತ್ತಾ ಬಂದಿದ್ದೇವೆ. ಗ್ರಾಮರಾಜ್ಯ ಆದರೆ ರಾಮರಾಜ್ಯ ಆಗುತ್ತದೆ ಎನ್ನುವ ಮಾತನ್ನು ಹೇಳುತ್ತಾ ಬಂದಿದ್ದೇವೆ. ಇವೊತ್ತು ಇದಕ್ಕೆ ತದ್ವಿರುದ್ಧವಾಗಿ ಆಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಜೀವನ ನಡೆಸುವುದು ಕಷ್ಟವಾಗಿದೆ. ಅಲ್ಲಿರತಕ್ಕಂತಹ ಕುಶಲ ಕೆಲಸಗಾರರು ಅದನ್ನು ತ್ಯಜಿಸಿ ಪಟ್ಟಣಗಳ ಕಡೆ ಬರುವುದು ಜಾಸ್ತಿಯಾಗುತ್ತಿದೆ. ಇನ್ನು ಅನೇಕ ಜನ ಗ್ರಾಮೀಣ ಪ್ರದೇಶದಿಂದ ಬಂದಂತಹ ಅಧಿಕಾರಿಗಳು ಮತ್ತು ಶಾಸಕರು ಇದ್ದರೂ ಅವರೆಲ್ಲಾ ಗ್ರಾಮೀಣ ಅನ್ನುವುದು ನೆಪಕ್ಕೆ ಹೊರತು ಪಟ್ಟಣದಲ್ಲಿಯೇ ಬಹಳ ಕಾಲ ಇರುವುದು ಜಾಸ್ತಿಯಾಗಿದೆ. ಇದಕ್ಕೆಲ್ಲಾ ಕಾರಣ ಎಲ್ಲಿಯೋ ಒಂದು ದೋಷ ಇದೆ. ಇವೊತ್ತು ಅನೇಕ ರೀತಿಯಲ್ಲಿ ಗ್ರಾಮಾಭಿವೃದ್ಧಿ ಕಾರ್ಯಗಳು ಇವೆ. ಸಮುದಾಯ ಅಭಿವೃದ್ಧಿ ಯೋಜನೆ ಇದೆ, ಮಹಿಳಾ ಮಂಡಳಿ ಬಗ್ಗೆ, ಅಪ್ಲೈಡ್ ನ್ಯೂಟ್ರಿಷನ್ ಪ್ರೋಗ್ರಾಂ ಕಾರ್ಯ ಇದೆ, ಬಾವಿಗಳು, ಎಸ್.ಎಫ್.ಡಿ.ಎ. ಪ್ರೋಗ್ರಾಂಗಳು, ಇಷ್ಟೆಲ್ಲಾ ಇದ್ದರೂ ಕೂಡ ಹಳ್ಳಿಗಳಲ್ಲಿ ಏತಕ್ಕೆ ಇಷ್ಟು ನಷ್ಟ ಇದೆ ಅಂದರೆ ಇದರ ವಿತರಣೆ ಆಗುವುದರಲ್ಲಿ ದೋಷವಿದೆ. ಹಳ್ಳಿಗಳಲ್ಲಿ ಸಮರ್ಪಕವಾದಂತಹ ಕೆಲಸ ಆಗಿಲ್ಲ ಎನ್ನುವುದು ಸ್ಪಷ್ಟವಾಗಿ ಗುರುತಾಗಿದೆ. ಇನ್ನು ವಿದ್ಯಾಭ್ಯಾಸದ ಪರ್‌ಸೆಂಟೇಜ್ ಹೇಳುವುದಾದರೆ ಸಾಕ್ಷರತೆ ಇರತಕ್ಕದ್ದು ಶೇಕಡ ೧೯ರಷ್ಟು ಮಾತ್ರ. ಇನ್ನು ಪ್ರೌಢ ವಿದ್ಯಾಭ್ಯಾಸ, ಕಾಲೇಜು ವಿದ್ಯಾಭ್ಯಾಸ ಕೇಳುವುದಂತೂ ಬೇಡ. ಸಾರಿಗೆ ಸಂಪರ್ಕ ಅದು ಇನ್ನೂ ಕೆಟ್ಟಿದೆ. ಈಗ ಇರುವ ಸ್ಥಿತಿಯಲ್ಲಿ ಎಲ್ಲಾ ಇಲಾಖೆಗಳನ್ನೂ ಒಂದು ಕ್ರೋಢೀಕರಣ ಮಾಡಿಕೊಂಡು ಪ್ರಗತಿಯನ್ನು ಸಾಧಿಸಬೇಕಾದಂತಹ ಜವಾಬ್ದಾರಿ ಗ್ರಾಮಾಭಿವೃದ್ಧಿ ಮತ್ತು ಪಂಚಾಯಿತಿ ರಾಜ ಇಲಾಖೆಗೆ ಇರಬೇಕಾದುದು; ಎಲ್ಲಿಯೋ ಒಂದು ತಂತಿ ತಪ್ಪಿ ದೋಷವಾಗಿದೆ ಎಂದು ಕಾಣುತ್ತದೆ. ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಇನ್ನು ನಮ್ಮ ರಾಜ್ಯದಲ್ಲಿ ೮೪೧೧ ಪಂಚಾಯಿತಿಗಳು ಇವೆ. ೧೭೫ ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಇದ್ದು ಅದಕ್ಕೆ ಒದಗಿಸಿಕೊಂಡಿರತಕ್ಕ ಹಣ ಕಡಿಮೆ ಎಂದು ಕಾಣಿಸುತ್ತದೆ. ೧೨ ಕೋಟಿ ಚಿಲ್ಲರೆ ಸಮುದಾಯ ಅಭಿವೃದ್ಧಿ ೧೩ ಕೋಟಿ ಚಿಲ್ಲರೆ ಸಣ್ಣ ರೈತರ ಅಭಿವೃದ್ಧಿ, ಲೋಕಲ್‌ಬಾಡೀಸ್, ಪಾಂಚಾಯಿತ್ ರಾಜ್ ಸಂಸ್ಥೆಗಳಿಗೆ ೨೩ ಕೋಟಿ ಚಿಲ್ಲರೆ, ನಾವು ಕಡಿಮೆ ಹಣವನ್ನು ಒದಗಿಸಿಕೊಂಡದ್ದಾಗಿದೆ.

ಶೇಕಡಾ ೮೦ರಷ್ಟು ಜನರು ಹಳ್ಳಿಗಾಡಿನಲ್ಲಿ ವಾಸ ಮಾಡುತ್ತಿದ್ದರೂ ಸಹ, ಅವರು ಒಂದು ತರಹ ಸೌಮ್ಯ ಸ್ವಭಾವದವರು, ಅವರು ದಂಗೆ ಏಳತಕ್ಕಂಥ ಜನರು ಅಲ್ಲ, ಅವರು ನಿರ್ಲಿಪ್ತ ಜನರೆಂದು ತಾವು ಅರ್ಥ ಮಾಡಿಕೊಂಡಂತೆ ಕಾಣುತ್ತದೆ. ಅದಕ್ಕಾಗಿ ತಾವು ಹಳ್ಳಿಗಾಡಿನ ಕಡೆಗೆ ಅಷ್ಟು ಲಕ್ಷ್ಯ ಕೊಡುತ್ತಿಲ್ಲ. ಅದೇ ಪಟ್ಟಣ ಪ್ರದೇಶದಲ್ಲಿಯಾದರೆ, ಬೆಂಗಳೂರಿನಲ್ಲಿ ಒಂದು ದಿವಸ ನೀರನ್ನು ಹಂಚಿಕೆ ಮಾಡಲಿಲ್ಲವೆಂದರೆ, ವಿರೋಧ ಪಕ್ಷದ ಸದಸ್ಯ ಮಿತ್ರರೆಲ್ಲಾ ಬಹಳ ಗಲಾಟೆ ಮಾಡುತ್ತಾರೆ. ಆಗ ಸರ್ಕಾರದವರು ನಾಳೆಯಿಂದಲೇ ಸರಿಪಡಿಸುತ್ತೇವೆಂದು ಹೇಳುತ್ತಾರೆ. ಆದರೆ ಹಳ್ಳಿಗಳಲ್ಲಿ ಕುಡಿಯಲು ನೀರು ಇಲ್ಲದೆ ಕಣ್ಣೀರು ಸುರಿಸುತ್ತಿದ್ದರೂ ಸಹ ಸರ್ಕಾರದವರು ಆ ಹಳ್ಳಿಗಳ ಕಡೆಗೆ ಸಾಕಷ್ಟು ಲಕ್ಷ್ಯ ವಹಿಸಿಲ್ಲ. ಬಡ್ಜೆಟ್ಟಿನಲ್ಲಿ ಸಾಕಷ್ಟು ಹಣವನ್ನು ಇದಕ್ಕಾಗಿ ಒದಗಿಸಿಲ್ಲ. ನಮ್ಮ ಪಂಚಾಯತ ರಾಜ್ಯ ಮಂತ್ರಿಗಳು ಸಹ ಹಳ್ಳಿಗಳ ಜನರಂತೆ ಸೌಮ್ಯ ಸ್ವಭಾವದವರು. ಅವರು ತಮ್ಮ ನಿರ್ಲಿಪ್ತ ಮನೋಭಾವವನ್ನು ಬಿಟ್ಟು ಚುರುಕುಗೊಳ್ಳಬೇಕು. ಮತ್ತು ಹಳ್ಳಿಗಾಡಿನ ಅಭಿವೃದ್ಧಿಯ ಬಗ್ಗೆ ಹೆಚ್ಚಿನ ಒಂದು ಉತ್ಸಾಹದಿಂದ ಕೆಲಸ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಪಂಚಾಯತ ರಾಜ್ ವಿಷಯದಲ್ಲಿ ಹೇಳುವುದಾದರೆ, ನಾವು ಸಂಪೂರ್ಣವಾಗಿ ಫೇಲ್ ಆಗಿದ್ದೇವೆಂದು ಹೇಳಬಹುದು. ಗ್ರಾಮ ಮಟ್ಟದಲ್ಲಿ ಚುನಾವಣೆ ನಡೆಸಿದ್ದು ಒಂದನ್ನು ಬಿಟ್ಟರೆ, ಅಲ್ಲಿ ಹೆಚ್ಚಿನ ಅಭಿವೃದ್ಧಿ ಕಾರ್ಯಗಳನ್ನು ಏನೇನೂ ಸಾಧಿಸಿಲ್ಲವೆಂದು ಹೇಳಬಹುದು. ಅಲ್ಲಿ ಚುನಾವಣೆ ನಡೆಸಿ ಅಲ್ಲಿಯ ಜನರಲ್ಲಿಯೇ ಜಗಳ ಹಚ್ಚಿದ್ದೇವೆ. ಪಂಚಾಯಿತಿ ಚೇರ್‌ಮನ್ ಆಗಿ ಏನು ಕಡಿದೆ ಎಂದು ಕೇಳುವ ಮಟ್ಟಕ್ಕೆ ಜನರು ಹೋಗಿದ್ದಾರೆ. ಇದರ ಅರ್ಥ ಸರ್ಕಾರದವರು ಪಂಚಾಯಿತಿಗಳಿಗೆ ಸಾಕಷ್ಟು ಹಣಕಾಸನ್ನು ಒದಗಿಸಿಲ್ಲ, ಆದಕಾರಣ ಅಲ್ಲಿ ಯಾವ ಅಭಿವೃದ್ಧಿ ಕಾರ್ಯಗಳೂ ನಡೆಯುತ್ತಿಲ್ಲ. ಇನ್ನು ಮುಂದೆಯಾದರೂ ಗ್ರಾಮಪಂಚಾಯಿತಿಗಳನ್ನು ಶಕ್ತಿಶಾಲಿಗಳನ್ನಾಗಿ ಮಾಡಿ, ಅವು ಚುರುಕಿನಿಂದ ಕೆಲಸ ಮಾಡುವಂತಹ ರೀತಿಯಲ್ಲಿ ಸರ್ಕಾರದವರು ಕ್ರಮ ಕೈಕೊಳ್ಳಬೇಕೆಂದು ಸೂಚನೆ ಮಾಡುತ್ತೇನೆ.

ಇನ್ನು ಬಾವಿಗಳ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಒಟ್ಟು ೨೬೮೨೬ ಹಳ್ಳಿಗಳಿವೆ, ಪಿ.ಎಚ್.ಇ.ನವರು ೧೯೭೪ರಲ್ಲಿ ಸರ್ವೆ ಮಾಡಿ ಈ ಹಳ್ಳಿಗಳ ಪೈಕಿ ೩೦೦೫ ಹಳ್ಳಿಗಳಿಗೆ ಕುಡಿಯುವ ನೀರಿನ ಬಾವಿಗಳ ಅವಶ್ಯಕತೆ ಇದೆ ಎಂದು ಹೇಳಿದ್ದರು. ಆದರೆ ೧೯೭೭-೭೮ರಲ್ಲಿ ನಿಮ್ಮ ಒಂದು

ವರದಿಯ ಪ್ರಕಾರ ೮೨೦೨ ಹಳ್ಳಿಗಳಿಗೆ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಬೇಕಾಗಿದೆ. ಈಗ ಮತ್ತೆ ಹೊಸದಾಗಿ ಲೆಕ್ಕ ಹಾಕುವುದಕ್ಕೆ ಹೋದರೆ ಇನ್ನೂ ಹೆಚ್ಚಿನ ಹಳ್ಳಿಗಳಲ್ಲಿ ನೀರಿನ ಸೌಲಭ್ಯ ಇಲ್ಲ ಎಂಬುದು ತಿಳಿದುಬರುತ್ತದೆ. ಏಕೆಂದರೆ, ಈಗ ಹೊಸ ಕಾಲೋನಿಗಳ ಸಂಖ್ಯೆ ಜಾಸ್ತಿಯಾಗಿದೆ. ಇಲ್ಲೆಲ್ಲಾ ಕುಡಿಯುವ ನೀರಿನ ಸೌಲಭ್ಯವಿಲ್ಲದೆ ಜನರು ಕಷ್ಟಪಡುತ್ತಿದ್ದಾರೆ. ಮತ್ತೆ ಕೆಲವು ಕಡೆಗಳಲ್ಲಿ ತೋಡಿರುವಂತಹ ಬಾವಿಗಳು ಅಲ್ಲಿಯ ಜನರಿಗೆ ಸಾಕಾಗುತ್ತಿಲ್ಲ. ನಮ್ಮ ಮಲೆನಾಡು ಭಾಗದಲ್ಲಿ ತೆಗೆಸಿರುವಂತಹ ಕೊಳವೆ ಬಾವಿಗಳ ಪೈಕಿ ಮುಕ್ಕಾಲು ಭಾಗದಷ್ಟು ಯಶಸ್ವಿಯಾಗಿಲ್ಲ. ನಾನು ಮಲೆನಾಡು ಭಾಗದಿಂದ ಬಂದಿದ್ದೇನೆ. ಸೌತ್ ಜೋನ್‌ನಲ್ಲಿ ತೆಗೆಸಿರುವಂತಹ ೧೬೫೧೫ ಬಾವಿಗಳ ಪೈಕಿ ೬೫೪ ಬಾವಿಗಳನ್ನು ಶಿವಮೊಗ್ಗ ಜಿಲ್ಲೆಯಲ್ಲಿ ರಿಪೇರಿ ಮಾಡಲಾಗಿದೆ ಎಂದು ತಮ್ಮ ವರದಿಯಲ್ಲಿಯೇ ಹೇಳಿದ್ದೀರಿ. ಅಂದರೆ ಇವುಗಳ ರಿಪೇರಿಗೆ ಖಾಯಂ ಆದಂಥ ವ್ಯವಸ್ಥೆ ಇರಬೇಕೆಂದು ಅರ್ಥವಾಗುತ್ತದೆ. ಈಗ ಇವುಗಳ ರಿಪೇರಿಗೆಂದು ಮೊಬೈಲ್ ಮೇಂಟೆನೆನ್ಸ್ ಯೂನಿಟ್‌ನ್ನು ಸಹ ಪ್ರಾರಂಭ ಮಾಡಿದ್ದೀರಿ. ಒಟ್ಟಿನಲ್ಲಿ ಈ ಇಲಾಖೆಯಲ್ಲಿ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಸಂಖ್ಯೆ ಹೆಚ್ಚುತ್ತಾ ಹೋಗುತ್ತಿದೆ. ಇಲ್ಲಿ ಗಂಜಿ ಕುಡಿಯುವವನಿಗೆ ಮೀಸೆ ಹಿಡಿದು ಕೊಳ್ಳುವವರು ನಾಲ್ಕು ಜನ ಎಂಬಂತೆ ಆಗಿದೆ. ಕರಾರುವಕ್ಕಾಗಿ ಹೇಳಬೇಕೆಂದರೆ, ಸರ್ಕಾರದವರು ಮೊಬೈಲ್ ಮೇಂಟೆನೆನ್ಸ್ ಯೂನಿಟ್ ಇಟ್ಟರೂ ಸಹ ನಮ್ಮ ಮಲೆನಾಡು ಭಾಗದಲ್ಲಿ ಕೊಳವೆ ಬಾವಿಗಳು ಯಶಸ್ವಿಯಾಗಿ ಕೆಲಸ ಮಾಡುವುದಿಲ್ಲವೆಂದು ಹೇಳುತ್ತೇನೆ. ಇಲ್ಲಿ ಈ ಕೊಳವೆ ಬಾವಿಗಳು ಕೆಟ್ಟು ಹೋದಾಗ, ಜನರು ನೀರಿಗೆ ಏನು ಮಾಡಬೇಕು ? ಆದಕಾರಣ ಕೊಳವೆ ಬಾವಿಗಳ ಪಕ್ಕದಲ್ಲಿ ಓಪನ್–ವೆಲ್ಸ್ ಸಹ ತೆಗೆಸಿದರೆ, ಅವು ಕೆಟ್ಟಾಗ ಈ ಬಾವಿಯಲ್ಲಿ ಜನರು ನೀರನ್ನು ಸೇದಿಕೊಳ್ಳುತ್ತಾರೆ. ಆದರೆ ಬೋರ್–ವೆಲ್‌ಗಳ ಪಂಪ್‌ಗಳು ಕೆಟ್ಟು ಹೋದ ಸಂದರ್ಭದಲ್ಲಿ ಜನರು ಏನು ಮಾಡಬೇಕೆಂಬುದನ್ನು ಸರ್ಕಾರ ವಿಚಾರ ಮಾಡಬೇಕು. ಇದರ ಬಗ್ಗೆ ನನಗೆ ತಿಳಿದು ಬಂದಿರುವ ಸಂಗತಿ ಏನೆಂದರೆ, ನಾಲ್ಕನೆಯ ಯೋಜನೆಯಲ್ಲಿ ಓಪನ್–ವೆಲ್ಸ್ ತೆಗೆಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿತ್ತು. ಆದರೆ ೫ನೇ ಯೋಜನೆಯಲ್ಲಿ ಓಪನ್–ವೆಲ್ಸ್ ತೆಗೆಸುವ ವಿಚಾರದಲ್ಲಿ ಈ ಇಲಾಖೆಯವರು ಕೇಂದ್ರದವರನ್ನು ಒಪ್ಪಿಸುವುದಕ್ಕೆ ಸಮರ್ಥರಾಗಲಿಲ್ಲವೆಂದು ಕಾಣುತ್ತದೆ, ಈಗ ಇದನ್ನು ಕೈಬಿಟ್ಟಿರುವುದು ವಿಷಾದದ ಸಂಗತಿ ಎಂದು ಹೇಳಬಹುದು. ಇದನ್ನು ಮತ್ತೆ ಯೋಜನೆಯಲ್ಲಿ ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಟ್ರೈಬಲ್ ಡೆವೆಲಪ್‌ಮೆಂಟ್ ಪ್ರೋಗ್ರಾಮ್ ಪ್ರಕಾರ ಹೊಸದಾಗಿ ತೆಗೆದುಕೊಂಡ ಬಾವಿಗಳ ಸಂಖ್ಯೆ ೧೯೭೭–೭೮ರಲ್ಲಿ ೯೦; ಸ್ಪಿಲ್ ಓವರ್ ವರ್ಕ್ ೧೧೪; ಅಂದರೆ ಒಟ್ಟು ೨೦೪ ಆಯಿತು. ಇವುಗಳ ಪೈಕಿ ೨೮ ಬಾವಿಗಳ ಕೆಲಸವನ್ನು ಮುಗಿಸಿದ್ದೀರಿ. ಅಂದರೆ ಕೆಲಸ ಎಷ್ಟು ನಿಧಾನಗತಿಯಿಂದ ನಡೆಯುತ್ತಿದೆ ಎಂಬುದು ಇದರಿಂದ ಅರ್ಥವಾಗುತ್ತದೆ. ಅದೇ ೧೯೭೮–೭೯ರಲ್ಲಿ ಸ್ಪಿಲ್ ಓವರ್ ವರ್ಕ್– ೯೭೧, ಹೊಸದಾಗಿ ತೆಗೆದುಕೊಂಡಿದ್ದು ೨೨೧ ; ಇವುಗಳ ಪೈಕಿ ೨೬೫ ಬಾವಿಗಳ ಕೆಲಸವನ್ನು ಮಾತ್ರ ಮುಗಿಸಲಾಯಿತು. ಈ ಇಲಾಖೆ ಎಷ್ಟು ಚುರುಕಾಗಿ ಕೆಲಸ ಮಾಡುತ್ತಿದೆ ಎಂಬುದನ್ನು ನಾವು ಇದರಿಂದಲೇ ಕಾಣಬಹುದಾಗಿದೆ. ಒಟ್ಟಿನಲ್ಲಿ ಬಾವಿಗಳನ್ನು ತೆಗೆಸತಕ್ಕಂಥ ವಿಚಾರದಲ್ಲಿ ಪ್ರಗತಿ ಸಾಕಷ್ಟು ಇಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಮುಖ್ಯವಾಗಿ ಮಾನ್ಯ ಮಂತ್ರಿಗಳು ನಮ್ಮ ಮಲೆನಾಡು ಭಾಗದ ಕಡೆಗೆ ಹೆಚ್ಚು ನಿಗಾ ವಹಿಸಬೇಕೆಂದು ಹೇಳುತ್ತೇನೆ. ನಾನ್–ಪ್ಲಾನ್ ಪ್ರೋಗ್ರಾಮ್‌ನಲ್ಲಿ ಈ ವರ್ಷವಾದರೂ ಸಹ ಎಲ್ಲಿ ಬೋರ್–ವೆಲ್ಸ್ ಯಶಸ್ವಿಯಾಗುವುದಿಲ್ಲ, ಅಂತಹ ಕಡೆಗಳಲ್ಲಿ ಓಪನ್–ವೆಲ್ಸ್ ತೆಗೆಸಬೇಕೆಂದು ಮತ್ತು ಇರತಕ್ಕಂಥ ಓಪನ್–ವೆಲ್ಸ್‌ನ ಆಳವನ್ನು ಹೆಚ್ಚು ಮಾಡುವ ಬಗ್ಗೆ ಕಾರ್ಯಕ್ರಮ ಕೈಕೊಳ್ಳಲಾಗುವುದೆಂದು ಹೇಳಿದ್ದೀರಿ. ಆದಕ್ಕಾಗಿ ನಾನು ಸರ್ಕಾರಕ್ಕೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ನಮ್ಮ ಭಾಗದಲ್ಲಿ ೧೯೭೭–೭೮ರಲ್ಲಿ ೭೭೬೭ ಬೋರ್–ವೆಲ್ಸ್ ತೆಗೆಸಲಾಯಿತು, ಅದೇ ೧೯೭೮–೭೯ರಲ್ಲಿ ೨೫೧೨ ಬೋರ್‌ವೆಲ್ಸ್ ತೆಗೆಸಲಾಯಿತು ; ಕಳೆದ ವರ್ಷಕ್ಕೂ ಈ ವರ್ಷಕ್ಕೂ ಇಷ್ಟೊಂದು ಕಡಿಮೆಯಾಗುವುದಕ್ಕೆ ಕಾರಣವೇನು ? ಎಲ್ಲ ಕಡೆಗೂ ನೀರಿನ ಸೌಕರ್ಯ ಕಲ್ಪಿಸಿಕೊಡಲಾಗುತ್ತದೆಂದು ಹೇಳುವಾಗ ಇಲ್ಲಿಯ ಪ್ರಗತಿ ಅರ್ಧಕ್ಕೂ ಕಡಿಮೆಯಾಗಲು ಕಾರಣವೇನೆಂಬುದನ್ನು ತಾವು ತಿಳಿಸಬೇಕಾಗುತ್ತದೆ.

ಇನ್ನು ಎಸ್. ಎಫ್. ಡಿ. ಎ. ಪ್ರೋಗ್ರಾಮ್ ಪ್ರಕಾರ ತಾವು ನಮ್ಮ ಜಿಲ್ಲೆಯಲ್ಲಿ ಹೆಚ್ಚಿನ ಪ್ರಗತಿ ತೋರಿಸಿಲ್ಲ. ನಮ್ಮ ಜಿಲ್ಲೆಯಲ್ಲಿ ೨೮ ಲಕ್ಷ ರೂ.ಗಳು ಇದರ ಪ್ರಕಾರ ಬಿಡುಗಡೆಯಾಗಿದ್ದರೂ ಸಹ ಅದರಲ್ಲಿ ೧೨ ಲಕ್ಷ ಚಿಲ್ಲರೆ ಮಾತ್ರ ಖರ್ಚಾಗಿದೆ. ಕಳೆದ ಎರಡು ವರ್ಷಗಳಲ್ಲಿ ಸಾಧಿಸಿರುವಂತಹ ಪ್ರಗತಿ ಇದು. ಒಟ್ಟಿನಲ್ಲಿ ಈ ಇಲಾಖೆಯ ಕೆಲಸದ ಸಾಮರ್ಥ್ಯ ಸಾಲದೆಂದು ಹೇಳಬೇಕಾಗಿದೆ. ಕಮ್ಯೂನಿಟಿ ಡೆವೆಲಪ್‌ಮೆಂಟ್ ಪ್ರೋಗ್ರಾಮ್‌ನಲ್ಲಿಯೂ ಸಹ ಹೋದ ವರ್ಷ ೧೮ ಲಕ್ಷ ರೂ.ಗಳಷ್ಟು ಅಲಾಟ್‌ಮೆಂಟ್ ಇದ್ದರೂ

ಸಹ ೯ ಲಕ್ಷ ರೂ.ಗಳನ್ನು ಮಾತ್ರ ಖರ್ಚು ಮಾಡಲಾಗಿದೆ. ಇದ್ದ ಅಲಾಟ್‌ಮೆಂಟ್‌ನ್ನು ಸಹ ಖರ್ಚು ಮಾಡದಿರುವುದಕ್ಕೆ ಕಾರಣವೇನು ? ಮೊದಲೇ ಈ ಇಲಾಖೆಗೆ ಕೇಳಿರುವ ಬೇಡಿಕೆ ಕಡಿಮೆ ಎಂದು ಹೇಳು ತ್ತಿರುವಾಗ, ಇರುವ ಹಣವನ್ನು ಪೂರ್ತಾ ಖರ್ಚು ಮಾಡದಿರುವುದನ್ನು ನೋಡಿದರೆ ಈ ಇಲಾಖೆಯ ಸಾಮರ್ಥ್ಯ ಎಷ್ಟರ ಮಟ್ಟಿಗೆ ಬೆಳೆದಿದೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಈ ರೀತಿ ಯಾದರೆ ನಾವು ದುರ್ಬಲ ವರ್ಗದವರನ್ನು ಮುಂದೆ ತರುವುದಾದರೂ ಹೇಗೆ? ಒಂದು ಕಡೆ ತಾವು ಹೇಳಿ ದ್ದೀರಿ, ಏನೆಂದರೆ, ಜನಸಂಖ್ಯೆಯನ್ನು ಆಧಾರ ಇಟ್ಟುಕೊಳ್ಳದೆ ಅವಶ್ಯಕತೆ ಇರುವ ಕಡೆಗಳಲ್ಲಿ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯವೆಂದು ಹೇಳಿದ್ದೀರಿ. ಇದರ ಪ್ರಕಾರ ಹೇಳುವು ದಾದರೆ, ನಮ್ಮ ಮಲೆನಾಡಿನ ಭಾಗದಲ್ಲಿ ಜನರು ನೀರಿಗಾಗಿ ಬಹಳ ಕಷ್ಟಪಡುತ್ತಿದ್ದಾರೆ. ಆದಕಾರಣ ಅಲ್ಲಿ ಹೆಚ್ಚು ಹೆಚ್ಚು ಓಪನ್-ವೆಲ್ಸ್ ತೆಗೆಸಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ನಾನು ಹೇಳುವುದೇನೆಂದರೆ, ನಮ್ಮ ಮಾನ್ಯ ಮಂತ್ರಿಗಳು ನಮ್ಮ ಮಲೆನಾಡ ಭಾಗಕ್ಕೆ ಹೆಚ್ಚಿನ ಆಸಕ್ತಿ ವಹಿಸಿ, ಅಲ್ಲಿ ಹೆಚ್ಚು ಹೆಚ್ಚು ಬಾವಿಗಳನ್ನು ತೆಗೆಸುವುದರ ಜೊತೆಗೆ ಎಸ್. ಎಫ್. ಡಿ. ಎ. ಪ್ರೋಗ್ರಾಮನ್ನು, ಮಹಿಳಾ ಮಂಡಳಿಗಳಿಗೆ ಸಂಬಂಧಪಟ್ಟ ಪ್ರೋಗ್ರಾಮನ್ನು, ಅಪ್ಲೈಡ್ ನ್ಯೂಟ್ರಿಷನ್ ಪ್ರೋಗ್ರಾಮನ್ನು ನಮ್ಮ ಹಳ್ಳಿಗಳಿಗೆ ಯಶಸ್ವಿಯಾಗಿ ಮುಟ್ಟಿಸುವುದರಲ್ಲಿ ಈ ಇಲಾಖೆಯನ್ನು ಚುರುಕುಗೊಳಿಸುವುದರ ಕಡೆಗೆ ಮಾನ್ಯ ಮಂತ್ರಿಗಳು ಹೆಚ್ಚಿನ ನಿಗಾ ವಹಿಸಬೇಕೆಂದು ಹೇಳುತ್ತೇನೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ತಮ್ಮ ನಿರ್ಲಿಪ್ತ ಮನೋಭಾವವನ್ನು ಕಡಿಮೆ ಮಾಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತು ಗಳನ್ನು ಮುಗಿಸುತ್ತೇನೆ.

† ಶ್ರೀ ಅಣ್ಣಾರಾವ್ ಭೀಮರಾವ್ ಪಾಟೀಲ (ಆಳಂದ) :—ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಮಾನ್ಯ ಗ್ರಾಮಾಭಿವೃದ್ಧಿ ಮಂತ್ರಿಗಳು ತಮ್ಮ ಖಾತೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸಿದ್ದಾರೆ. ಈಗ ಈ ಸಭೆಯಲ್ಲಿ ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳಾದ ಪ್ರಭಾಕರ್ ಅವರು ಮತ್ತು ಹಣಕಾಸಿನ ಮಂತ್ರಿಗಳು ಹಾಜರಿದ್ದಾರೆ. ಬೇರೆ ಯಾವ ಮಂತ್ರಿಗಳೂ ಇಲ್ಲ. ಇದರಿಂದ ಏನು ಅನ್ನಿಸುತ್ತದೆಂದರೆ ಸರ್ಕಾರಕ್ಕೆ ಈ ಪಂಚಾಯತ್‌ರಾಜ್ ಬಗ್ಗೆ ಆಸಕ್ತಿ ಇಲ್ಲ ಎಂಬುದು ಗೊತ್ತಾಗುತ್ತದೆ. ಆ ಸಂಸ್ಥೆಗಳ ಬಗ್ಗೆ ಎಷ್ಟರಮಟ್ಟಿಗೆ ನಂಬಿಕೆ ಇದೆ ಎಂಬುದು ಇದರಿಂದ ಗೊತ್ತಾಗುತ್ತದೆ. ಪಂಚಾಯತ್‌ರಾಜ್ ಸಂಸ್ಥೆಗಳನ್ನು ೧೯೫೯ರಲ್ಲಿ ಈ ರಾಜ್ಯದಲ್ಲಿ ತಂದಾಗ ಆದರ ಚುನಾವಣೆಗಳನ್ನು ೪ ವರ್ಷಕ್ಕೊಮ್ಮೆ ಮಾಡ ಬೇಕು ಎಂದು ಹೇಳಿದ್ದರೂ ಚುನಾವಣೆಗಳನ್ನು ಯಾವರೀತಿ ನಡೆಸುತ್ತಿದ್ದಾರೆ ಎಂಬುದು ತಮಗೂ ಗೊತ್ತಿದೆ. ಪಂಚಾಯತ್‌ರಾಜ್, ಮುನಿಸಿಪಾಲಿಟಿ ಮತ್ತು ತಾಲ್ಲೂಕು ಬೋರ್ಡ್‌ಗಳ ಚುನಾವಣೆಗಳು ಒಂದಲ್ಲ ಒಂದು ಕಾರಣದಿಂದ ಮುಂದೆ ಹೋಗುತ್ತಿವೆ. ಇದರಿಂದ ಏನು ಗೊತ್ತಾಗುತ್ತದೆಂದರೆ ಸರ್ಕಾರಕ್ಕೆ ಇದರ ಬಗ್ಗೆ ಆಸಕ್ತಿ ಇಲ್ಲ ಎಂಬುದು ಗೊತ್ತಾಗುತ್ತದೆ. ಈಗಾಗಲೇ ಮಾತನಾಡಿದ ನನ್ನ ಸನ್ಮಿತ್ರರು ಹೇಳಿದಹಾಗೆ ಹಳ್ಳಿಗಳಲ್ಲಿರುವ ಪಂಚಾಯಿತಿಗಳು ಮತ್ತು ತಾಲ್ಲೂಕು ಬೋರ್ಡುಗಳ ಅಭಿವೃದ್ಧಿ ಸರಿಯಾಗಿ ಆಗುತ್ತಿಲ್ಲ. ಸರ್ಕಾರ ಪ್ರತಿ ಸಲ ಒಂದು ರೀತಿ ಜಗಳ ನಿರ್ಮಾಣವಾಗತಕ್ಕ ರೀತಿಯಲ್ಲಿ ಕಾರ್ಯ ಮಾಡುತ್ತಿದೆ ಎಂಬುದು ಚುನಾವಣೆಗಳಲ್ಲಿ ಕಂಡುಬರುತ್ತದೆ. ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಟಿ.ಬಿ. ಆದಂತಾಗಿದೆ. ೧೯೫೯ ರಿಂದ ಈ ವರೆಗೆ ಅಂದರೆ ೨೦ ವರ್ಷಗಳು ಈ ಪಂಚಾಯತ್‌ರಾಜ್ ಇಲಾಖೆಗೆ ಆಗಿದೆ. ಇಷ್ಟು ವರ್ಷ ವಯಸ್ಸಾಗಿರುವ ಈ ಇಲಾಖೆಗೆ ಟಿ. ಬಿ. ಖಾಯಿಲೆ ಬಂದಿದೆ. ಇದಕ್ಕೆ ಮಾನ್ಯ ಹಣಕಾಸಿನ ಮಂತ್ರಿಗಳು ಹೆಚ್ಚಿನ ಈ ಸಂಸ್ಥೆಗಳಿಗೆ ಸಹಾಯ ಕೊಟ್ಟು ಟ್ರೀಟ್‌ಮೆಂಟ್ ಮಾಡಲಿಲ್ಲ ಎಂದರೆ ಈ ಟಿ. ಬಿ. ಪೇಷೆಂಟ್ ಸತ್ತುಹೋಗಬಹುದು ಎಂದು ಕಾಣಿಸುತ್ತದೆ. ಮಾನ್ಯ ಹಣಕಾಸಿನ ಮಂತ್ರಿಗಳು ಈ ಸಂಸ್ಥೆಗಳಿಗೆ ಸರಿಯಾದ ಟ್ರೀಟ್‌ಮೆಂಟ್ ಕೊಟ್ಟು ಇವುಗಳನ್ನು ಅಭಿವೃದ್ಧಿಪಡಿಸಬೇಕೆಂದು ಕಳಕಳಿಯಿಂದ ಕೇಳಿಕೊಳುತ್ತಿದ್ದೇನೆ. ಈ ಸಂಸ್ಥೆಗಳ ವಿಕೇಂದ್ರೀಕರಣ ಆಗಬೇಕು ಎಂಬುದಾಗಿ ಬಲವಂತ ರಾವ್ ಮೆಹತಾ ಕಮಿಟಿಯವರಲ್ಲದೆ ಬೇರೆ ಬೇರೆ ಜನರೂ ಹೇಳಿದ್ದಾರೆ. ಮೊನ್ನೆ ತಾನೇ ಚುನಾವಣೆ ಯಾದ ತಕ್ಷಣ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡ್ ಛೇರ್ಮನ್ನರುಗಳ ಸಮ್ಮೇಳನವನ್ನು ಮಾನ್ಯ ಮಂತ್ರಿಗಳಾದ ಪ್ರಭಾಕರ್ ಅವರು ಮಾಡಿದ್ದಾರೆ. ಆ ಸಮ್ಮೇಳನದಲ್ಲೂ ಕೂಡ ಕೆಲವಾರು ಸಲಹೆಗಳು ಬಂದಿವೆ. ಅವುಗಳನ್ನು ತೀವ್ರವಾದ ರೀತಿಯಲ್ಲಿ ಅಮಲಿನಲ್ಲಿ ತರಬೇಕೆಂದು ಕಳಕಳಿಯಿಂದ ಕೇಳಿಕೊಳ್ಳು ತ್ತಿದ್ದೇನೆ. ನಾನು ೧೯೭೦ನೇ ಇಸವಿಯಿಂದ ಕೆಲವು ವರ್ಷಗಳ ಕಾಲ ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿ

ಸೇವೆ ಸಲ್ಲಿಸಿದ್ದೇನೆ. ಆಗ ನಾವು ಪ್ರಾಮಾಣಿಕತೆಯಿಂದ ಮತ್ತು ಸ್ಫೂರ್ತಿಯಿಂದ ಕೆಲಸ ಮಾಡಿದ್ದರಿಂದಾಗಿ ಈಗ ಶಾಸಕನಾಗಿ ಬಂದಿದ್ದೇನೆ ಎಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಅದೇ ರೀತಿ ಅನೇಕ ಜನ ತಾಲ್ಲೂಕ್ ಬೋರ್ಡ್ ಅಧ್ಯಕ್ಷರಾಗಿ, ಸದಸ್ಯರಾಗಿ ಸೇವೆಯನ್ನು ಸ್ಫೂರ್ತಿಯಿಂದ ಮತ್ತು ಪ್ರಾಮಾಣೀಕತೆಯಿಂದ ಮಾಡಿ ಇವತ್ತು ಶಾಸಕರಾಗಿ ಬಂದಿದ್ದಾರೆ. ಈಗ ಪಂಚಾಯತ್‌ರಾಜ್ ಸಂಸ್ಥೆಗಳ ಗತಿ ಏನಾಗಿದೆಯೆಂದರೆ ಅದು ಎಲ್ಲಿ ವೈಡ್-ಅಪ್ ಆಗಿಹೋಗುತ್ತದೆಯೋ ಎಂಬ ಭಯ ನಿರ್ಮಾಣವಾಗಿದೆ. ನಾನು ಆಳಂದ ತಾಲ್ಲೂಕಿನಲ್ಲಿ ತಾಲ್ಲೂಕ್ ಅಭಿವೃದ್ಧಿ ಮಂಡಲಿಯ ಅಧ್ಯಕ್ಷನಾದ ನಂತರ ನೋಡಿದ್ದೇನೆ, ಅಲ್ಲಿಗೆ ಸರ್ಕಾರದಿಂದ ಬರಬೇಕಾದ ಹಣ ಹತ್ತು ವರ್ಷವಾದರೂ ಬರದೇ ತೊಂದರೆಯಾಗಿತ್ತು. ನಾವು ಎಷ್ಟೋ ಸಾರಿ ಇಲ್ಲಿ ಬಂದು ಕೇಳಿಕೊಂಡು ಬರಬೇಕಾದ ಅರಿಯರ್ಸ್ ಕೊಡಿ ಎಂದು ಮಂಜೂರು ಮಾಡಿಸಿದ್ದೇವೆ. ಅಲ್ಲಿ ಸರಿಯಾಗಿ ಸಂಬಳವನ್ನು ಕೊಡುವುದಕ್ಕೆ ಹಣ ಇರುವುದಿಲ್ಲ. ಪಂಚಾಯತಿಗಳ ಕಥೆಯೂ ಇದೇ ರೀತಿ ಆಗಿದೆ. ಆದ್ದರಿಂದ ನಾನು ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಅಲ್ಲಿ ಅಧಿಕಾರದ ವಿಕೇಂದ್ರೀಕರಣ ಮಾಡುವುದರ ಜೊತೆಗೆ ಬಜೆಟ್ ಪ್ರಾವಿಷನ್ ಕೂಡ ಹೆಚ್ಚಾಗಿ ಕೊಡಬೇಕು. ಅಧಿಕಾರಿಗಳಿಗೆ ಅಧಿಕಾರವನ್ನು ಕೊಡುವುದರ ಜೊತೆಗೆ ಹೆಚ್ಚು ಹಣವನ್ನೂ ಕೊಡಬೇಕು. ಇಲ್ಲದಿದ್ದರೆ ಪಂಚಾಯತಿಗಳು ಮತ್ತು ತಾಲ್ಲೂಕು ಬೋರ್ಡ್‌ಗಳು ಯಶಸ್ವಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಬಯಸುತ್ತಿದ್ದೇನೆ; ಉದಾಹರಣೆಗೆ ಹೇಳುವುದಾದರೆ ಬಿ. ಡಿ. ಓ. ಗಳಿಗೆ ಜೀಪಿಗೆ ಪೆಟ್ರೋಲ್ ಖರ್ಚಿಗಾಗಿ ೪೦೦ ರೂಪಾಯಿ ಖರ್ಚು ಮಾಡಬೇಕೆಂದು ಹಿಂದೆ ಅವಕಾಶ ಕೊಟ್ಟಿದ್ದರು. ಈಗ ಪೆಟ್ರೋಲಿನ ಬೆಲೆ ೪ ಪಟ್ಟು ಜಾಸ್ತಿಯಾಗಿದೆ. ಇದರಿಂದ ಕೊಡತಕ್ಕ ಹಣದಲ್ಲಿ ಕೇವಲ ನಾಲ್ಕೈದು ಹಳ್ಳಿಗಳಿಗೆ ಸರಿಯಾಗಿ ಹೋಗಿ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಹಿಂದೆ ಯಾವುದೋ ಕಾಲದಲ್ಲಿ ೪೦೦ ರೂಪಾಯಿ ಪೆಟ್ರೋಲ್‌ಗೋಸ್ಕರ ಖರ್ಚು ಮಾಡಬೇಕೆಂದಿದ್ದರೆ ಅದನ್ನೇ ಈಗಲೂ ಮುಂದುವರಿಸುತ್ತಿದ್ದಾರೆ. ಈಗ ಪೆಟ್ರೋಲ್‌ಗಳ ಬೆಲೆ ಜಾಸ್ತಿಯಾಗಿರುವುದರಿಂದ ಈ ಹಣ ಸಾಕಾಗುವುದಿಲ್ಲ. ಆದ್ದರಿಂದ ನೀವು ಅವರಿಗೆ ಕೊಡತಕ್ಕ ಬಜೆಟ್ ಪ್ರಾವಿಜನ್ ಹೆಚ್ಚು ಮಾಡದೇ ಹೋದರೆ ಕೆಲಸ ಮಾಡುವುದು ಬಹಳ ಕಷ್ಟವಾಗುತ್ತದೆ. ಆಗ ಪ್ರಾಮಾಣೀಕತೆಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ ಅವರಿಗೆ ಹೆಚ್ಚಿಗೆ ಕೆಲಸವನ್ನು ಅಧಿಕಾರವನ್ನು ಕೊಡುವುದರ ಜೊತೆಗೆ ಹೆಚ್ಚಿಗೆ ಹಣವನ್ನೂ ಕೊಡಬೇಕು. ಪಂಚಾಯತ್‌ರಾಜ್ ಸಂಸ್ಥೆಗಳಾಗಿ ಇಷ್ಟು ವರ್ಷವಾದರೂ ಕೂಡ ಕುಡಿಯುವ ನೀರಿನ ಸಮಸ್ಯೆ ಬಗೆಹರಿದಿಲ್ಲ. ಬೋರ್‌ವೆಲ್‌ಗಳನ್ನು ಸಾಕಷ್ಟು ಹಣ ಖರ್ಚು ಮಾಡಿ ನಿರ್ಮಿಸುತ್ತಿದ್ದಾರೆ. ಒಂದು ವೇಳೆ ಆ ಬೋರ್‌ವೆಲ್‌ನಲ್ಲಿ ಕಲ್ಲು ಹೋಗಿ ಸೇರಿದರೆ ಕುಡಿಯುವ ನೀರು ಬರುವುದಿಲ್ಲ. ರೊಕ್ಕ ಮಾತ್ರ ಸರ್ಕಾರದ್ದು ಖರ್ಚಾಗಿದೆ, ಆದರೆ ಕುಡಿಯುವ ನೀರು ಮಾತ್ರ ಸಿಗುತ್ತಿಲ್ಲ. ಅದಕ್ಕಾಗಿ ನಾನು ಕೆಲವು ಸಲಹೆಗಳನ್ನು ಮಾಡಬೇಕೆಂದು ಬಯಸುತ್ತಿದ್ದೇನೆ. ಬೋರ್‌ವೆಲ್ ಕೆಟ್ಟು ಹೋದಾಗ ಅದನ್ನು ರಿಪೇರಿ ಮಾಡಲು ಅನುಕೂಲವಾಗುವಂತೆ ಟೆಕ್ನಿಕಲ್ ಮೆಕ್ಯಾನಿಕ್ಸನ್ನು ಬಿ. ಡಿ. ಓ. ಕಂಟ್ರೋಲ್‌ನಲ್ಲಿ ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಎನ್. ಆರ್. ಡಬ್ಲ್ಯು. ಸ್ಕೀಂ ಹಿಂದಿನ ಸರ್ಕಾರದಲ್ಲೆ ಸ್ಯಾಂಕ್ಷನ್ ಆಗಿದೆ. ಆದರೆ ಅದರ ಕಾರ್ಯ ಮಾತ್ರ ೧೦ ಪರ್ಸೆಂಟಿನಷ್ಟೂ ಯಶಸ್ವಿಯಾಗಿಲ್ಲ. ಮೆಕ್ಯಾನಿಕಲ್ ಡಿಫೆಕ್ಟ್‌ನಿಂದಾಗಿ ಕೆಲಸಕಾರ್ಯಗಳು ನಿಂತುಹೋಗಿದೆ. ಅದರಿಂದ ನಾನು ಮೊದಲೇ ಹೇಳಿದಂತೆ ಟೆಕ್ನಿಕಲ್ ಎಕ್ಸ್‌ಪರ್ಟಗಳನ್ನು ಕೊಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಮಲೇರಿಯಾ ಕಂಟ್ರೋಲ್ ಕೂಡ ಇನ್ನೂ ಮಾಡಿಲ್ಲ. ಆದ್ದರಿಂದ ಈ ದಿಸೆಯಲ್ಲಿ ಕಾರ್ಯ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈಗಿರತಕ್ಕ ಮಂತ್ರಿ ಮಂಡಲದಲ್ಲಿ ಎಲ್ಲರಿಗಿಂತ ಹೆಚ್ಚು ಗರೀಬರು ಎಂದರೆ ಶ್ರೀಮಾನ್ ಕೆ. ಪ್ರಭಾಕರ್ ಅವರು, ಗ್ರಾಮೀಣ ಅಭಿವೃದ್ಧಿಗೆ ಬೇಕಾಗಿರತಕ್ಕ ಸ್ಫೂರ್ತಿ ಅವರಲ್ಲಿಲ್ಲ. ನಾನು ಅವರನ್ನು ಕೇಳುತ್ತೇನೆ, ನೀವು ಮಂತ್ರಿಗಳಾದ ಮೇಲೆ ಎಷ್ಟು ತಾಲ್ಲೂಕುಗಳಿಗೆ ಭೇಟಿ ನೀಡಿದ್ದೀರಿ ಎಂದು. ನಮ್ಮ ತಾಲ್ಲೂಕಿನಲ್ಲಂತೂ ಇವರ ಹೆಸರನ್ನೇ ಕೇಳಿಲ್ಲ, ಮೋರೆ ಅಂತೂ ನೋಡೇ ಇಲ್ಲ. ಇವರ ಫೋಟೋ ಕೂಡ ಯಾವ ಪತ್ರಿಕೆಗಳಲ್ಲೂ ಬಂದಿಲ್ಲ. ಯಾವ ತಾಲ್ಲೂಕುಗಳಿಗೂ ಸರಿಯಾಗಿ ಭೇಟಿ ಕೊಡದೇ ಕೆಲಸ ಕಾರ್ಯಗಳು ಯಾವ ರೀತಿ ಆಗುತ್ತಿದೆ ಎಂಬುದನ್ನು ನೋಡದೆ ಇದ್ದರೆ ಯಾವ ರೀತಿ ಗ್ರಾಮಾಭಿವೃದ್ಧಿಯಾಗುತ್ತದೆ ? ಇವರಿಗೆ ಸ್ಫೂರ್ತಿಯಿಂದ ಕೆಲಸ ಮಾಡುವುದಕ್ಕೆ ಮನಸ್ಸಿಲ್ಲ. ಆದ್ದರಿಂದ ಇನ್ನು ಮುಂದಾದರೂ ಮಾನ್ಯ ಮಂತ್ರಿಗಳು ಸ್ಫೂರ್ತಿಯಿಂದ ಕೆಲಸ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಮತ್ತು ಪಂಚಾಯತ್‌ರಾಜ್ ಬಗ್ಗೆ ಸಮಿತಿಗಳು ಮತ್ತು ಇತರರು ಏನೇನು ಶಿಫಾರಸುಗಳನ್ನು ಮತ್ತು ಸಲಹೆಗಳನ್ನು ಮಾಡಿದ್ದಾರೋ ಅವುಗಳನ್ನೆಲ್ಲಾ ತೀವ್ರವಾಗಿ ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಪಂಚಾಯಿತಿ ಛೇರ್ಮನ್ನರು ಶಾಸಕರನ್ನು ಕರೆದು ಒಂದು ಮೀಟಿಂಗ್

ಮಾಡಿದಾಗ ಅಲ್ಲಿ ಕೆಲವಾರು ಸಲಹೆಗಳು ಬಂದವು. ಮಾನ್ಯ ಮುಖ್ಯ ಮಂತ್ರಿಗಳೂ ಕೆಲವು ಮಾತುಗಳನ್ನು ಹೇಳಿದ್ದಾರೆ. ಇದನ್ನೆಲ್ಲಾ ಗಮನಿಸಬೇಕು. ಚೆನ್ನಾಗಿ ಕೆಲಸ ಮಾಡತಕ್ಕ ಕಮಿಷನರ್ ಅವರು ಈ ಇಲಾಖೆಗೆ ಬಂದಿದ್ದಾರೆ ಎಂದು ಕೇಳಿದ್ದೇನೆ. ಅವರ ಸಹಕಾರದಿಂದ ಮಾನ್ಯ ಪ್ರಭಾಕರ್ ಅವರು ಇನ್ನೂ ಹೆಚ್ಚು ಸ್ಫೂರ್ತಿಯಿಂದ ಚೆನ್ನಾಗಿ ಕೆಲಸ ಮಾಡಬೇಕೆಂದು ಕೇಳಿಕೊಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಏನು ಮಾತುಗಳನ್ನು ಹೇಳಿದ್ದಾರೆ ಅದು ಮಾತಿನಲ್ಲೇ ಉಳಿಯದೆ ರೈಟಿಂಗ್‌ನಲ್ಲಿ ಜಿಲ್ಲಾಧಿಕಾರಿಗಳಿಗೆ ಮತ್ತು ಬ್ಲಾಕ್ ಡೆವಲಪ್ಮೆಂಟ್ ಆಫೀಸರ್‌ಗಳಿಗೆ ಕಳುಹಿಸಿಕೊಡಬೇಕೆಂದು ಕೇಳಿಕೊಳುತ್ತೇನೆ. ಇಂಡಸ್ಟ್ರಿಯಲ್ ಡೆವಲಪ್ಮೆಂಟ್ ತಾಲ್ಲೂಕು ಮಟ್ಟದಲ್ಲಿ ಸರಿಯಾಗಿ ಆಗುತ್ತಿಲ್ಲ. ಹಿಂದೆ ಹೈದರಾಬಾದ್ ಸರ್ಕಾರದಲ್ಲಿ ಪ್ರತಿಯೊಂದು ಬ್ಲಾಕ್‌ನಲ್ಲೂ ಇಂಡಸ್ಟ್ರಿಯಲ್ ಎಕ್ಸ್‌ಟೆನ್‌ಷನ್ ಆಫೀಸರ್‌ಗಳೆಂದು ಇದ್ದರು. ಈ ಸರ್ಕಾರದವರು ಅದನ್ನೆಲ್ಲಾ ತೆಗೆದಿದ್ದಾರೆ ಯಾತಕ್ಕೆ ಆ ರೀತಿ ತೆಗೆದಿದ್ದಾರೋ ಗೊತ್ತಿಲ್ಲ. ಕೈಗಾರಿಕಾಭಿವೃದ್ಧಿ ಆಗುವುದಕ್ಕೋಸ್ಕರ ಇಂಡಸ್ಟ್ರಿಯಲ್ ಎಕ್ಸ್‌ಟೆನ್‌ಷನ್ ಆಫೀಸರ್‌ಗಳನ್ನು ತಾಲ್ಲೂಕು ಮಟ್ಟದಲ್ಲಿ ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇವತ್ತು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತಿದ್ದೀರಿ. ವಿದ್ಯುಚ್ಛಕ್ತಿ ತೆರಿಗೆಯನ್ನು ವಸೂಲು ಮಾಡಿ ಪಂಚಾಯತಿಯವರು ಕೆ. ಇ. ಬಿ. ಯವರಿಗೆ ಕಟ್ಟುತ್ತಿದ್ದಾರೆ. ಪಂಚಾಯಿತಿಯವರಿಂದ ಹಣ ಕಟ್ಟುವುದಕ್ಕೆ ಸಾಧ್ಯವಾಗದೇ ಇರುವುದರಿಂದ ಕೆ. ಇ. ಬಿ. ಯವರು ಲೈಟ್ ಕೊಡುವುದಿಲ್ಲ. ಹೀಗಾಗಿ ಒಂದು ಊರಿನಲ್ಲೂ ದೀಪಗಳಿಲ್ಲದ ಹಾಗೆ ಆಗಿದೆ. ಆದ್ದರಿಂದ ಕೆಲವಷ್ಟು ವರ್ಷವಾದರೂ ಅಲ್ಲಿ ಉಚಿತವಾಗಿ ಅವರಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಪಂಚಾಯಿತಿಗಳಲ್ಲಿ ರೆಕಾರ್ಡ್‌ಗಳನ್ನು ಮೈಂಟೈನ್ ಮಾಡುವುದಕ್ಕೆ ಕಾರ್ಯದರ್ಶಿಗಳು ಬೇಕು. ಆದರೆ ಪಂಚಾಯಿತಿಯಲ್ಲಿ ಅವರಿಗೆ ಪಗಾರ ಕೊಡುವುದಕ್ಕೂ ಕೂಡ ಶಕ್ತಿ ಇರುವುದಿಲ್ಲ. ಆದ್ದರಿಂದ ಕೆಲವಷ್ಟು ವರ್ಷವಾದರೂ ಕೂಡ ಸರ್ಕಾರ ತಾವೇ ಇವರಿಗೆ ಪಗಾರವನ್ನು ಕೊಡುವ ವ್ಯವಸ್ಥೆಯನ್ನು ಮಾಡಿದರೆ ಚೆನ್ನಾಗಿ ಕೆಲಸವಾಗುತ್ತದೆ. ಒಂದು ವೇಳೆ ತಮ್ಮ ಕೈಯಲ್ಲಿ ಸ್ಯಾಲರಿ ಕೊಡುವುದಕ್ಕೆ ಆಗದೇ ಇದ್ದರೆ ರೆವಿನ್ಯೂ ಇನ್‌ಸ್ಪೆಕ್ಟರ್‌ಗಳನ್ನು ಯಾವರೀತಿ ಇಟ್ಟಿದ್ದೀರಿ ಆ ರೀತಿ ಅಸಿಸ್ಟೆಂಟ್ ರೆವಿನ್ಯೂ ಇನ್‌ಸ್ಪೆಕ್ಟರ್ ಎಂದು ಮಾಡಿ ಅವರಿಗೆ ಟ್ಯಾಕ್ಸ್ ವಸೂಲಿ ಇನ್ನಿತರ ಕೆಲಸಕಾರ್ಯಗಳನ್ನು ಅವರಿಗೆ ಒಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

[ಚೇರ್‌ಮನ್ [ಶ್ರೀ ಎಂ. ಸಿ. ಬಸಪ್ಪನವರು] ಅಧ್ಯಕ್ಷ ಪೀಠವನ್ನು ಅಲಂಕರಿಸಿದರು]

ಇನ್ನು ಹಾರ್ಟಿಕಲ್ಚರ್, ವೆಟರಿನರಿ, ಪಶುಸಂಗೋಪನ ಇವು ಬಹಳ ಮುಖ್ಯವಾದ ಉದ್ಯಮಗಳಾಗಿರುತ್ತದೆ. ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಿ ತಾಲ್ಲೂಕ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ಇರತಕ್ಕಂಥ ಎಕ್ಸ್‌ಟೆನ್‌ಷನ್ ಆಫೀಸರ್, ವೆಟರಿನರಿ ಡಾಕ್ಟರ್‌ಗಳು ತಾಲ್ಲೂಕ್ ಮಟ್ಟದಲ್ಲಿ ಏನು ಇರುತ್ತಾರೆ ಅವರು ಡವೆಲಪ್‌ಮೆಂಟ್ ಬೋರ್ಡ್‌ಗಳ ಕಂಟ್ರೋಲ್‌ನಲ್ಲಿ ಕೆಲಸ ಮಾಡಲು ಆದೇಶವನ್ನು ಕೊಡಬೇಕೆಂದು ಹೇಳುತ್ತೇನೆ

೨-೦೦ ಪಿ. ಎಂ.

ಇನ್ನು ಹಳ್ಳಿಗಳಲ್ಲಿ ಸ್ಯಾನಿಟೇಷನ್ ವ್ಯವಸ್ಥೆ ಸರಿಯಾಗಿರುವುದಿಲ್ಲ. ಸ್ವಾತಂತ್ರ್ಯ ಬಂದು ೩೦ ವರ್ಷಗಳು ಕಳೆದಿದ್ದರೂ ಕೂಡ ಈ ಒಂದು ವ್ಯವಸ್ಥೆ ಸರಿಯಾಗಿಯಿಲ್ಲದೆ ಇಂದಿಗೂ ಕೂಡ ಹೆಣ್ಣು ಮಕ್ಕಳು ಬಯಲು ಪ್ರದೇಶದಲ್ಲಿ ಕುಳಿತುಕೊಳ್ಳುತ್ತಿರುವುದನ್ನು ನೋಡಿದರೆ ನಾಚಿಕೆ ಪಡುವಂತ ವಿಷಯವಾಗಿರುತ್ತದೆ, ಸರ್ಕಾರದವರನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದೆಲ್ಲ ಬಹಳ ಮೈನರ್ ವಿಚಾರ ಇರುತ್ತದೆ. ಆದ್ದರಿಂದ ಇದನ್ನೆಲ್ಲ ಪ್ರತಿಯೊಂದು ಹಳ್ಳಿಗೂ ವ್ಯವಸ್ಥೆಯನ್ನು ಮಾಡುವತ್ತ ಮಾನ್ಯ ಮಂತ್ರಿಗಳು ಗಮನವನ್ನು ಹರಿಸಬೇಕೆಂದು ಹೇಳುತ್ತೇನೆ. ಅಲ್ಲದೆ ಇದರಿಂದ ಗೋಬರ್ ಗ್ಯಾಸ್ ಕೂಡ ತಯಾರು ಮಾಡುವುದಕ್ಕೆ ಅನುಕೂಲವಾಗುತ್ತದೆ.

ಇನ್ನು ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಬಜೆಟ್ ಏನು ಅಲಾಟ್ ಮಾಡಿರುತ್ತಾರೆ ಅದು ಸಾಕಷ್ಟು ಕೊಟ್ಟಿದ್ದರೂ ಕೂಡ ಅದನ್ನು ಯಾವ ರೀತಿ ವಿತರಣೆ ಮಾಡಬೇಕು ಆ ರೀತಿಯಲ್ಲಿ ವಿತರಣೆ ಮಾಡಿಲ್ಲ. ಇದನ್ನೆಲ್ಲ ತಾಲ್ಲೂಕು ಬೋರ್ಡ್ ಕಂಟ್ರೋಲ್‌ಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಕೋಆಪರೇಟೀವ್ ಡಿಪಾರ್ಟ್‌ಮೆಂಟನ್ನು ಸ್ಫೂರ್ತಿಯಾಗಿ ಕೆಲಸ ಮಾಡುವತ್ತ ವಿಚಾರ ಮಾಡಬೇಕು. ಪಂಚಾಯತಿ ಎಕ್ಸ್‌ಟೆನ್‌ಷನ್ ಆಫೀಸರ್ ಏನು ಇರುತ್ತಾರೆ ಅವರು ಯಾವ ಜಾಗದಲ್ಲಿ ಏನು ಕೆಲಸ ಮಾಡುತ್ತಿದ್ದಾರೆ ಎನ್ನುವುದು ಗೊತ್ತಿಲ್ಲ. ಪಂಚಾಯತಿ ರಾಜ್ಯ ಎಕ್ಸ್‌ಟೆನ್‌ಷನ್ ಆಫೀಸರ್‌ಗಳಿಗೆ ಡೆವಲಪ್‌ಮೆಂಟ್ ಆಫೀಸರ್‌ಗಳಾಗಿ ಪ್ರಮೋಷನ್‌ಗಳನ್ನು ಕೊಟ್ಟಿಲ್ಲ ಹೈಕೋರ್ಟಿನಲ್ಲಿ ತೀರ್ಮಾನವಾಗಿ ಬಂದು

ಮೂರು ತಿಂಗಳುಗಳು ಕಳೆದಿರುತ್ತವೆ. ಅವರುಗಳನ್ನು ಕೇಳಿದರೆ ಯಾವ ಕೆಲಸವನ್ನು ಮಾಡಲು ಬಡ್ಜೆಟ್ ಇಲ್ಲದೆ ಏನೂ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲವೆಂದು ಹೇಳುತ್ತಾರೆ. ಕೆಲಸ ಮಾಡುವುದಕ್ಕೆ ಸ್ಫೂರ್ತಿಯೂ ಕೂಡ ಇಲ್ಲ. ಮಾನ್ಯ ಮಂತ್ರಿಗಳು ಬಹಳ ಓಲ್ಡ್ ಏಜ್‌ನವರು ಇದ್ದಾರೆ. ಅವರು ನಮಗೆ ಪ್ರಮೋಷನ್ ಕೂಡ ಕೊಡದಿದ್ದರೆ ನಾವು ಹೇಗೆ ಸ್ಫೂರ್ತಿಯಿಂದ ಕೆಲಸಗಳನ್ನು ಮಾಡಲು ಮನಸ್ಸು ಬರುತ್ತದೆಂದು ಸ್ಪಷ್ಟವಾಗಿ ಹೇಳುತ್ತಾರೆ. ಆದ್ದರಿಂದ ಮಾನ್ಯ ಅಧ್ಯಕ್ಷರೆ ಸಾಕಷ್ಟು ವಿಷಯವನ್ನು ಹೇಳಬೇಕೆಂದಿದ್ದೆ. ಆದರೆ ವೇಳೆಯಿಲ್ಲದ ಕಾರಣ ಇನ್ನು ಮಹಿಳಾ ಮಂಡಳಿಯ ವಿಷಯದ ಬಗ್ಗೆ ಹೇಳುವುದಾದರೆ ಅಂಕಿ ಅಂಶಗಳ ಪ್ರಕಾರ ೧೫ ಪರ್ಸೆಂಟ್‌ನಷ್ಟು ಮಹಿಳೆಯರು ಇರುತ್ತಾರೆಂದು ಹೇಳಿರುತ್ತೀರಿ. ಆದ್ದರಿಂದ ಸಾಕಷ್ಟು ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ಗಳನ್ನು ನಡೆಸಬೇಕೆಂದು ಹೇಳುತ್ತೇನೆ. ಗ್ರಾಮಾಂತರ ಪ್ರದೇಶ-ಗಳಲ್ಲಿ ಅಂಬರ್ ಚರಕ ಇವೇ ಮುಂತಾದ ಉದ್ಯೋಗಗಳನ್ನು ಹೆಣ್ಣುಮಕ್ಕಳಿಗೆ ಒದಗಿಸಿದ್ದೇ ಆದರೆ ೧೫ ಪರ್ಸೆಂಟ್ ಪಾಪ್ಯುಲೇಷನ್ ಏನು ಇರುತ್ತಾರೆ. ಇವರ ಜೀವನದಲ್ಲಿ ಬದಲಾವಣೆಯೂ ಆಗುವುದಕ್ಕೆ ಸಾಧ್ಯವಾಗುತ್ತದೆ, ಮತ್ತು ಆರ್ಥಿಕ, ಸಾಮಾಜಿಕ ಮತ್ತು ನೈತಿಕವಾಗಿ ಡೆವಲಪ್‌ಮೆಂಟ್ ಆಗಲು ಇದನ್ನು ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಯೂತ್ ಕಾರ್ಯಕ್ರಮದ ಬಗ್ಗೆ ಹೇಳುವುದಾದರೆ ಇದು ಯಾವ ಭಾಗದಲ್ಲಿ ನಡೆಯುತ್ತಿದೆ ಎನ್ನುವುದು ತಿಳಿಯುತ್ತಿಲ್ಲ. ಮಾನ್ಯ ಸಚಿವರು ನಮ್ಮನ್ನು ಕರೆದುಕೊಂಡು ಹೋಗಿ ತೋರಿಸಿದರೆ, ಅಲ್ಲಿಯ ಚಟುವಟಿಕೆಗಳನ್ನು ನೋಡಿ ನಾವು ಅದರಂತೆ ಮಾಡಲು ಪ್ರಯತ್ನ ಪಡಬಹುದು. ಸರ್ಕಾರದವರು ಕೊಟ್ಟಿರತಕ್ಕಂಥ ಬಡ್ಜೆಟ್ಟನ್ನು ನಮ್ಮ ಭಾಗಕ್ಕೆ ಮಾನ್ಯ ಮಂತ್ರಿಗಳು ಸಂಚಾರ ಮಾಡಿ ಏನೇನು ಡೆವಲಪ್‌ಮೆಂಟ್ಸ್ ಆಗಬೇಕಾಗಿರುತ್ತದೆ, ಅದಕ್ಕೆಲ್ಲ ಸರಿಯಾದ ರೀತಿಯಲ್ಲಿ ಹಣವನ್ನು ವಿನಿಯೋಗಿಸುವತ್ತ ಗಮನವನ್ನು ಕೊಡಬೇಕೆಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

" ಶ್ರೀ ಕೆ. ಬಿ. ಮಲ್ಲಪ್ಪ:—(ಅರಕಲಗೂಡು)

ಸನ್ ಮಾನ್ಯ ಅಧ್ಯಕ್ಷರೆ ಮಾನ್ಯ ಪಂಚಾಯತಿ ರಾಜ್ಯ ಮತ್ತು ಅಭಿವೃದ್ಧಿ ಯೋಜನಾ ಮಂತ್ರಿಗಳು ಮಂಡಿಸಿರತಕ್ಕಂಥ ಬಡ್ಜೆಟ್ಟನ್ನು. ಮತ್ತು ರೂರಲ್ ಡೆವಲಪ್‌ಮೆಂಟ್ ಬಡ್ಜೆಟ್. ಕಮ್ಯೂನಿಟಿ ಡೆವಲಪ್‌ಮೆಂಟ್ಸ್ ಏನು ಇರುತ್ತದೆ ಅದನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತಿದ್ದೇನೆಂದು ವಿಧಿಯಿಲ್ಲದೆ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಏತಕ್ಕೆಂದರೆ ಕಮ್ಯೂನಿಟಿ ಡೆವಲಪ್‌ಮೆಂಟ್ ಏನು ಇರುತ್ತದೆ ಇದು ನಮ್ಮ ರಾಜ್ಯದಲ್ಲಿ ಇದೆಯೋ ಇಲ್ಲವೋ ಎನ್ನುವ ಸಂಶಯ ಪ್ರತಿಯೊಬ್ಬರಿಗೂ ಇರುತ್ತದೆ. ಇಲ್ಲಿ ಅದಕ್ಷತೆ ಎನ್ನತಕ್ಕಂಥಾದ್ದು ತಾಂಡವಾಡುತ್ತಿದೆ. ಟಾರ್ಚ್ ಹಾಕಿ ಹುಡುಕಿದರೂ ಕೂಡ ಏನು ಮಾಹಿತಿಗಳು ಸಿಕ್ಕುತ್ತಿಲ್ಲ. ನೂರಾರು ಹೊಸ ಹೊಸ ಯೋಜನೆಗಳು ಬರುತ್ತಾ ಇದೆ. ಹೀಗೆ ಬರುತ್ತಾ ಇರತಕ್ಕಂಥ ಹೊಸ ಹೊಸ ಯೋಜನೆಗಳನ್ನು ಪಾಪ ವಯೋವೃದ್ಧರಾದ ಶ್ರೀ ಪ್ರಭಾಕರ್‌ರವರು ನಿರ್ವಹಿಸಲು ಸಾಧ್ಯವೇ ಎನ್ನುವ ಅನುಮಾನ ನಮ್ಮೆಲ್ಲರಿಗೂ ಉಂಟಾಗಿರುತ್ತದೆ. ಎಪ್ಪತ್ತು ವರ್ಷಗಳಾಗಿರುವ ವಯೋವೃದ್ಧರಾಗಿರುವ ಮಾನ್ಯ ಸಚಿವರು ಇಷ್ಟೊಂದು ಹೊಸ ಹೊಸ ಸ್ಕೀಮ್‌ಗಳನ್ನು ನಿರ್ವಹಿಸುವು-ದಕ್ಕೆ ಸಾಧ್ಯವಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಲಾಖೆಯಲ್ಲಿ ಅದಕ್ಷತೆ ತಾಂಡವಾಡು ತ್ತಿರತಕ್ಕಂಥ ಸಂದರ್ಭದಲ್ಲಿ ಅವರಿಗೆ ಪಂಚಾಯಿತಿ ರಾಜ್ಯ ನ್ಯೂಟ್ರೀಷನ್ ಪ್ರೋಗ್ರಾಮ್, ಕೋಆಪರೇಟೀವ್ ಅದರ ಜೊತೆಗೆ ಎಂಪ್ಲಾಯ್‌ಮೆಂಟ್ ಅಫರ್‌ಮೇಷನ್ ಸ್ಕೀಮ್ ಕೂಡ ಸೇರಿರುತ್ತದೆಂದು ತಿಳಿದುಕೊಂಡಿ-ರುತ್ತೇನೆ. ಇದು ಅವರಿಗೆ ಬಂದಿದ್ದರೆ ಒಳ್ಳೆಯದೆಂದು ಹೇಳುತ್ತೇನೆ. ಕೋಆಪರೇಟೀವ್ ಅದು ಇಲ್ಲದಿದ್ದರೆ ಇನ್ನೂ ಸಂತೋಷ ಪಡಬಹುದು. ಇಷ್ಟೊಂದು ಇಲಾಖೆಗಳು ಇಲ್ಲದಿದ್ದರೂ ಈ ಒಂದು ಖಾತೆಗೆ ಕೊಡ ತಕ್ಕಂಥ ದುಡ್ಡು ಒಂದು ವ್ಯವಸ್ಥಿತವಾದ ರೀತಿಯಲ್ಲಿ ವಿನಿಯೋಗವಾಗುತ್ತಿಲ್ಲ ಅದಕ್ಷತೆಯಿಂದ ಡಿಪಾರ್ಟ್‌ಮೆಂಟ್ ನಡೆದುಕೊಳ್ಳುತ್ತಿದೆ. ಡಿಪಾರ್ಟ್‌ಮೆಂಟ್‌ನ್ನು ಸರಿಯಾದ ಹಿಡಿತದಲ್ಲಿ ಇಟ್ಟುಕೊಂಡು ನಡೆಸುತ್ತಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ೧೮ ಲಕ್ಷ ರೂಪಾಯಿಗಳನ್ನು ಈ ಒಂದು ಖಾತೆಗೆ ಖರ್ಚು ಮಾಡಲು ಕೊಟ್ಟಿದ್ದರೆ ಅದರಲ್ಲಿ ೫೦ ಪರ್ಸೆಂಟ್‌ನಷ್ಟು ಖರ್ಚು ಮಾಡದೆ ೯ ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆಂದರೆ ಇಲಾಖೆಯ ಅಸಮರ್ಥತೆಯನ್ನು ತೋರಿಸುತ್ತದೆ. ನ್ಯೂಟ್ರೀಷನ್ ಪ್ರೋಗ್ರಾಮ್‌ನವರು ಅರಸೀಕೆರೆ ತಾಲ್ಲೂಕಿನಲ್ಲಿ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದೆ ಎಂದು ನೋಡಿದರೆ ಒಂದು ಜೀಪನ್ನು ಕೊಟ್ಟಿರುತ್ತಾರೆ. ಇದು ನಮ್ಮ ತಾಲ್ಲೂಕಿನಲ್ಲಿ ಸುಮ್ಮನೆ ತಿರುಗಾಡುತ್ತಿದೆಯೋ ಹೊರತು ಎಲ್ಲಿ ಏನು ಕೆಲಸ ಮಾಡುತ್ತಿದೆ ಎನ್ನುವುದನ್ನು ನೋಡಿದರೆ ಏನೇನು ಮಾಡಿಲ್ಲ. ಜನರನ್ನು ಕೇಳಿದರೆ ಅವರಿಗೆ ಇದರ ಬಗ್ಗೆ ಅನುಭವವೇ ಇಲ್ಲ.

ಇದರ ಬಗ್ಗೆ ಸರಿಯಾಗಿ ಪ್ರೋಗ್ರಾಂ ಹಾಕುವಂತೆ ಅಳವಡಿಸಬೇಕು. ಮತ್ತು ಈ ವಿಷಯದಲ್ಲಿ ಸರಿಯಾಗಿ ಪ್ರಾಪಗಾಂಡ ಮಾಡುವಂತೆ ಹೇಳಬೇಕು. ಆ ರೀತಿಯಾಗಿ ಬಿ.ಡಿ.ಓ. ಅವರು ಮತ್ತು ಸಂಬಂಧ ಪಟ್ಟವರು ಸ್ಟ್ಯಾಫ್‌ನವರು ಮಾಡಿಲ್ಲಾ. ಅವರು ಜನಗಳಿಗೆ ಈ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಕೊಟ್ಟಿಲ್ಲ ಎಂದು ಹೇಳುತ್ತೇನೆ.

ಇನ್ನು ಶ್ರೀಮಾನ್ ಎಂ.ಸಿ. ಬಸಪ್ಪನವರು ಮತ್ತು ಶ್ರೀಮಾನ್ ಚೌಡಯ್ಯನವರು ಏನು ಹೇಳಿದರು ಎಂದರೆ ಮಂತ್ರಿಗಳು ಯಾವಾಗಲಾದರೂ ಕೂಡ ನಮ್ಮ ಕ್ಷೇತ್ರಕ್ಕೆ ಬೇಟಿ ಕೊಟ್ಟರೆ ಆ ಬಗ್ಗೆ ಒಂದು ಟೂರ್‌ಪ್ರೋಗ್ರಾಂ ಕಾಪಿಯನ್ನು ನಮಗೆ ಕಳುಹಿಸುವುದಿಲ್ಲಾ ಎಂದು. ಮತ್ತೇನು ಹೇಳಿದರು ಎಂದರೆ ನಮ್ಮ ತಾಲ್ಲೂಕಿನ ಬಗ್ಗೆ ಏನಾದರೂ ಕಷ್ಟಸುಖಗಳನ್ನು ಹೇಳಿಕೊಳ್ಳೋಣ ಎಂದರೆ ಅದಕ್ಕೆ ಅವಕಾಶ ವನ್ನೂ ಸಹ ಮಾಡಿಕೊಡುವುದಿಲ್ಲ ಎಂದು ಹೇಳಿದರು. ಈ ಬಗ್ಗೆ ನಾನು ಹೇಳಬೇಕಾದರೆ ನಿಮಗಿಂತಲೂ ಕೂಡ ನಾನು ಈ ವಿಷಯದಲ್ಲಿ ತುಂಬಾ ಅನುಭವಿಸಿದ್ದೇನೆ ಎಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ಇದಕ್ಕೆ ಸಂಬಂಧಪಟ್ಟಂತೆನೇ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಸಂದರ್ಭ ದಲ್ಲಿ ಶ್ರೀಮತಿ ಮನೋರಮಾ ಮಧ್ವರಾಜ್ ಅವರು ಇದ್ದಿದ್ದರೆ ಚೆನ್ನಾಗಿತ್ತು. ಈಗ ಅವರು ಇಲ್ಲಿ ಇಲ್ಲಾ. ಅವರ ಎದುರಿಗೇನೇ ಈ ಮಾತು ಹೇಳಿದ್ದರೆ ಚೆನ್ನಾಗಿತ್ತು ಎಂದು ನನಗೆ ಅನಿಸುತ್ತದೆ. ಅವರು ಹೊನ್ನಾಳಿಯ ಒಂದು ಹೈಸ್ಕೂಲಿನ ಸಮಾರಂಭಕ್ಕೆ ಬಂದಿದ್ದರು. ಬಹುಶ; ಆ ಸಮಾರಂಭ ಮಾರ್ಚಿ ೫ನೇ ತಾರೀಕೋ ಅಥವಾ ಏಪ್ರಿಲ್ ೫ನೇ ತಾರೀಖೋ ಇರಬಹುದು. ಆ ಒಂದು ಇನ್‌ವಿಟೇಷನ್ ಕಾರ್ಡ್‌ನಲ್ಲಿ ನನ್ನ ಹೆಸರನ್ನೂ ಸಹ ಪ್ರಿಂಟ್ ಮಾಡಿಸಿರಲಿಲ್ಲಾ ನಾನು ಈ ಹೈಸ್ಕೂಲ್‌ನ ಪ್ರೆಸಿಡೆಂಟ್ ಆಗಿದ್ದೆ. ಅಷ್ಟೇ ಅಲ್ಲದೆ ಈ ಹೈಸ್ಕೂಲ್‌ನ್ನು ನೋಡಿಕೊಳ್ಳುತ್ತಿದ್ದವನು ನಾನೇ, ನಡೆ ಸುತ್ತಿದವನು ನಾನೇ, ಈ ಸ್ಕೂಲನ್ನು ಕಟ್ಟಿಸಿದವನು ನಾನೇ, ಮತ್ತು ಈ ಬಗ್ಗೆ ಅಭಿವೃದ್ಧಿ ಮಾಡಬೇಕು ಅಂತ ಯೋಚನೆ ಮಾಡಿದವನು ನಾನೇ. ಹೀಗಿರುವಾಗ ಈ ಹೈಸ್ಕೂಲಿನ ಒಂದು ಸಮಾರಂಭಕ್ಕೆ ಮಾನ್ಯ ಮಂತ್ರಿಗಳು ಬಂದಾಗ ಅಲ್ಲಿ ಎಲ್ಲಾ ಜನರೂ ಸೇರಿದಾಗ ಅವರು ಏನು ಭಾಷಣ ಮಾಡಿದರು ಎಂದರೆ ನೀವು ನಮ್ಮ ಪಕ್ಷದವರನ್ನು ಎಲೆಕ್ಟ್ ಮಾಡಿದ್ದರೆ ಚೆನ್ನಾಗಿತ್ತು ಅಂತ ಹೇಳಿದರಂತೆ. ಈ ಬಗ್ಗೆ ಅಲ್ಲಿ ಗಲಾಟೆಯೂ ಆಯಿತು. ಮತ್ತು ಅಲ್ಲಿ ಜನರೂ ಸಹ ಸಭಾತ್ಯಾಗ ಮಾಡಿದ್ದಾರೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಆಫಿಷಿಯಲ್ ಟೂರ್ ಪ್ರೋಗ್ರಾಂ ಹಾಕಿಕೊಂಡು ಟೂರ್‌ಗೆ ಹೋದಾಗ ರಾಜಕೀಯವಾದ ಮಾತನಾಡುವುದಕ್ಕೆ ಅವಕಾಶ ಇರಬಾರದು, ಅದಕ್ಕೆ ಯಾವುದಾದರೂ ಒಂದು ಕಟ್ಟುನೀತಿಯಾದ ಒಂದು ನೀತಿಯನ್ನು ಜಾರಿಗೆ ತರಬೇಕು ನಾನು ಈ ಸಂದರ್ಭದಲ್ಲಿ ಅಧ್ಯಕ್ಷರ ಮುಖಾಂತರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದುದರಿಂದ ಈ ಮಾತನ್ನು ಮಾನ್ಯ ಮಂತ್ರಿಗಳ ಎದುರಿಗೆ ಹೇಳಿದ್ದರೆ ಚೆನ್ನಾಗಿತ್ತು ಎಂದು ನನಗೆ ಅನಿಸಿತು

ಇನ್ನು ಪಂಚಾಯಿತ್ ರಾಜ್ ಇನ್‌ಸ್ಟಿಟ್ಯೂಷನ್ ಬಗ್ಗೆ ಹೇಳುವುದಾದರೆ ಇದರಲ್ಲಿ ತಮಗೆ ಗೊತ್ತಿರುವ ಹಾಗೆ ಒಂದು ಪಂಚಾಯಿತಿ ಛೇರ್ಮನ್ ಕೆಳಗೆ ಸೆಕ್ರೆಟರಿ ಕಮ್ ಆಕೌಂಟೆಂಟ್ ಅಂತ ಮಾಡಿದ್ದಾರೆ. ಇದರಲ್ಲಿ ಪಂಚಾಯಿತಿ ಸೆಕ್ರೆಟರಿಯವರು ಹೆಚ್ಚಿಗೆ ಕಾಲವನ್ನು ರೆವಿನ್ಯೂ ಕಂದಾಯವನ್ನು ವಸೂಲ್ಮಾಡುವುದರಲ್ಲೇ ಕಾಲ ಕಳೆಯುತ್ತಾರೆ. ಈ ಸೆಕ್ರೆಟರಿ ಮೇಲೆ ಪಂಚಾಯಿತಿ ಛೇರ್ಮನ್‌ಗೆ ಹೆಚ್ಚಿನ ಒಂದು ಹತೋಟಿ ಇಲ್ಲಾ. ಹಿಂದೆ ನಾನು ತಾಲ್ಲೂಕ್ ಬೋರ್ಡ್ ಅಧ್ಯಕ್ಷನಾಗಿದ್ದಾಗ ಇವರಿಗೆ ಸಂಬಳ ವಿತರಣೆ ಮಾಡಬೇಕಾಗಿದ್ದರೆ ಪಂಚಾಯಿತಿ ಛೇರ್ಮನ್‌ರವರಿಂದ ಒಂದು ಅಟೆಂಡೆನ್ಸ್ ಸರ್ಟಿಫಿಕೇಟ್ ಅನ್ನು ತರಬೇಕಾಗಿತ್ತು. ಅದನ್ನು ತಂದರೆ ಮಾತ್ರ ಅವನಿಗೆ ಸಂಬಳ ಸಿಗುತ್ತಾ ಇತ್ತು. ಇವತ್ತು ಅದನ್ನೂ ಕೂಡ ತೆಗೆದು ಹಾಕಿ-ದ್ದೀರಿ. ಆದುದರಿಂದ ಈವೊತ್ತು ಈ ಸೆಕ್ರೆಟರಿ, ಛೇರ್ಮನ್ ಏನು ಹೇಳುತ್ತಾರೋ ಅದನ್ನು ನಾನು ಮಾಡಬೇಕಾದ ಅವಶ್ಯಕತೆ ಇಲ್ಲ, ಇದು ನಮ್ಮ ರೂಲ್ಸ್‌ನಲ್ಲಿ ಬರುವುದಿಲ್ಲಾ, ಅವರು ನಮ್ಮನ್ನೇನು ಹೆದರಿಸುವುದಕ್ಕಾಗುವುದಿಲ್ಲಾ ಎಂದು ತಿಳಿದುಕೊಂಡು ಈ ಪಂಚಾಯತಿ ಛೇರ್ಮನ್ ಅವರ ಕೆಲಸ ಏನು ಇದೆ ಅದನ್ನು ಈವೊತ್ತು ಮಾಡುತ್ತಾ ಇಲ್ಲಾ. ಆದುದರಿಂದ ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದೇನೆಂದರೆ ನಮ್ಮಲ್ಲಿ ೧೭೫ ಪಂಚಾಯಿತಿಗಳು ಇವೆ. ಈ ೧೭೫ ಪಂಚಾಯಿತಿಗಳಿಗೂ ಕೂಡ ಸಪರೇಟ್ ಆಗಿ ಒಬ್ಬೊಬ್ಬ ಪಂಚಾಯಿತಿ ಸೆಕ್ರೆಟರೀಸ್ ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಬೇಕು ಎಂದು ಹೇಳುತ್ತೇನೆ. ಈವೊತ್ತಿನ ದಿವಸ ಅವರು ರೆವಿನ್ಯೂ ಕಂದಾಯವನ್ನು ವಸೂಲ್ಮಾಡುವ ಕಡೆ ಹೆಚ್ಚಿನ ನಿಗಾ ಕೊಟ್ಟಿರುವುದರಿಂದ ನಮ್ಮ ಪಂಚಾಯಿತಿಯಿಂದ ಬರಬೇಕಾದ ಲಕ್ಷಾಂತರ ರೂಪಾಯಿಗಳು ಸರಿಯಾಗಿ ವಸೂಲಾಗದೆ ಹಾಗೆಯೇ ಬಾಕಿ ನಿಂತಿವೆ. ಒಂದೊಂದು ಊರಿನಲ್ಲೂ ಕೂಡ ೧೫ ಸಾವಿರ, ೨೦ ಸಾವಿರ ರೂಪಾಯಿಗಳು ಬಾಕಿ ನಿಂತಿವೆ

ಅದನ್ನು ವಸೂಲ್ಮಾಡುವುದಕ್ಕೆ ಪಂಚಾಯಿತಿ ಸೆಕ್ರೆಟರಿಗಳು ಹೋಗುವುದಿಲ್ಲ. ಆದುದರಿಂದ ತಾವು ಈ ಪಂಚಾಯಿತಿಗಳಿಗೇನೆ ಒಬ್ಬೊಬ್ಬ ಸೆಕ್ರೆಟರಿಯನ್ನು ಮಾಡಿದರೆ ಅನುಕೂಲವಾಗುತ್ತದೆ. ಆ ರೀತಿ ಮಾಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈಗ ನಾನು ಜನರಲ್ ಬಜೆಟ್ ಮೇಲೆ ಮಾತನಾಡದೇ ಇದ್ದರೂ ಕೂಡ ಮಾನ್ಯ ಮಂತ್ರಿಗಳಾದ ಶ್ರೀ ಕುರನೂರ್‌ರವರು ತಮ್ಮ ಬಜೆಟ್ ಮೇಲೆ ಏನು ಮಾತನಾಡಿದರು ಅದರ ಬಗ್ಗೆ ಒಂದು ವಿಷಯವನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ಅವರು ಏನು ಹೇಳಿದರು ಎಂದರೆ ಕೇಂದ್ರ ಸರ್ಕಾರದವರು ನಮ್ಮಲ್ಲಿ ಜೂನ್ ತಿಂಗಳಿನಲ್ಲಿ ೨ ಸಾವಿರ ಜನಸಂಖ್ಯೆ ಇರುವ ಕಡೆ ಫೇರ್ ಪ್ರೈಸ್ ಷಾಪ್ ಅನ್ನು ತೆಗೆಯುತ್ತಾರೆ ಅನ್ನುವ ಮಾತನ್ನು ಹೇಳಿದರು. ಅದನ್ನು ನಾವು ಕೋ-ಆಪರೇಟೀವ್ ಮುಖಾಂತರ ಮಾಡಿಸಬೇಕಾಗುತ್ತದೆ ಅನ್ನುವ ಒಂದು ಅಭಿಪ್ರಾಯವನ್ನು ಹೇಳಿದ್ದಾರೆ. ಈ ಬಗ್ಗೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ ಹಿಂದೆ ಕಳೆದ ಸೆಷನ್‌ನಲ್ಲಿ ಈ ಒಂದು ಕೋಆಪರೇಟೀವ್ ಆಕ್ಟ್‌ಗೆ ೪ (ಎ)ಗೆ ಒಂದು ಅಮೆಂಡ್‌ಮೆಂಟ್ ತಂದು ಅಮಾಲ್ಗಮೇಷನ್ ಮಾಡಿಬಿಟ್ಟಿದ್ದೇವೆ. ಅದರಂತೆ ೩-೪-೫ ಮೈಲಿ ದೂರ ಇದ್ದಂಥಾ ಸೊಸೈಟಿಗಳನ್ನೆಲ್ಲಾ ಒಂದು ಮಾಡಿ, ಒಂದು ಸೊಸೈಟಿ ಮಾಡಿಬಿಟ್ಟಿದ್ದೇವೆ.

ಛೇರ್ಮನ್:—ಈ ಡಿಮ್ಯಾಂಡ್‌ಗೂ, ತಾವು ಹೇಳುವುದಕ್ಕೂ ಒಂದಕ್ಕೊಂದಕ್ಕೆ ಸಂಬಂಧವಿಲ್ಲಾ.

ಶ್ರೀ ಕೆ. ಬಿ. ಮಲ್ಲಪ್ಪ.—ಒಂದಕ್ಕೊಂದಕ್ಕೆ ಸಂಬಂಧವಿದೆ ಕೋಆಪರೇಷನ್ ಡಿಪಾರ್ಟ್‌ಮೆಂಟಿಗೂ ಮತ್ತು ಪಂಚಾಯಿತಿ ರಾಜ್ ಇನ್ಸ್ಟಿಟ್ಯೂಷನ್‌ಗೂ ಒಂದಕ್ಕೊಂದು ಸಂಬಂಧ ಇರುವುದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಅದು ಹೇಗೆಂದರೆ...............

SRI K. BHASKAR NAIDU.—The discussion on the demand is almost finished. The Finance Minister should have been here. Does it mean that only the concerned Ministers should make a note of it. Why don't you see that all the Ministers are here ?

MR. CHAIRMAN.—I have noted your feelings.

ಶ್ರೀ ಕೆ. ಬಿ. ಮಲ್ಲಪ್ಪ.—ಸ್ವಾಮಿ ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನಾಳೆ ದಿವಸ ಪ್ರತಿ ಪಂಚಾಯಿತಿಯಲ್ಲೂ ಒಂದು ಸೊಸೈಟಿ ಇರಬೇಕಾದುದು ಅತಿ ಮುಖ್ಯವಾಗಿದೆ. ಈಗ ೩-೪-೫ ಮೈಲಿ ದೂರ ಇರತಕ್ಕಂಥಾ ಸೊಸೈಟಿಗಳನ್ನೆಲ್ಲಾ ಸೇರಿಸಿ ಒಂದು ಮಾಡಿಬಿಟ್ಟಿದ್ದೀರಿ. ಈ ವಿಷಯ ಪಂಚಾಯಿತಿಗೆ ಹೇಗೆ ಸಂಬಂಧಪಡುತ್ತದೆ ಎಂದರೆ ತಾವು ೨ ಸಾವಿರ ಜನಸಂಖ್ಯೆ ಇರುವ ಕಡೆಗಳಿಲ್ಲೆಲ್ಲಾ ಒಂದು ಫೇರ್‌ಪ್ರೈಸ್ ಷಾಪ್ ಅನ್ನು ಮಾಡಬೇಕಾದರೆ ಪ್ರತಿ ಗ್ರಾಮದಲ್ಲೂ ಒಂದೊಂದು ಸೊಸೈಟಿ ಇಲ್ಲದೇ ಹೋದರೆ ಇದನ್ನು ನೀವು ಹೇಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದು ನನ್ನ ಪ್ರಶ್ನೆ ? ನೀವು ಇದು ಮಾಡದೇ ಹೋದರೆ ಫೇರ್‌ಪ್ರೈಸ್ ಷಾಪ್ಸ್ ಅನ್ನು ಮಾಡುವುದಕ್ಕೆ ಆಗುವುದಿಲ್ಲಾ. ನೀವು ಎರಡು ಸಾವಿರ ಜನಸಂಖ್ಯೆ ಇರುವ ಕಡೆ ಒಂದು ಸೊಸೈಟಿ ಮಾಡದೇ ಹೋದರೆ ಈ ಫೇರ್‌ಪ್ರೈಸ್ ಷಾಪ್ ಅನ್ನು ಮಾಡುವುದಕ್ಕೆ ಆಗುವುದಿಲ್ಲಾ. ಆದುದರಿಂದ ನಾನು ಹೇಳುವುದೇನೆಂದರೆ ಪಂಚಾಯಿತಿ ಹೆಡ್ ಕ್ವಾರ್ಟರ್ಸ್ ಇರುವ ಕಡೆ ಒಂದೊಂದು ಸೊಸೈಟಿ ಮಾಡಬೇಕು ಎಂದು ಹೇಳುತ್ತೇನೆ. ತಮಗೆ ಒಂದು ಉದಾಹರಣೆ ಹೇಳುವುದಾದರೆ ನನ್ನ ತಾಲ್ಲೂಕಿನಲ್ಲಿ ಹಂಡರಗಿ ಅನ್ನುವ ಗ್ರಾಮ ಇದೆ. ಹಂಡರಗಿ ಅನ್ನುವ ಗ್ರಾಮಕ್ಕೂ ಮತ್ತು ಇನ್ನೊಂದು ಕೋಣನೂರು ಅನ್ನುವ ಗ್ರಾಮಕ್ಕೂ ೫ ಮೈಲಿ ಅಂತರ ಇದೆ. ಆದುದರಿಂದ ಅಲ್ಲಿ ಈ ಕೋ ಆಪರೇಟೀವ್‌ಗೂ ಮತ್ತು ಪಂಚಾಯಿತ್ ರಾಜ್‌ಗೂ ಸಂಬಂಧ ಬಂದೇ ಬರುತ್ತದೆ. ಆದುದರಿಂದ ಪಂಚಾಯಿತ್ ರಾಜ್ ಮಂತ್ರಿಗಳನ್ನು ನಾನು ಹೇಳುತ್ತೇನೆ ಏನೆಂದರೆ ಈ ರೀತಿ ನೂಗಿ ೨ ಸಾವಿರ ಜನಸಂಖ್ಯೆ ಇರುವ ಕಡೆ ಒಂದು ಫೇರ್‌ಪ್ರೈಸ್ ಷಾಪ್ ಮಾಡಬೇಕೆನ್ನುವುದಾದರೆ ನೀವು ಹೊಸದಾಗಿ ಏನಾದರೂ ಪಂಚಾಯಿತ್ ಸೊಸೈಟಿಗಳನ್ನು ಮಾಡುವುದಕ್ಕೆ ಸಾಧ್ಯವೇ ಎಂದು, ಹಾಗೆ ಮಾಡದೇ ಹೋದರೆ ನೀವು ಫೇರ್‌ಪ್ರೈಸ್ ಷಾಪ್ಸ್ ಅನ್ನು ಮಾಡುವುದಕ್ಕಾಗುವುದಿಲ್ಲ. ಮತ್ತು ಇದನ್ನು ಸೊಸೈಟಿಯವರು ಪ್ರೈವೇಟ್‌ನವರಿಗೆ ಕೊಡುವುದಿಲ್ಲ ಅನ್ನುತ್ತಾರೆ. ಹಾಗೇನಾದರೂ ಇದನ್ನು ಪ್ರೈವೇಟ್‌ನವರಿಗೆ ಕೊಡದೇಹೋದರೆ ಈ ಬಗ್ಗೆ ಸೊಸೈಟಿ ಇಲ್ಲದೇ ಹೋದರೆ ಇನ್ನಾರ ಕೈಯ್ಯಲ್ಲಿ ಈ

ಫೇರ್‌ಪ್ರೈಸ್ ಷಾಪ್ಸ್ ಅನ್ನು ಮಾಡಿಸುತ್ತಿರಾ ಎಂದು ಕೇಳುತ್ತೇನೆ. ಆದುದರಿಂದ ಕೊನೇ ಪಕ್ಷ ಪಂಚಾಯಿತ್ ರಾಜ್ ವ್ಯವಸ್ಥೆಯಲ್ಲಾದರೂ ಕೂಡ ಇದನ್ನು ಮಾಡುವುದಕ್ಕೆ ಒಂದು ವ್ಯವಸ್ಥೆ ಮಾಡ ಬೇಕು ಎಂದು ಹೇಳುತ್ತೇನೆ.

ಇನ್ನು ಬೇಕಾದಷ್ಟು ವಿಷಯಗಳು ಮಾತನಾಡುವುದು ಇತ್ತು. ಆದರೆ ಹೆಚ್ಚು ಕಾಲಾವಕಾಶ ಇಲ್ಲದೇ ಇರುವುದರಿಂದ ತಾಲ್ಲೂಕ್ ಬೋರ್ಡ್ಸ್‌ನ ರೋಡ್ಸ್ ವಿಷಯ ಒಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ತಾಲ್ಲೂಕ್ ಬೋರ್ಡ್ಸ್‌ನ ರೋಡ್ಸ್‌ಗೆ ದುಡ್ಡು ಇಲ್ಲಾ ಎಂದು ಹೇಳುತ್ತೀರಿ. ತಾವು ಪಂಚಾಯಿತಿಗಳಿಗೆ ಹೆಚ್ಚು ದುಡ್ಡು ಕೊಟ್ಟು ಮತ್ತು ತಾಲ್ಲೂಕ್ ಬೋರ್ಡ್‌ಗಳಿಗೂ ಹೆಚ್ಚು ಹಣ ಒದಗಿಸಿ ಈ ರೋಡ್ಸ್‌ಗಳನ್ನೆಲ್ಲಾ ಮಾಡಿಕೊಡಬೇಕು ಎಂದು ಹೇಳುತ್ತೇನೆ, ಕೊನೆಯದಾಗಿ ತಾಲ್ಲೂಕ್ ಬೋರ್ಡ್ ಅಧ್ಯಕ್ಷರಿಗೆ ಈ ಬಗ್ಗೆ ಒಂದು ಹೆಚ್ಚಿನ ಅಧಿಕಾರ ಕೊಡಬೇಕು ಎಂದು ಸಲಹೆ ಮಾಡಿ, ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ೪ ನಿಮಿಷಗಳ ಕಾಲಾವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಮಾತು ಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಪ್ರಭಾಕರ್ (ಗ್ರಾಮಾಂತರ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಶಾಖೆಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಶನಿವಾರ ಪ್ರಾರಂಭವಾಗಿ ಸೋಮವಾರದವರೆಗೂ ಮುಂದುವರಿದ ನಮ್ಮ ಇಲಾಖೆಯ ಬೇಡಿಕೆಗಳ ಮೇಲೆ ಇದುವರೆಗೂ ಸುಮಾರು ೧೧ ಜನ ಸದಸ್ಯರುಗಳು ಮಾತನಾಡಿ ದ್ದಾರೆ. ಇಂದು ೯ ಜನ ಮತ್ತು ಶನಿವಾರ ೨ ಜನ ಮಾತ್ರ ಮಾತನಾಡಿದ್ದಾರೆ. ಪ್ರತಿಯೊಬ್ಬರೂ ಕೂಡ ಮಾತನಾಡುವಾಗ ಗ್ರಾಮಗಳ ಏಳಿಗೆಯ ವಿಚಾರವಾಗಿ ಮಾತನಾಡಿ ಇದರ ಬಗ್ಗೆ ಹೆಚ್ಚಿನ ಶ್ರದ್ಧೆ ಇರಬೇಕು ಎನ್ನುವ ಅಂಶವನ್ನು ಒತ್ತಿ ಹೇಳಿದ್ದಾರೆ. ಇವತ್ತಿನ ದಿವಸ ಗ್ರಾಮ ಜೀವನದಲ್ಲಿ ಯಾರೂ ಕೂಡ ಸಂತೋಷದಿಂದ ಇರುವುದಕ್ಕೆ ಸಾಧ್ಯವಿಲ್ಲ, ಗ್ರಾಮಗಳ ಸ್ಥಿತಿಯನ್ನು ಉತ್ತಮಪಡಿಸಬೇಕು ಅದಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಸರ್ಕಾರದವರು ಹಾಕಿದ್ದಾರೆಂದು ತಿಳಿಸಲು ನಾನು ಸಂತೋಷ ಪಡುತ್ತೇನೆ. ಆದರೂ ಕೂಡ ಗ್ರಾಮಗಳು ಬಹುಬೇಗ ಮುಂದೆ ಬರುವಂತೆ ಎಲ್ಲರೂ ಮೆಚ್ಚತಕ್ಕ ರೀತಿಯಲ್ಲಿ ಈ ಕಾರ್ಯಕ್ರಮಗಳು ಕಾರ್ಯಗತವಾಗುತ್ತಿಲ್ಲ ಎನ್ನುವುದೇ ಅವರ ಹೇಳಿಕೆಯ ಸಾರಾಂಶ. ಗ್ರಾಮಾಭಿವೃದ್ಧಿಯ ಬಗ್ಗೆ ಹೇಳುವಾಗ, ೧೯೫೯ರ ಕಾನೂನು ಪ್ರಕಾರ ಅಲ್ಲಿಂದೀಚೆಗೆ ನಮ್ಮ ದೇಶದಲ್ಲಿ ಗ್ರಾಮ ಪಂಚಾಯತಿಗಳು, ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಮತ್ತು ಜಿಲ್ಲಾ ಅಭಿವೃದ್ಧಿ ಮಂಡಲಿ ಗಳು ಎಂದು ಈ ಮೂರು ಅಂತಸ್ತಿನಲ್ಲಿ ಸಂಸ್ಥೆಗಳು ಕೆಲಸ ಮಾಡುತ್ತಿವೆ. ಸುಮಾರು ೮೪೧೧ ಗ್ರಾಮ ಪಂಚಾಯತಿಗಳಲ್ಲಿ ೮೦೧೧ ಗ್ರಾಮಪಂಚಾಯತಿಗಳಿಗೆ ಚುನಾಯಿತರಾದಂಥ ಅಧ್ಯಕ್ಷರು ಅಧಿಕಾರ ವಹಿಸಿ ಕೊಂಡು ಕೆಲಸಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಉಳಿದ ೪೦೦ ಸಂಸ್ಥೆಗಳಿಗೆ ಚುನಾವಣೆಗಳನ್ನು ಮಾಡುವುದಕ್ಕೆ ಅವಕಾಶವಾಗದೆ, ಕೋರ್ಟುಗಳ ವ್ಯವಹಾರದಿಂದಲೋ, ಅನೇಕ ಸ್ಥಳೀಯ ವಿದ್ಯಮಾನ ಗಳ ಕಾರಣದಿಂದ ಅವುಗಳಲ್ಲಿ ಅಧ್ಯಕ್ಷರು ಅಧಿಕಾರ ವಹಿಸಿಕೊಂಡು ಕೆಲಸಮಾಡುತ್ತಿಲ್ಲ. ಎರಡನೆಯದಾಗಿ ಈಗಿರತಕ್ಕ ಲೋಕಲ್ ಬೋರ್ಡ್‌ಗಳ ಆಕ್ಟ್ ಏನು ಇದೆ ಅದಕ್ಕನುಸಾರವಾಗಿ ಕಂದಾಯವನ್ನು ಪಂಚಾಯತಿಗಳಿಗ ಶೇಕಡ ೩೦+೧೦-೪೦ ಎಂತಲೂ ತಾಲ್ಲೂಕು ಅಭಿವೃದ್ಧಿ ಮಂಡಳಿಗಳಿಗೆ ೫೦+೧೦-೬೦ ಎಂತಲೂ ಭಾಗ ಮಾಡಿ ಸಂಪೂರ್ಣವಾಗಿ ಹಣವನ್ನು ಕೊಡುತ್ತಿದ್ದೇವೆ. ರೆವಿನ್ಯೂ ಕಂದಾಯವನ್ನು ಇವುಗಳಿಗೆ ಪೂರ್ಣವಾಗಿ ಕೊಡಬೇಕು ಎಂದು ಮಾನ್ಯ ಸದಸ್ಯರುಗಳು ಏನು ಸಲಹೆ ಕೊಡುತ್ತಿದ್ದಾರೋ ಅದನ್ನು ನಾವು ಈಗಾಗಲೇ ಮಾಡಿ ಆಗಿದೆ. ಇನ್ನು ಮೂರನೆಯ ಭಾಗ ಎಂದರೆ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಇದರ ನಿಜವಾದ ಅರ್ಥದಲ್ಲಿ, ಪ್ರಜಾಪ್ರಭುತ್ವದ ರೂಪದಲ್ಲಿ ಇದ್ದು ಕೆಲಸ ಮಾಡುತ್ತಿಲ್ಲ, ಇಲ್ಲಿ ಚುನಾಯಿತ ಅಧ್ಯಕ್ಷರು ಇಲ್ಲ, ಎನ್ನುವ ವಿಷಯವನ್ನು ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಅಖಿಲಭಾರತದ ಮಟ್ಟದಲ್ಲಿ ಅಶೋಕ ಮೆಹ್ತಾ ಕಮಿಟಿಯ ವರದಿಯಪ್ರಕಾರ ಇದರ ಸಂಬಂಧದಲ್ಲಿ ಪರಿಶೀಲನೆ ನಡೆದಿದೆ. ಆದರೆ ಈಗಿನ ವ್ಯವಸ್ಥೆಯಲ್ಲಿ ನಮ್ಮದೇಶಕ್ಕೆ ಅಂದರೆ ಕರ್ನಾಟಕಕ್ಕೆ ಇರತಕ್ಕ ಏರ್ಪಾಡು ಏನು ಇದೆ, ಇದು ಅಂದರೆ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳೇ ಇದರ ಅಧ್ಯಕ್ಷರಾಗಿರುವುದು, ಇದರ ಕಾರ್ಯಕ್ರಮಗಳು ಫಲದಾಯಕವಾಗಿವೆ ಎನ್ನುವುದನ್ನು ನಾವುಗಳು ಮನಗಂಡಿದ್ದೇವೆ. ಮೊನ್ನೆ ತಾನೇ ದೆಹಲಿಯಲ್ಲಿ ನಡೆದಂಥ ಸಭೆಯಲ್ಲಿ ಈ ವಿಚಾರ ಪ್ರಸ್ತಾಪಕ್ಕೆ ಬಂದಾಗ ಅಶೋಕ ಮೆಹ್ತಾ ಅವರ ವರದಿಯನ್ನು ಕೈಬಿಡತಕ್ಕ ಯಾವ ಒಂದು ಉದ್ದೇಶವೂ ಇಲ್ಲ ಎನ್ನುವ ಅಂಶ ವನ್ನು ತಿಳಿಸಲಾಗಿದೆ. ಗ್ರಾಮಗಳ ಪಂಚಾಯತಿಗಳು ಪ್ರಜಾಪ್ರಭುತ್ವದಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ಮಾಡುವ ಹಾಗೆ ಇಟ್ಟುಕೊಳ್ಳಬೇಕು ಎಂದು ನಮ್ಮ ಪ್ರಧಾನಮಂತ್ರಿಯವರೂ ಕೂಡ ಅಭಿಪ್ರಾಯ

ವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ನಮಗೆ ಈಗ ಇರುವಂಥ ವ್ಯವಸ್ಥೆಯನ್ನು ಕದಲಿಸತಕ್ಕ ಅಭಿಪ್ರಾಯವನ್ನು ನಾವು ಹೊಂದಿಲ್ಲ. ಆದರೆ ನಮ್ಮ ಪಂಚಾಯತಿಗಳು ಯಶಸ್ವಿಯಾಗಿ, ಫಲದಾಯಕವಾಗಿ ಕೆಲಸ ಮಾಡುವ ರೀತಿ ಮಾಡಬೇಕು. ಎಂದು ಇದ್ದೇವೆ. ಈ ದಿಸೆಯಲ್ಲಿ ಈಗಿರುವಂಥ ನಮ್ಮ ಪಂಚಾಯತಿ ವ್ಯವಸ್ಥೆ ಸರಿಯಾಗಿದೆ ಎಂದು ಸರ್ಕಾರ ಮನಗಂಡಿದೆ.

ಇನ್ನು ಮಾನ್ಯ ಸದಸ್ಯರನೇಕರು ಮಾತನಾಡುವಾಗ ಗ್ರಾಮ ಪಂಚಾಯತಿಗಳು ಯಶಸ್ವಿಯಾಗಿ ಕೆಲಸ ಮಾಡಬೇಕಾದರೆ ಅವುಗಳಿಗೆ ಮತ್ತಷ್ಟು ಹಣವನ್ನು ಒದಗಿಸಿ, ಅಧಿಕಾರವನ್ನು ಕೊಟ್ಟು ಬಲಯುತವಾಗಿ ಮಾಡುವುದು ಸಹಜ ಎಂದು ನಾವೂ ಕೂಡ ಅಭಿಪ್ರಾಯ ಪಟ್ಟಿದ್ದೇವೆ. ಹಣದ ವಿಚಾರದಲ್ಲಿ, ಪಂಚಾಯತಿಗಳು ಹಾಗೂ ತಾಲ್ಲೂಕು ಅಭಿವೃದ್ಧಿ ಮಂಡಳಿಯವರು ಐದು ಕೋಟಿ ರೂಪಾಯಿಗಳ ಕಂದಾಯವನ್ನು ವಸೂಲು ಮಾಡತಕ್ಕ ಮಾರ್ಗದಲ್ಲಿ ನಾನಾ ಕಾರಣಗಳಿಂದ ಅವು ಯಶಸ್ವಿಯಾಗಿಲ್ಲ. ಕೇವಲ ಒಂದು ಕೋಟಿ ರೂಪಾಯಿಗಳಷ್ಟು ಹಣವನ್ನು ಅವು ವಸೂಲು ಮಾಡಿ ಇನ್ನು ನಾಲ್ಕು ಕೋಟಿ ರೂಪಾಯಿಗಳನ್ನು ವಸೂಲು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅವರಿಗೆ ಇರತಕ್ಕ ತೊಂದರೆ, ಅಲ್ಲಿಯ ವಾತಾವರಣ ಇವುಗಳನ್ನು ನಾವು ಕೂಲಂಕುಷವಾಗಿ ಪರಿಶೀಲನೆ ಮಾಡಿ, ಅವರ ತೊಂದರೆಯನ್ನು ಸರ್ಕಾರದವರು ಮನಗಂಡು ಕಂದಾಯವನ್ನು ವಸೂಲು ಮಾಡತಕ್ಕ ಜವಾಬ್ದಾರಿಯನ್ನು ಪಂಚಾಯತಿಗಳಿಗೆ ಕೊಡತಕ್ಕದ್ದು ಸೂಕ್ತವಲ್ಲ ಎನ್ನುವುದನ್ನು ಮನಗಂಡು ಇನ್ನು ಮುಂದೆ ಕಂದಾಯವನ್ನು ವಸೂಲು ಮಾಡತಕ್ಕ ಸಂಪೂರ್ಣವಾದ ಜವಾಬ್ದಾರಿಯನ್ನು ರೆವಿನ್ಯೂ ಇಲಾಖೆಯವರು ಮಾಡಬೇಕು ಎನ್ನುವ ತೀರ್ಮಾನವನ್ನು ಸರ್ಕಾರದವರು ಕೈಗೊಂಡಿದ್ದಾರೆ. ಇನ್ನು ಪಂಚಾಯತಿಗಳಿಗೆ ಹಣವನ್ನು ವಸೂಲು ಮಾಡತಕ್ಕ ತೊಂದರೆಯನ್ನು ನಾವು ನೀಗಿಸಿದ್ದೇವೆ ಎನ್ನುವ ಮಾತನ್ನು ನಾನು ಸಂತೋಷದಿಂದ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇದರ ಜೊತೆಗೆ ರೆವಿನ್ಯೂ ಅಸೆಟ್ಸನ್ನು ಮಾಡಿಕೊಳ್ಳಬೇಕು ಎಂದು ಸಲಹೆಯನ್ನು ಕೊಟ್ಟಿದ್ದೇವೆ. ಕಳೆದ ವರ್ಷ ಇದು ೮ ಲಕ್ಷ ರೂಪಾಯಿಗಳು ಇದ್ದುದನ್ನು ೧೦ ಲಕ್ಷ ರೂಪಾಯಿಗಳಿಗೆ ಏರಿಸಿ ಪಂಚಾಯತಿಯವರೂ ಸಹ ತಮ್ಮ ಸಂಪಾದನೆಯನ್ನು ಹೆಚ್ಚು ಮಾಡಿಕೊಳ್ಳಬೇಕು ಎಂದು ಷಾಪ್ಸ್‌ಗಳನ್ನು ಕಟ್ಟಿಸಿ ಬಾಡಿಗೆ ಬರುವ ಹಾಗೆ ಮಾಡತಕ್ಕದ್ದು, ಮೀನುಗಾರಿಕೆ, ಮತ್ತು ತೋಟಗಾರಿಕೆಯ ಯೋಜನೆಗಳು ಏನು ಇವೆ, ಅವುಗಳನ್ನು ಪಂಚಾಯತಿಗಳು ಮಾಡುವುದಕ್ಕೆ ಮುಂದೆ ಬಂದಾಗ ಅದಕ್ಕೆ ಸಾಕಾದಷ್ಟು ಹಣವನ್ನು ಒದಗಿಸಬೇಕಾಗುತ್ತದೆ ಎನ್ನುವುದನ್ನೂ ಸಹ ತಿಳಿಸಿದ್ದೇವೆ. ಅನೇಕ ಪಂಚಾಯತಿಗಳು ಈ ರೀತಿಯಾಗಿ ಮಾಡುತ್ತಿವೆ ಮೀನುಗಾರಿಕೆಯಲ್ಲಿ ಸುಮಾರು ೨೦-೩೦ ಸಾವಿರ ರೂಪಾಯಿಗಳ ವರಮಾನ ಬರುವ ರೀತಿಯಲ್ಲಿ ಪಂಚಾಯತಿಯವರು ಮುಂದೆ ಬಂದು ಸಹಾಯವನ್ನು ಪಡೆದುಕೊಳ್ಳುತ್ತಿದ್ದಾರೆ. ಕೇಂದ್ರದಲ್ಲಿ ನಮ್ಮ ಗ್ರಾಮ ಪಂಚಾಯತಿಗಳ ಕಾರ್ಯದರ್ಶಿಗಳಿಗೆ ಮನೆಗಳನ್ನು ಕಟ್ಟಿಸಿ ಕೊಡಬೇಕು ಎನ್ನುವ ವಿಷಯದಲ್ಲಿ ಚರ್ಚೆ ನಡೆದಿದೆ. ಅದನ್ನೂ ಕೂಡ ನಾವು ಒಪ್ಪಿ ಮನೆಗಳನ್ನು ಗ್ರಾಮ ಮಟ್ಟದಲ್ಲಿ ಕಟ್ಟತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡುವುದರಲ್ಲಿ ಆಸಕ್ತಿಯನ್ನು ನಾವು ಹೊಂದಿದ್ದೇವೆ. ಗ್ರಾಮ ಪಂಚಾಯತಿಗಳು ಸಾಕಷ್ಟು ಹಣವನ್ನು ಉಪಯೋಗಿಸಿಕೊಂಡು ಮುಂದೆ ಬಂದು ಇಂಥ ಮನೆಗಳನ್ನು ಕಟ್ಟಿಸಿ ಆಸ್ತಿಯನ್ನು ಹಾಗೆಯೇ ಮಾಡಿಕೊಂಡು ಅದರಲ್ಲಿ ಬರತಕ್ಕ ಬಡ್ಡಿಯನ್ನು ತಾವೇ ವಸೂಲು ಮಾಡಿ ರಿಪೇರಿ ವಗೈರೆ ನೋಡಿಕೊಂಡು ಹೋಗುವುದು ಸರಿಯೆಂದು ಒಪ್ಪಿ ಇದಕ್ಕೆ ಬೆಂಬಲ ಕೊಡಬೇಕು ಎಂದು ನಾವು ತೀರ್ಮಾನ ಮಾಡಿದ್ದೇವೆ.

ಇಲ್ಲಿ ಆಯಾ ಇಲಾಖೆಯವರು ಕಟ್ಟಿಸುವಂತಹ ಮನೆಗಳ ಜವಾಬ್ದಾರಿಯನ್ನು ಪಂಚಾಯಿತಿಯವರು ನೋಡಿಕೊಳ್ಳಬಹುದು. ಇಲ್ಲವೇ ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ನೋಡಿಕೊಳ್ಳಬಹುದೆಂದು ಈಗಾಗಲೇ ತಿಳಿಸಲಾಗಿದೆ. ಈ ರೂಪದಲ್ಲಿ ಅವರಿಗೆ ಮನೆ ಬಾಡಿಗೆ ಬರುತ್ತದೆ ಮತ್ತು ಮೀನುಗಾರಿಕೆಯಂತಹ ಕೈಗಾರಿಕಾ ಮಾರ್ಗಗಳಿಂದ ವರಮಾನ ಹೆಚ್ಚಿಸಿಕೊಳ್ಳಲು ಸಹ ಅವರಿಗೆ ಅವಕಾಶ ಕಲ್ಪಿಸಲಾಗಿದೆ.

೨-೩೦ ಪಿ. ಎಂ.

ಇನ್ನು ಪಂಚಾಯತಿ ಕೇಂದ್ರದಲ್ಲಿಯೇ ಆಯಾ ಸೆಕ್ರೆಟರಿಗಳು ವಾಸ ಮಾಡಬೇಕೆಂದು, ಇದಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಸದಸ್ಯರು ಏನು ಹೇಳುತ್ತಿದ್ದರು, ಇದು ಅಕ್ಷರಶಃ ಒಪ್ಪತಕ್ಕಂಥ ಮಾತು. ಇದು ಭಿನ್ನಾಭಿಪ್ರಾಯದ ಮಾತು ಎಂದು ಯಾರೂ ಕೂಡ ಭಾವಿಸುವುದಕ್ಕಾಗುವುದಿಲ್ಲ. ಇಲ್ಲಿಯವರೆಗೆ ಈ ಒಂದು ಕೊರತೆ ಏನಿತ್ತೋ, ಅದನ್ನು ನಿವಾರಣೆ ಮಾಡುವುದಕ್ಕೆ ಅವಕಾಶವಾಗುತ್ತದೆಂದು ತಮಗೆ ತಿಳಿಸುತ್ತೇನೆ.

ಇನ್ನು ಪಂಚಾಯತ್‌ರಾಜ' ಸಂಸ್ಥೆಗಳಿಗೆ ಹೆಚ್ಚಿನ ಹಣ ಮತ್ತು ಅಧಿಕಾರ ಕೊ ಡಿ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಹಣ ಕೊಡುವ ವಿಚಾರದಲ್ಲಿ ಸರ್ಕಾರ ಈಗಾಗಲೇ ಕೂಲಂಕಷವಾಗಿ ಪರಿಶೀಲನೆ ಮಾಡಿ, ಗ್ರಾಮ ಮಟ್ಟದಲ್ಲಿ ಪಂಚಾಯಿತಿಯವರು ತಮ್ಮ ಒಂದು ಹೆಚ್ಚಿನ ಸಹಕಾರ, ಸಹನೆ ಮತ್ತು ಚಾಕಚಕ್ಯತೆಯಿಂದ ಜನರ ಸೇವೆಯನ್ನು ಹೆಚ್ಚಿನ ರೀತಿಯಲ್ಲಿ ಮಾಡಿಕೊಂಡು, ಗ್ರಾಮಗಳಿಗೆ ಹೆಚ್ಚಿನ ಶ್ರೇಯಸ್ಸು ತರುವ ದೃಷ್ಟಿಯಿಂದ ಮುಂದೆ ಬರಲಿ ಎಂಬತಕ್ಕಂಥ ಆಸೆ ಸರ್ಕಾರಕ್ಕೆ ಇದೆ. ಈ ದಿಸೆಯಲ್ಲಿ ಅವರು ಎಷ್ಟು ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ ಎಷ್ಟು ಹಣವನ್ನು ಅವರಿಗೆ ಒದಗಿಸಿ ಕೊಡಬೇಕು ಎಂಬುದನ್ನು ಸರ್ಕಾರ ಮನಗಂಡು, ಇವೊತ್ತಿನದಿವಸ ಸರ್ಕಾರದ ನೀತಿನಿಯಮಗಳಿಗನುಸಾರವಾಗಿ, ನಿರ್ಜೀವವಾಗಿ ಕಾಣುತ್ತಿರುವ ಹಳ್ಳಿಗಳ ಜನರ ಒಂದು ಜನಜೀವನವನ್ನು ಉತ್ತಮಪಡಿಸಲು, ಅಲ್ಲಿರತಕ್ಕಂಥ ದೀನದಲಿತರು ಹಾಗೂ ಬಡವರಂಮತ್ತು ಹರಿಜನ ಮತ್ತುಗಿರಿಜನರು ಏನಿದ್ದಾರೆ, ಅವರಿಗೆಲ್ಲಾ ತಮಗೆ ಸ್ವರಾಜ್ಯದ ಫಲ ನಮಗೂ ದೊರೆಯುತ್ತಿದೆ ನಮ್ಮ ಒಂದು ಕಷ್ಟಸುಖವನ್ನು ಕೇಳುವವರಿದ್ದಾರೆ ಎಂಬ ಭಾವನೆ ಅವರಿಗೆ ಬರಬೇಕು ಎಂದುಕೊಂಡು ಈ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟ ಕಾನೂನನ್ನು ಈಗಾಗಲೇ ತಿದ್ದುಪಡಿ ಮಾಡಿ ಪಂಚಾಯಿತಿ ಮಟ್ಟದಲ್ಲಿ ಮತ್ತು ತಾಲ್ಲೂಕ ಅಭಿವೃದ್ಧಿ ಮಂಡಲಿ ಮಟ್ಟದಲ್ಲಿ ಸೋಷಿಯಲ್ ಜಸ್ಟೀಸ್ ಕಮಿಟಿ ಎಂದು ಮಾಡಿದ್ದೇವೆ. ಸಾಮಾಜಿಕ ಅಂದರೆ ನ್ಯಾಯವನ್ನುದೊರಕಿಸಿಕೊಡತಕ್ಕಂಥಒಂದು ಜವಾಬ್ದಾರಿಯನ್ನು ಆ ಕಮಿಟಿಯವರಿಗೆ ವಹಿಸಿದ್ದೇವೆ. ಈಗ ತಾಲ್ಲೂಕುಬೋರ್ಡಿನಲ್ಲಿ ಮೂರು ಕಮಿಟಿಗಳು ಈಗ ಏನು ಇವೆಯೋ, ಅದರ ಜೊತೆಗೆ ಈ ಕಮಿಟಿಯನ್ನು ನಾಲ್ಕನೆಯದನ್ನಾಗಿ ಪರಿಗಣಿಸಲಾಗಿದೆ. ಈ ಕಮಿಟಿಯವರಿಗೆ ಹೆಚ್ಚಿನ ಒಂದು ಜವಾಬ್ದಾರಿಯನ್ನು ವಹಿಸಲಾಗಿದೆ. ಇಲ್ಲಿಯವರೆಗೆ ನೊಂದ ಜನರು ಏನಿದ್ದರೋ, ಇಂತಹವರಿಗೆ ನ್ಯಾಯವನ್ನು ದೊರಕಿಸಿಕೊಡಲು ಏನು ಕೊರತೆ ಇತ್ತೋ, ಅದನ್ನೆಲ್ಲಾ ಮ ನ ಗ ಂ ಡು ಅವರಿಗೆ ನ್ಯಾಯ ದೊರಕಿಸಿಕೊಡುವಂತಹ ಒಂದು ಅಧಿಕಾರವನ್ನು ಈ ಸಂಸ್ಥೆಗಳಿಗೆ ಕೊಡಲಾಗಿದೆ. ಈ ರೀತಿ ಅಧಿಕಾರ ಕೊಟ್ಟಮೇಲೆ, ಕೆಲಸ ಮಾಡಲು ಅವರಿಗೆ ದುಡ್ಡು ಎಲ್ಲಿಂದ ಕೊಡುತ್ತೀರಿ ಎನ್ನುವಂತಹ ಸಂಶಯ ಮಾನ್ಯ ಸದಸ್ಯರ ಮನಸ್ಸಿನಲ್ಲಿರಬಹುದು ; ಈಗ ಸರ್ಕಾರದ ಮಟ್ಟದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಏನು ಕೈಕೊಳ್ಳಲಾಗುತ್ತಿದೆಯೋ ಅದರ ಒಂದು ಪ್ರತಿಫಲ ಕಡೆಯ ಪ್ರಜೆಗೂ ಮುಟ್ಟುವಂತಹ ರೀತಿಯಲ್ಲಿ ಈ ಸಂಸ್ಥೆಗಳು ಕೆಲಸ ಮಾಡಬೇಕು, ವಿಜಿಲೆನ್ಸ್ ಕಮಿಟಿ ತರಹ ಕೆಲಸ ಮಾಡಬೇಕು ಎಂಬುದೇ ಸರ್ಕಾರದ ಮೂಲ ಉದ್ದೇಶವಾಗಿದೆ. ಅದಕ್ಕಾಗಿ ನಾವು ಹಣವನ್ನು ನಾನಾ ಯೋಜನೆಗಳ ಮೂಲಕ ಈ ಸಂಸ್ಥೆಗಳಿಗೆ ಕೊಡುತ್ತಿದ್ದೇವೆ. ಈ ಹಣದಲ್ಲಿ ಬಡವರಿಗೆ ಎಷ್ಟು ಅಂಶ ಸಿಗಬೇಕೋ ಅಷ್ಟು ಖಚಿತವಾಗಿ ಸಿಗಲೇಬೇಕು ಎಂಬುದು ಸರ್ಕಾರದ ಮೂಲೋದ್ದೇಶವಾಗಿದೆ. ಅಂದರೆ ಬೇಸಾಯಕ್ಕೆ ಸಂಬಂಧಪಟ್ಟಂತೆ ಆಗಲೀ, ಹೈನುಗಾರಿಕೆಗೆ ಸಂಬಂಧಪಟ್ಟಂತೆ ಆಗಲಿ, ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಸಂಬಂಧಪಟ್ಟಂತೆ ಆಗಲೀ, ಯಾವುದರಲ್ಲಿಯೂ ಇವರಿಗೆ ಅನ್ಯಾಯವಾಗದಂತೆ ಹೆಚ್ಚಿನ ಒಂದು ಪರಿಶ್ರಮದಿಂದ ಮತ್ತು ಶ್ರದ್ಧೆಯಿಂದ ಇವರು ಕೆಲಸ ಮಾಡಬೇಕೆಂಬುದೇ ಸರ್ಕಾರದ ಇಚ್ಛೆಯಾಗಿದೆ. ಈ ಕಮಿಟಿಯಲ್ಲಿ ೮ ಜನ ಸದಸ್ಯರಿರುತ್ತಾರೆ. ಆಯಾ ಸಂಸ್ಥೆಯಲ್ಲಿರುವಂತಹ ಸದಸ್ಯರ ಪೈಕಿ, ಮಹಿಳಾ ಸದಸ್ಯರೊಬ್ಬರು ಇದರಲ್ಲಿರುತ್ತಾರೆ ಹರಿಜನ ಮತ್ತು ಗಿರಿಜನ ಸದಸ್ಯರಿಗೂ ಇಲ್ಲಿ ಪ್ರಾತಿನಿಧ್ಯ ಕೊಡಲಾಗಿದೆ. ೩ ಜನ ನಾಮಕರಣ ಸದಸ್ಯರು ಇರುತ್ತಾರೆ. ಅಂದರೆ ಆಯಾ ಕ್ಷೇತ್ರಗಳಲ್ಲಿ ಸೇವಾ ನಿಷ್ಠೆಯಲ್ಲಿ ಹೆಸರು ಪಡೆದವರನ್ನು ಜಿಲ್ಲಾಧಿಕಾರಿಯವರು ನಾಮಕರಣ ಮಾಡುತ್ತಾರೆ. ಈ ಕಮಿಟಿಗೆ ಆಯಾ ಸಂಸ್ಥೆಯ ಚೇರ್‌ಮನ್ ಅವರೇಅಧ್ಯಕ್ಷರಾಗಿರುತ್ತಾರೆ ಈ ಕಮಿಟಿಯವರು ಕೆಲಸ ಮಾಡಲು ಬೇಕಾದ ಎಲ್ಲ ಅಧಿಕಾರವನ್ನು ಒದಗಿಸಿಕೊಡಲಾಗಿದೆ. ಗ್ರಾಮದಲ್ಲಿ ಯಾರು ಬಡವರಿದ್ದಾರೆ, ಯಾರು ದೀನದಲಿತರಿದ್ದಾರೆ, ಯಾರು ತಮಗೆ ದಿಕ್ಕೇ ಇಲ್ಲವೆಂದು ತಿಳಿದುಕೊಂಡಿದ್ದಾರೆ, ಅಂತಹವರ ಅಭಿವೃದ್ಧಿ ಆಗಬೇಕು ಎಂಬುದೇ ಈ ಮನೆಯ ಎಲ್ಲ ಸದಸ್ಯರ ಒಂದು ಆಸೆಯಾಗಿದೆ. ಇದರಲ್ಲಿ ಯಾವಭಿನ್ನಾಭಿಪ್ರಾಯವೂ ಇಲ್ಲ. ನಮಗೆ ಸ್ವರಾಜ್ಯ ಬಂದು ಮೂವತ್ತು ವರ್ಷಗಳಾದ ಮೇಲೂ ಈ ಜನರು ಮುಂದೆ ಬರಲಿಲ್ಲ, ಇವರ ಅಭಿವೃದ್ಧಿಗಾಗಿ ಇನ್ನೂ ಚುರುಕಾಗಿ ಕೆಲಸ ಮಾಡಬೇಕು ಈಗ ಹೋಗುತ್ತಿರುವ ವೇಗ ಸಾಲದು ಎಂದು ಏನು ಮಾನ್ಯ ಸದಸ್ಯರು ಹೇಳಿದ್ದಾರೆ, ಅದು ಈ ಮಾನ್ಯ ಸದಸ್ಯರಿಗೆ ಜನರ ಮೇಲಿರತಕ್ಕಂಥ ಒಂದು ಪ್ರೇಮ ಎಂದು ನಾನು ಭಾವನೆ ಮಾಡುತ್ತೇನೆ. ಈ ದಿಶೆಯಲ್ಲಿ ಈ ಸ್ಥಳೀಯ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡಲು ಇನ್ನೂ ಹೆಚ್ಚಿನ ಅಧಿಕಾರ ಕೊಡಬೇಕು, ಇನ್ನೂ ಹೆಚ್ಚಿನ ಹಣ ಕೊಡಬೇಕು ಎಂದು ಮಾನ್ಯ ಸದಸ್ಯರು ಏನುಕೇಳುತ್ತಿದ್ದಾರೋ, ಅದು ಸಮಂಜಸವಾಗಿದೆ, ಆದಕಾರಣ ಇದನ್ನು ನಾನು ಪರಿಶೀಲನೆ ಮಾಡಿ, ಈ ಒಂದು ಕಾರ್ಯವನ್ನು ಮಾಡಿಕೊಡುತ್ತೇನೆಂದು ತಮಗೆ ತಿಳಿಸುತ್ತೇನೆ. ಈಗ ಕೆಲವೂಇಲಾ

ಖೆಗಳ ಮೂಲಕ ಆಗುತ್ತಿರುವ ಕೆಲಸಗಳು ಎಂದರೆ, ಸಣ್ಣ ನೀರಾವರಿ ಕಾಮಗಾರಿಗಳು, ಮನೆ ಕಟ್ಟಿಸಿ ಕೊಡುವುದು, ಮರಗಳನ್ನು ಬೆಳೆಸುವುದು, ಸಾಮೂಹಿಕ ನೀರಾವರಿ ಬಾವಿಗಳನ್ನು ತೆಗೆಸುವುದು, ಇವುಗಳಿಗೆಲ್ಲಾ ಸರ್ಕಾರ ಏನು ಹಣ ಖರ್ಚು ಮಾಡುತ್ತಿದೆ, ಈ ಹಣವನ್ನು ಇನ್ನು ಮುಂದೆ ಅಂದರೆ ನಾನಾ ಇಲಾಖೆಗಳ ಮೂಲಕ ಖರ್ಚು ಮಾಡತಕ್ಕಂಥ ಹಣವನ್ನೆಲ್ಲಾ ಕ್ರೋಢೀಕರಿಸಿ ನೇರವಾಗಿ ಪಂಚಾಯಿತಿಗಳಿಗೆ ಮತ್ತು ತಾಲ್ಲೂಕು ಬೋರ್ಡುಗಳಿಗೆ ಕೊಟ್ಟು, ಆ ಸಂಸ್ಥೆಗಳ ಮೂಲಕವೇ ಹಣ ಖರ್ಚು ಮಾಡಿದರೆ ಒಳ್ಳೆಯದಾಗಬಹುದೆಂಬ ಆಲೋಚನೆ ಸರ್ಕಾರಕ್ಕೆ ಇದೆ, ಮಾನ್ಯ ಸದಸ್ಯರು ಕೆಲವರು ಹಣ ಸರಿಯಾಗಿ ಖರ್ಚಾಗುತ್ತಿಲ್ಲ, ಕೆಲಸಗಳು ಜಾಗ್ರತೆ ಆಗುತ್ತಿಲ್ಲ, ಎಲ್ಲೋ ಕಪ್ಪುಮೋಡ ಕವಿದಿದೆ ಎಂಬ ಅರ್ಥದಲ್ಲಿ ಏನು ಹೇಳಿದರು, ಆ ಬಗ್ಗೆ ಯಾರೂ ಖಿನ್ನರಾಗಬೇಕಾದಂಥ ಪ್ರಮೇಯವಿಲ್ಲ. ನಾವು ಈಗ ನಾಗಾಲೋಟದಲ್ಲಿ ಹೋಗುತ್ತಿದ್ದೇವೆ. ಇಲ್ಲಿ ಈ ಇಲಾಖೆಯನ್ನು ನೋಡಿಕೊಳ್ಳುವ ಮಂತ್ರಿಗಳು ಸಮಯೋಜಿತವಾಗಿ ಮಾತನಾಡಿದರೆ ಮತ್ತು ಈ ಮನೆಯ ಮಾನ್ಯ ಸದಸ್ಯರು ತಮ್ಮ ಕೆಲಸವನ್ನು ಸಂಪೂರ್ಣವಾಗಿ ಮಾಡಿದರೆ ಈ ಒಂದು ಕೆಲಸ ಮುಗಿಯಿತು ಎಂದು ನಾನು ನಂಬುವುದಿಲ್ಲ. ಗ್ರಾಮದಲ್ಲಿರುವ ಜನರು ಸಹ ಒಳ್ಳೆಯ ಸಹಕಾರದಿಂದ ಕೆಲಸ ಮಾಡಬೇಕಾಗುತ್ತದೆ. ನಾವು ಕೊಟ್ಟಿರುವ ಅಧಿಕಾರವನ್ನು ಅವರು ಸದುಪಯೋಗಪಡಿಸಿಕೊಳ್ಳ ಬೇಕಾಗುತ್ತದೆ. ಆದರೆ ಇವೊತ್ತಿನದಿವಸ ಗ್ರಾಮ ಮಟ್ಟದಲ್ಲಿರುವ ಜೀವನ ಯಾವ ರೀತಿ ಇದೆ ಎಂದರೆ, ಒಬ್ಬರಿಗೊಬ್ಬರಿಗೆ ಆಗುವುದಿಲ್ಲ, ವೈಷಮ್ಯ, ಅಸಹಕಾರ, ಮುಂತಾದವುಗಳನ್ನು ನಾವು ನೋಡಬಹುದಾಗಿದೆ. ಇದು ಹಿಂದಿನಿಂದಲೂ ಬೆಳೆದುಕೊಂಡು ಬಂದಿದೆ. ಈ ಒಂದು ವಾತಾವರಣವಿರುವುದರಿಂದ ಅಲ್ಲಿ ಕೆಲಸಗಳು ಸುಸೂತ್ರವಾಗಿ ನಡೆದುಕೊಂಡು ಹೋಗುವುದಿಲ್ಲ. ನಾವು ಈಗ ಅವರಿಗೆ ಕೊಟ್ಟಿರುವ ಅಧಿಕಾರವನ್ನು ಯಾವ ರೀತಿ ಸದ್ವಿನಿಯೋಗಪಡಿಸಿಕೊಳ್ಳಬೇಕು ಮತ್ತು ಹಣವನ್ನು ಯಾವ ರೀತಿ ಹೊಂದಿಸಿಕೊಳ್ಳಬೇಕು ಎಂಬ ಬಗ್ಗೆ ಅವರು ಯೋಚನೆ ಮಾಡುತ್ತಿಲ್ಲ. ಈ ರೀತಿಯಾದಂಥ ದುಃಖದಾಯಕವಾದಂಥ ವಾತಾವರಣ ಗ್ರಾಮಗಳ ಮಟ್ಟದಲ್ಲಿ ಏನಿದೆ, ಇದರಿಂದ ಆ ಸಂಸ್ಥೆಯಲ್ಲಿರುವ ಸದಸ್ಯರು ಸಂಪೂರ್ಣವಾಗಿ ತಮ್ಮ ಸೇವೆಯನ್ನು ಸಲ್ಲಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ದಿಶೆಯಲ್ಲಿ ಈ ಸ್ಥಳೀಯ ಸಂಸ್ಥೆಗಳು ಪ್ರಜಾ ಸೇವೆಯನ್ನು ಚೆನ್ನಾಗಿ ಮಾಡಬೇಕಾದರೆ, ಸರ್ಕಾರ ಏನು ಮಾಡಬೇಕು ಎಂಬುದನ್ನು ನಾವು ಹೆಚ್ಚು ಶ್ರದ್ಧೆಯಿಂದ ಪರಿಶೀಲನೆ ಮಾಡುತ್ತಿದ್ದೇವೆ,

ಸರ್ಕಾರದವರು ಏನೇನು ಮಾಡಬೇಕು ಎನ್ನುವುದನ್ನು ಇನ್ನೂ ಹೆಚ್ಚು ಶ್ರದ್ಧೆಯಿಂದ ಅದನ್ನು ಪರ್ಯಾಲೋಚನೆ ಮಾಡುತ್ತಿದ್ದಾರೆ. ತಮ್ಮೆಲ್ಲರ ಒಂದು ಸಹಕಾರದಿಂದ ತಾವು ಹೇಳಿದಂತಹ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಧನಿಕರು ಇರುವ ಜಿಲ್ಲೆಯಾದ ಮಂಡ್ಯ ಜಿಲ್ಲೆಗೆ ದೇವೇಂದ್ರನನ್ನು ತಂದು ಪಂಚಾಯಿತಿಯ ಅಧ್ಯಕ್ಷನನ್ನಾಗಿ ಇಟ್ಟರೂ ಕೂಡ ಅವನು ಕೆಲಸ ಮಾಡುವುದಕ್ಕೆ ಆಗದೇ ರಜಾ ಹಾಕಿ ಹೋಗುತ್ತಾನೆ. ಆದ್ದರಿಂದ ಪಂಚಾಯಿತಿ ಅಧ್ಯಕ್ಷರು ಕೆಲಸ ಮಾಡುವಂತಹ ವಾತಾವರಣವನ್ನು ಉಂಟುಮಾಡಬೇಕು. ಮಹಾತ್ಮಾ ಗಾಂಧೀಜಿಯವರು ರಾಮರಾಜ್ಯವನ್ನು ಗ್ರಾಮರಾಜ್ಯದ ಮುಖಾಂತರ ಕಾಣಬೇಕು ಎಂದು ಹೇಳುತ್ತಿದ್ದರು. ಅವರು ಹೇಳಿದ್ದು ಏನೆಂದರೆ ರಾಜ್ಯಾಂಗದಲ್ಲಿರುವ ಪ್ರಕಾರ ಜನರಲ್ಲಿ ಒಂದು ಸಮಾನತೆಯನ್ನು ತರಬೇಕು ಪ್ರತಿಯೊಬ್ಬ ಪ್ರಜೆಗೂ ಸಮಾನ ಹಕ್ಕನ್ನು ಒದಗಿಸಬೇಕು ಎನ್ನುವುದು ಅವರ ಒಂದು ಉದ್ದೇಶವಾಗಿತ್ತು. ಇದಕ್ಕೆ ಎಲ್ಲರೂ ಸಹಕರಿಸಬೇಕು. ರಾಮರಾಜ್ಯವಾಗಬೇಕಾದರೆ ಹೊಟ್ಟೆಕಿಚ್ಚು ಬೇಡ ಜಾತಿಯ ಮನೋಭಾವ ಬೇಡ ಎಲ್ಲರೂ ಒಂದೇ ಭಾವನೆಯಿಂದ ದುಡಿದರೆ ಆ ಕನಸು ನನಸಾಗುತ್ತದೆ ಎನ್ನುವ ದೃಷ್ಟಿಯಿಂದ ಗಾಂಧೀಜಿಯವರು ಆ ಮಾತನ್ನು ಹೇಳಿದರು. ಸಮಾಜದಲ್ಲಿರತಕ್ಕ ಏರುಪೇರುಗಳನ್ನು ತೊಡೆದು ಹಾಕಿ ಎಲ್ಲರಿಗೂ ಒಳ್ಳೆಯ ಅವಕಾಶಗಳನ್ನು ಕೊಟ್ಟು ಸಮಾಜದಲ್ಲಿ ಬಾಳುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಡಬೇಕು ಎಂದು ಪಂಚಾಯಿತಿಯನ್ನು ಗ್ರಾಮ ಸರ್ಕಾರ ಎಂದು ಕರೆದು ಅದಕ್ಕೆ ಎಲ್ಲಾ ಶಕ್ತಿಯನ್ನು ತುಂಬ ಬೇಕು ಎಂದು ನಾವು ಪ್ರಯತ್ನ ಮಾಡುತ್ತಿದ್ದೇವೆ. ಪ್ರಜಾಪ್ರಭುತ್ವದ ತತ್ವದ ತಳಹದಿಯ ಮೇಲೆ ಸ್ಥಾಪನೆ ಮಾಡಿರುವ ಈ ಪಂಚಾಯಿತಿ ರಾಜ್ಯ ಸಂಸ್ಥೆಗಳು ಕೆಲಸ ಮಾಡುವ ರೀತಿಯನ್ನು ನೋಡಿದರೆ ಇದರಿಂದ ಏನು ಪ್ರಯೋಜನ ? ಇದರಿಂದ ಏನು ಪುರುಷಾರ್ಥ ಸಾಧಿಸಿದಂತಾಗುತ್ತದೆ ಎಂದು ಕಂಡರೂ ಕೂಡ ನಾವು ಅದನ್ನು ಕೈಬಿಡತಕ್ಕದ್ದಲ್ಲ. ಅವುಗಳಿಗೆ ಒಂದು ಸುಚೇತನ ಕೊಟ್ಟು ಹಣ ಕೊಟ್ಟು ಅಧಿಕಾರ ಕೊಟ್ಟು ಆಡಿಟ್ ಮಾಡುವುದರ ಮುಖಾಂತರ ಯಾರಾದರೂ ತಪ್ಪು ಮಾಡುವುದನ್ನು ಕಂಡುಹಿಡಿದಾಗ ಅಂತಹವರಿಗೆ ಎಚ್ಚರಿಕೆಯನ್ನು ಕೊಟ್ಟು ಸರಿಪಡಿಸಬೇಕಾಗುತ್ತದೆ. ಇಂತಹ ಸಂಸ್ಥೆಗಳನ್ನು ಯಾರಾದರೂ ಸ್ವಾರ್ಥಕ್ಕೆ ಉಪಯೋಗಿಸಿ ಕೊಂಡರೆ ಅಂಥಹವರಿಗೆ ಕಾನೂನು ಪ್ರಕಾರ ಬುದ್ಧಿಯನ್ನು

ಕಲಿಸತಕ್ಕಂತಹ ಪ್ರಯತ್ನ ಮಾಡಬೇಕು. ಚೆನ್ನಾಗಿ ಕೆಲಸ ಮಾಡತಕ್ಕ ಸಂಸ್ಥೆಗಳಿಗೆ ಬಹುಮಾನ ಕೊಡತಕ್ಕಂತಹ, ಮತ್ತು ಹೊಗಳತಕ್ಕಂತಹ ಕೆಲಸವನ್ನು ಮಾಡಲೇಬೇಕು. ಯಾರೇ ವ್ಯಕ್ತಿಯಾಗಲಿ ಅಥವಾ ಸಂಸ್ಥೆಯಾಗಲಿ ಚೆನ್ನಾಗಿ ಕೆಲಸ ಮಾಡಿದಾಗ ಅವರನ್ನು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಂದು ಹೇಳಬೇಕಾಗುತ್ತದೆ. ಈ ತತ್ವವನ್ನು ನಾವು ಅನುಸರಿಸುತ್ತಿದ್ದೇವೆ. ಈ ಒಂದು ಗ್ರಾಮ ರಾಜ್ಯ ಸಂಸ್ಥೆಗಳು ಏನಿವೆ ಅವು ಕಾನೂನು ಪ್ರಕಾರ ಕಂದಾಯವನ್ನು ಹಾಕುವುದಕ್ಕೆ ಅಧಿಕಾರವಿದ್ದರೆ ಅದನ್ನು ಕೊಡತಕ್ಕ ಆಕ್ಟನ್ನು ಬದಲಾವಣೆ ಮಾಡಿ ಈಗಿರತಕ್ಕ ಕಂದಾಯವನ್ನು ಸ್ವಲ್ಪ ಹೆಚ್ಚು ಮಾಡಿದರೆ ಅದರಿಂದ ಅವರಿಗೆ ಹೆಚ್ಚು ಹಣ ಬರುತ್ತದೆ. ಆ ಕ್ಷಣದಲ್ಲಿ ಗ್ರಾಮ ಪಂಚಾಯಿತಿಗೆ ಅರ್ಧ ಹಣ, ತಾಲ್ಲೂಕು ಬೋರ್ಡಿಗೆ ಅರ್ಧ ಹಣ ಸೇರುತ್ತದೆ. ಈ ರೀತಿಯಲ್ಲಿ ಪ್ರಜಾಪ್ರಭುತ್ವದ ತಳಹದಿಯ ಮೇಲೆ ಸ್ಥಾಪಿತವಾದಂತಹ ಪಂಚಾಯಿತಿ ರಾಜ್ಯ ಸಂಸ್ಥೆಗಳಿಗೆ ಹಣ ಸಹಾಯವನ್ನು ಒದಗಿಸಿ ಅವುಗಳ ಬೆಳವಣಿಗೆಗೆ ಅವಕಾಶ ಮಾಡಿ ಕೊಡಬೇಕು. ಹೆಚ್ಚು ಕಂದಾಯ ಹಾಕುವುದಕ್ಕೆ ಅಧಿಕಾರ ಕೊಟ್ಟು ಹೆಚ್ಚಿನ ಸಹಾಯವನ್ನು ಮಾಡಬೇಕು ಎನ್ನುವ ಕಾರ್ಯಕ್ರಮವನ್ನು ಅನುಸರಿಸಬೇಕು ಎಂದು ಇದ್ದೇವೆ.

ಇನ್ನು ಎರಡನೆಯದಾಗಿ ಅಭಿವೃದ್ಧಿ ಕಾರ್ಯಚಟುವಟಿಕೆಗಳ ಬಗ್ಗೆ ಹೇಳುವುದಾದರೆ, ಡಿ.ಪಿ.ಎ.ಪಿ. ಕಾರ್ಯಕ್ರಮದ ಬಗ್ಗೆ ಮಾನ್ಯ ಸದಸ್ಯರುಗಳು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಬಹು ಮುಖ್ಯವಾಗಿ ಎಲ್ಲೆಲ್ಲಿ ಮಳೆ ಕಡಿಮೆ ಬೀಳುತ್ತದೆ ಅಂಥ ಪ್ರದೇಶದಲ್ಲಿ ಆಕಾಶವೇ ಮಳೆ ಭೂಮಿಯೇ ಬೆಳೆ ಎಂದು ರೈತ ನಂಬಿಕೊಂಡಿರುವ ಪ್ರದೇಶಗಳಲ್ಲಿ ರೈತರಿಗೆ ನವೀನವಾದ ಸೌಲಭ್ಯವನ್ನು ಒದಗಿಸಬೇಕು. ಎನ್ನುವ ದೃಷ್ಟಿಯಿಂದ ಈ ಯೋಜನೆಯನ್ನು ನಾವು ಜಾರಿಗೆ ತಂದಿದ್ದೇವೆ, ಇದರಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡರ ಸಹಕಾರದಿಂದ ಈ ಯೋಜನೆಯು ನಡೆಯುತ್ತದೆ. ಇದರಲ್ಲಿ ನಮ್ಮ ಅನುಭವಕ್ಕೆ ಬಂದಿರುವಹಾಗೆ ಡಿ.ಪಿ.ಎ.ಪಿ. ಯೋಜನೆಯ ಕಾರ್ಯಕ್ರಮದಲ್ಲಿ ಕಡಿಮೆ ಮಳೆಬೀಳತಕ್ಕಂತಹ ನಾಗಮಂಗಲ, ಪಾವಗಡ, ಇಂತಹ ಪ್ರದೇಶಗಳಲ್ಲಿ ಕಡಿಮೆ ಮಳೆ ಬೀಳತಕ್ಕಂತಹ ಪ್ರದೇಶದಲ್ಲಿ ರೈತರಿಗೆ ಅನುಕೂಲ ಮಾಡುವ ದೃಷ್ಟಿಯಿಂದ ಈ ಯೋಜನೆಯನ್ನು ಮಾಡಿದ್ದೇವೆ. ಕೇಂದ್ರ ಸರ್ಕಾರದ ಹಣ ಮತ್ತು ಸಂಸ್ಥಾನ ಸರ್ಕಾರದ ಹಣ ಎರಡೂ ಇದರಲ್ಲಿ ಸೇರಿರುತ್ತದೆ. ಈ ಯೋಜನೆಯಲ್ಲಿ ವ್ಯವಸಾಯ ಕೈಗಾರಿಕೆ, ಮೀನುಗಾರಿಕೆ, ಪಶುಪಾಲನೆ, ಕೋಳಿ ಸಾಕಾಣಿಕೆ, ಸಾಯಿಲ್‌ಕನ್‌ಸರ್‌ವೇಷನ್ ಇತ್ಯಾದಿ ೧೦ ೧೨ ವಿಭಾಗಗಳು ಇದರಲ್ಲಿ ಇವೆ. ಇದನ್ನು ವ್ಯವಸ್ಥೆ ಮಾಡುವಾಗ ಬಿಜಾಪುರ ಒಂದು ಜಿಲ್ಲೆಯಲ್ಲಿ ಈ ಯೋಜನೆಯನ್ನು ಕೈಗೊಳ್ಳುವುದಕ್ಕೆ ವಿಶ್ವಬ್ಯಾಂಕಿನಿಂದ ಮತ್ತು ಇತರ ಬ್ಯಾಂಕುಗಳಿಂದ ಹೆಚ್ಚು ಹಣ ಪಡೆದು ಸಮಾರು೧೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕ ವ್ಯವಸ್ಥಿತವಾದ ಒಂದು ಯೋಜನೆಯನ್ನು ಹಾಕಿಕೊಳ್ಳತಕ್ಕ ಅವಶ್ಯಕತೆ ಇದೆ. ಈ ಯೋಜನೆಯಲ್ಲಿ ಖರ್ಚು ಮಾಡತಕ್ಕ ಹಣದಲ್ಲಿ ಮೂರನೇ ಒಂದು ಭಾಗವನ್ನು ಬಿಜಾಪುರ ಜಿಲ್ಲೆಯಲ್ಲಿಯೂ, ಮೂರನೇ ಎರಡು ಭಾಗದ ಹಣವನ್ನು ಬೇರೆ ಬೇರೆ ಜಿಲ್ಲೆಯ ಭಾಗಗಳಿಗೂ ಖರ್ಚು ಮಾಡಬೇಕೆಂಬ ಉದ್ದೇಶ ಇದೆ. ಸುಮಾರು ೪೬ ತಾಲ್ಲೂಕುಗಳು ಇದುವರೆಗೂ ಈ ಒಂದು, ಪ್ರಯೋಜನವನ್ನು ಪಡೆದಿವೆ. ಸರ್ಕಾರದವರು ಇದನ್ನು ಯೋಚನೆ ಮಾಡಿ ಅನೇಕ ಹಿಂದುಳಿದ ಪ್ರದೇಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಯೋಜನೆಯನ್ನು ಇನ್ನೂ ಹೆಚ್ಚು ಪ್ರದೇಶಗಳಿಗೆ ವಿಸ್ತರಣೆ ಮಾಡಿ ಇನ್ನೂ ಹೆಚ್ಚು ತಾಲ್ಲೂಕುಗಳನ್ನು ಸೇರಿಸಬೇಕು ಎನ್ನುವುದು ಸರ್ಕಾರದ ಗಮನದಲ್ಲಿ ಇದೆ. ಈ ಡಿ.ಪಿ.ಎ ಪಿ ಯೋಜನೆಯು ಜಾರಿಗೆ ಬಂದಮೇಲೆ ನಮ್ಮ ಅನುಭವದ ಪ್ರಕಾರ ಯಾವ ಯಾವ ಪ್ರದೇಶಗಳು ಬಿಟ್ಟು ಹೋಯಿತು ಎಂಬುದು ನಮ್ಮ ಅನುಭವಕ್ಕೆ ಬಂದಿದೆ. ಐಐಆರ್‌ಡಿ; ಡಿಪಿಎಪಿ ; ಐಆರ್‌ಡಿ ಈ ಯೋಜನೆಗಳಲ್ಲಿ ನಿರುದ್ಯೋಗಿಗಳಿಗೆ ಏನೇನು ಕೊಡುವುದಕ್ಕಾಗಿಲ್ಲ ಅದನ್ನು ಇದರಲ್ಲಿ ಸೇರಿಸಬೇಕೆನ್ನುವ ಉದ್ದೇಶ ಇದೆ.

ಈ ಯೋಜನೆಯಲ್ಲಿ ಕೇಂದ್ರ ಸರ್ಕಾರದ ಒಂದು ನೆರವನ್ನು ಉಪಯೋಗಿಸಿಕೊಂಡು ಪ್ರಕೃತಿದತ್ತವಾಗಿರತಕ್ಕ ತೊಂದರೆಗಳು ಎಂದರೆ ಮಳೆಬಾರದೇ ಇರತಕ್ಕಂತಹ ಪ್ರದೇಶಗಳು ಏನಿವೆ ಆ ಪ್ರದೇಶದಲ್ಲಿ ಅವರ ತೊಂದರೆಗಳನ್ನು ನೀಗಿಸಬೇಕು ಎನ್ನುವ ಒಂದು ಉದ್ದೇಶ ಇದೆ. ಅಲ್ಲದೆ ಬಂಜರು ಭೂಮಿ ಇರತಕ್ಕಂತಹ ಪ್ರದೇಶವನ್ನು ಫಲವತ್ತಾಗಿ ಮಾಡಿ ಭೂಸಾರವನ್ನು ಹೆಚ್ಚಿಸಿ ಪ್ರಕೃತಿಯಿಂದ ಉಂಟಾಗತಕ್ಕ ದೋಶವನ್ನು ತೆಗೆಯಬೇಕು ಎಂಬುದು ಒಂದು.

ಮೂರನೆಯದಾಗಿ ನೌಕರಿ ಇಲ್ಲದೇ ಇರತಕ್ಕ ಜನ ಹೆಚ್ಚಾಗಿ ಏನು ಇರುತ್ತಾರೆ ಅವರಿಗೆ ಯೋಜನಾಗತವಾಗಿ ಕೈತುಂಬ ಕೆಲಸ ಸಿಗುವಂಥ ನೌಕರಿ ಕೊಡಬೇಕು ಎನ್ನುವುದು. ಈ ಮೂರನ್ನೂ ಮನಸ್ಸಿನಲ್ಲಿಟ್ಟುಕೊಂಡು ನಾವು ಯೋಜನೆಗಳನ್ನು ಮಾಡುತ್ತಾ ಇದ್ದೇವೆ. ಎಸ್.ಎಫ್.ಡಿ.ಎ. ಅಂದರೆ ಸಣ್ಣ

ರೈತರ ಪುರೋಭಿವೃದ್ಧಿ ಯೋಜನೆ ಎಂದು ನಾವು ಅದನ್ನು ಸ್ಥೂಲವಾಗಿ ಇಟ್ಟುಕೊಳ್ಳಬಹುದು. ಈ ಮೂರೂ ರೂಪದ ಕೆಲಸಕಾರ್ಯಗಳಲ್ಲಿ ಅಚ್ಚುಕಟ್ಟಾಗಿ ಏನು ಸೆಕ್ಟರ್ಸ್ ಎಂದು ಇಟ್ಟುಕೊಂಡಿದ್ದೇವೆ ಆ ಬಾಬು ಎಲ್ಲದಕ್ಕೂ ಒಂದೆ. Common to all sectors and schemes. ಒಂದಕ್ಕೊಂದಕ್ಕೆ ಇರುವ ವ್ಯತ್ಯಾಸವೇನೆಂದರೆ, ಡಿಪಿಎಪಿಯಲ್ಲಿ ಅಭಾವವಿರುವ ಪ್ರದೇಶಗಳಿಗೆ ನೀರಾವರಿಯನ್ನು ಕೊಡತಕ್ಕಂಥಾದ್ದು, ನೀರಾವರಿ ಕಾಮಗಾರಿಗಳನ್ನು ಹೆಚ್ಚುಹೆಚ್ಚಾಗಿ ಮಾಡಿ ಅಂತರ್ಜಲದ ಉಪಯೋಗವನ್ನು ರೈತರಿಗೆ ಒದಗಿಸಿಕೊಡಬೇಕು ಎಂದು ಮಾಡಿದ್ದೇವೆ. ಐಐಆರ್‌ಡಿ ಅಂದರೆ. Intensive and Integrated Rural Development Programme. ಯಾವ ಒಂದು ಭಾಗಕ್ಕೆ ಏನು ಉಚಿತವೋ ಅವುಗಳನ್ನು ತೆಗೆದುಕೊಂಡು ಹೆಚ್ಚು ಹೆಚ್ಚಾಗಿ ಮಾಡುವಂಥಾದ್ದು, ಕೇವಲ ಹರಿಜನ-ಗಿರಿಜನರಿಗೆ ಆಗಲೀ, ಏನೂ ನೌಕರಿ ಇಲ್ಲದೆ, ಕೈಕೆಲಸವಿಲ್ಲದೆ ಅಲೆಯುತ್ತಾ ಇರತಕ್ಕಂಥಾವರಿಗೆ ಬಡವರಾಗಿರತಕ್ಕವರಿಗೆ ಶೇಕಡಾವಾರು ತೆಗೆದುಕೊಂಡು ಆ ಭಾಗವನ್ನು ಅಭಿವೃದ್ಧಿಗೆ ತೆಗೆದುಕೊಳ್ಳುವಂಥಾದ್ದು. ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆ ಮಾತನಾಡುತ್ತಾ ಸಣ್ಣ ರೈತರ ಕಾರ್ಯಕ್ರಮಗಳ ಬಗ್ಗೆ ಹೇಳಿದರು. ಮೊದಲು ೮ ಮತ್ತು ೨ ಒಟ್ಟು ೧೦ ಜಿಲ್ಲೆಗಳಿಗೆ ವಿಸ್ತರಿಸಿದೆವು. ಈಗ ಇದರ ಅವಶ್ಯಕತೆ ಹೆಚ್ಚಾಗಿ ಕಂಡು ಬಂದಮೇಲೆ ಇಡೀ ಕರ್ನಾಟಕಕ್ಕೆಲ್ಲಾ ಈ ಯೋಜನೆಯನ್ನು ವಿಸ್ತರಣೆ ಮಾಡುತ್ತಾ ಇದ್ದೇವೆಂದು ತಿಳಿಸಿದ್ದಾರೆ. ಮತ್ತೆ ಅದನ್ನು ಅವಲಂಬಿಸಿ ಹೇಳುವುದು ಅನಾವಶ್ಯಕ ಎಂದು ನಾನು ಭಾವಿಸುತ್ತೇನೆ. ಇದು ಮೂರು ನಾಲ್ಕೈದು ಬೇರೆ ಬೇರೆ ಭಾಗ ಎಂದು ಕಂಡರೂ ಕೂಡ ಅದು ಸಂಪೂರ್ಣವಾಗಿ ಒಂದೇ ಯೋಜನೆ ಎನ್ನುವುದನ್ನು ತಮಗೆ ತಿಳಿಸುವುದಕ್ಕೆ ನನಗೆ ಸಂತೋಷವಾಗುತ್ತದೆ. ಮೊದಲು ಬರಗಾಲದ ಭಾದೆ, ಆ ಒಂದು ಸಂಕೋಲೆ ಏನಿತ್ತು ಅದು ಇಲ್ಲದ ಹಾಗೆ ಇಡೀ ಸಂಸ್ಥಾನದಲ್ಲಿ ಆ ಒಂದು ಭಾಗಗಳನ್ನು ನಾವು ತೆಗೆದುಕೊಂಡು ಈಗ ಅವುಗಳಿಗೆ ಸೌಕರ್ಯವನ್ನು ಕೊಡತಕ್ಕ ಯೋಜನೆಯನ್ನು ಮಾಡುತ್ತಾ ಇದ್ದೇವೆ. ಈ ಒಂದು ಇಲಾಖೆಯ ಕೆಲಸದಲ್ಲಿ ಬಹುಭಾಗ ಈ ಅಭಿವೃದ್ಧಿ ಕಾರ್ಯಗಳಿಗಾಗಿ ನಡೆಯುತ್ತಾ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಇಷ್ಟು ವಿಚಾರವನ್ನು Drought Prone Area Programme and Small Farmers Agency ಇವುಗಳ ವಿಷಯದಲ್ಲಿ ತಿಳಿಸಿದ್ದೇನೆ. ಉಳಿದ ವಿಚಾರ ಅಂದರೆ, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ನೀರು ಸರಬರಾಜು ಯೋಜನೆಗೆ ಸಂಬಂಧಪಟ್ಟ ಹಾಗೆ ಮಾನ್ಯ ಸದಸ್ಯರನೇಕರು ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಏನೇನು ನ್ಯೂನತೆಗಳು, ರೋಗ ಏನಿವೆ, ಇದನ್ನು ರೋಗ ಎಂದು ಕರೆಯಲಿಕ್ಕೆ ಆಗದೇಹೋದರೂ ಹ್ಯಾಂಡಿಕ್ಯಾಪ್ಸ್ ಎಂದು ಕರೆದುಕೊಳ್ಳಬಹುದು, ಇವುಗಳ ಬಗ್ಗೆ ಸರ್ಕಾರ ಕೂಲಂಕುಷವಾಗಿ ಪರಿಶೀಲನೆ ಮಾಡಿ ಇವುಗಳಿಗೆ ಮದ್ದನ್ನು ಕಂಡುಹಿಡಿದಿದೆ. ನಮ್ಮ ದೇಶದಲ್ಲಿ ಬಹಳ ವರ್ಷಗಳಿಂದಲೂ ಕುಡಿಯುವ ನೀರಿನ ಸೌಕರ್ಯಕ್ಕಾಗಿ ಸೇದುವ ಬಾವಿಗಳು ಮಾತ್ರ ಇದ್ದುವು. ಈ ಬಾವಿಗಳನ್ನು ಯೋಜನಾಗತವಾಗಿ ಮಾಡಬೇಕಾದ ಪ್ರಮೇಯವಿರಲಿಲ್ಲ. ಕಾರಣಾಂತರದಿಂದ ಬರಗಾಲ ಪ್ರಾಪ್ತಿಯಾಗಿ ಜಲಕ್ಷಾಮ ಬಂದದ್ದರಿಂದ ಈ ಸೇದುವ ಬಾವಿಗಳಲ್ಲಿ ನೀರು ಕಡಿಮೆ ಇದ್ದುದರಿಂದ ಹಾಹಾಕಾರ ಜಾಸ್ತಿಯಾಯಿತು. ಈ ಒಂದು ಹಾಹಾಕಾರ ಪರಿಸ್ಥಿತಿಯನ್ನು ಹೇಗೆ ಹತೋಟಿಗೆ ತರುವುದು, ಜನಗಳ ನೋವನ್ನು ಹೇಗೆ ನೀಗುವುದು ಎನ್ನುವ ಸಮಸ್ಯೆ ಬಂದು ಕೊಳವೆ ಬಾವಿಗಳನ್ನು ಮಾಡತಕ್ಕ ಪದ್ಧತಿಯನ್ನು ೧೯೭೦-೭೧ರಿಂದ ಜಾರಿಗೆ ತಂದಿದ್ದೇವೆ. ಕೊಳವೆ ಬಾವಿಗಳ ಬಗ್ಗೆ ಮಾನ್ಯ ಸದಸ್ಯರೊಬ್ಬರು ಪ್ರಸ್ತಾಪಮಾಡುತ್ತಾ, ಕೊಳವೆ ಬಾವಿಗಳನ್ನು ತೆಗೆದಿರತಕ್ಕಂಥಾದ್ದು ೨೨ ಸಾವಿರ, ಅದನ್ನು ರಿಪೇರಿ ಮಾಡಿರುವುದು ೨೮ ಸಾವಿರ ಎಂದು ಅಂಕಿ ತೋರಿಸಿದ್ದೀರಿ, ಇದು ಹೇಗೆ ಸಮಂಜಸ, ಇದು ಸಾಧ್ಯವೇ, ಎಂದು ಹೇಳಿ ಉತ್ತರವನ್ನು ಕೋರಿದರು. ಈ ಒಂದು ಯೋಜನೆ ಅಂದರೆ, ಸುಮಾರು ೨೨ ಸಾವಿರ ಕೊಳವೆ ಬಾವಿಗಳನ್ನು ೧೯೭೮-೭೯ ಆಖೈರಿಗೆ ಪೂರೈಸಿ, ಇವುಗಳಲ್ಲಿ ೧೮ ಸಾವಿರ ಕೊಳವೆ ಬಾವಿಗಳಲ್ಲಿ ಜನಪ್ರಿಯವಾಗಿ ನೀರು ಸಿಕ್ಕಿ, ೧೩ ಸಾವಿರಕ್ಕೆ ಕೈ ಪಂಪುಗಳನ್ನು ಹಾಕಿದ್ದೇವೆ ಎಂದು ಸಂತೋಷದಿಂದ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಮಾನ್ಯ ಸದಸ್ಯರು ಇಲಾಖೆ ನಿದ್ದೆ ಮಾಡುತ್ತಾ ಇದೆಯೇ, ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ, ತಾವು ಛಾಟಿ ಏಟು ಹೊಡೆಯಬೇಕು, ತಾವೂ ಚುರುಕಾಗಬೇಕು ಎಂದು ಪ್ರಸ್ತಾಪ ಮಾಡಿದ್ದಾರೆ. ಛಾಟಿ ಏಟು ಇಲಾಖೆಗೆ ಹೊಡೆದರೆ ನಾನು ಸಂತೋಷ ಪಡುತ್ತೇನೆ. ತಮ್ಮದು ದುರುದ್ದೇಶವಿರುವುದಿಲ್ಲ, ಇನ್ನೂ ಸ್ವಲ್ಪ ಚೆನ್ನಾಗಿ ಕೆಲಸ ಮಾಡಲಿ ಎಂದು ಹೇಳುತ್ತೀರಿ ಒಳ್ಳೆಯದು. ಆದರೆ Willing horses are over ridden ಎನ್ನುವುದನ್ನು ತಾವು ಮರೆಯಬಾರದು. ಒಬ್ಬ ಅಧಿಕಾರಿಯಾಗಲೀ. ಮಂತ್ರಿಯಾಗಲೀ, ಸದಸ್ಯರಾಗಲೀ ಚೆನ್ನಾಗಿ ಕೆಲಸ ಮಾಡಿದರೆ ಇನ್ನೂ ಹೆಚ್ಚು ಕೆಲಸ ಮಾಡಿಸೋಣ ಎಂದು ಹೇಳುವುದುಂಟು. ಇದರ ಬಗ್ಗೆ ಒಂದುವಿಷಯವನ್ನು ಹೇಳುವುದಾದರೆ, ೧೯೭೦ನೇ ಇಸವಿಯಿಂದ ಇಲ್ಲಿಯವರೆಗೆ ಅಂದರೆ ೮ ವರ್ಷಗಳಲ್ಲಿ ಈ ಯೋಜನೆ ಹುಟ್ಟಿದ

ಮೇಲೆ ೨೨ ಸಾವಿರ ಬಾವಿಗಳನ್ನು ನಾವು ಮಾಡಿದ್ದೇವೆ. ಸರಾಸರಿ ಒಂದು ವರ್ಷಕ್ಕೆ ೩೦೦೦ ಬಾವಿಗಳಾಯಿತು. ನಾವು ಅಗೆದು ಮಾಡುತ್ತಿದ್ದ ಸೇದುವ ಬಾವಿಗಳಲ್ಲ, ಕೊಳವೆ ಬಾವಿಗಳು, ಈ ಬಾವಿಗಳಿಗೆ ಟೆಕ್ನಾಲಜಿ ಬೇಕಾಗುತ್ತದೆ, ಇಂತಹ ಕಡೆ ನೀರು ಬೀಳುತ್ತದೆ ಇಂತಹ ಕಡೆ ನೀರು ಬೀಳುವುದಿಲ್ಲ ಎನ್ನತಕ್ಕಂಥ ತಜ್ಞರ ಅಭಿಪ್ರಾಯ ಬೇಕಾಗುತ್ತದೆ. ಅದಕ್ಕೆ ಮಿಷನ್ ಬೇಕಾಗುತ್ತದೆ. ಮಿಷಿನ್ ನಮ್ಮ ಇಚ್ಛೆಯನ್ನು ಅನುಸರಿಸಿ ನಡೆಯುವುದಿಲ್ಲ. ಕೆಲವು ವೇಳೆ ಅದರ ಇಚ್ಛೆಯಂತೆ ನಡೆಯುವುದು ಕಂಡುಬರುತ್ತದೆ. ಅದು ಹೇಳಿದಹಾಗೆ ನಾವು ಕೇಳಬೇಕಾಗುತ್ತದೆ, ಅದರ ಕೊರೆಯುವ ಪಾಯಿಂಟನ್ನು ಬದಲಾಯಿಸಿ ಹಾಕಬೇಕಾಗುತ್ತದೆ. ವಜ್ರಮುಷ್ಠಿ ಇರತಕ್ಕಂಥ ಹಾರ್ಡ್‌ನೆಸ್ಸ್ ವೆರೈಟಿಯನ್ನು ಹಾಕಬೇಕಾಗುತ್ತದೆ ಆದರೂ ಕೆಲವು ವೇಳೆ ನೀನೆ ಕೊರಿ ನೀನೇ ಕೊರಿ ಎಂದು ಕಿರ್ಲೋಸ್ಕರ್ ಎನ್ನುತ್ತದೆ. ಇಂಜಿನಿಯರ್ಸ್ ಬಾರೋಮೀಟರ್ ಎಲ್ಲಾ ಇಟ್ಟುಕೊಂಡಿರುತ್ತಾರೆ. ಆದರೂ ಒಂದು ಸಣ್ಣ ಪಾಯಿಂಟ್ ಎಗರಿ ಹೋದರೆ ಇಂಜನಿಯರ್ ತಲೆ ಮೇಲೆ ಕೈಹೊತ್ತು ಕುಳಿತುಕೊಳ್ಳಬೇಕಾಗುತ್ತದೆ. ಅದಕ್ಕೆ ದುಡ್ಡು ಹಾಕಿರುತ್ತೇವೆ, ಸರಿಯಾದ ಮಾರ್ಗವಿರುತ್ತದೆ.

ಶ್ರೀ ಜೆ. ಎಚ್. ಪಟೇಲ್.—ಇಂಜಿನಿಯರ್‌ಗೆ ಕೊರೆಯುವುದು ಗೊತ್ತಿಲ್ಲದೇ ಹೋದರೂ ತಮಗೆ ಗೊತ್ತಿದೆಯಲ್ಲ.

ಶ್ರೀ ಕೆ. ಪ್ರಭಾಕರ್ —ಇಂಜಿನಿಯರ್ ಬಂಡೆಯನ್ನು ಕೊರೆದರೆ ನಾವು ಅವರ ಬುದ್ಧಿಯನ್ನು ಕೊರೆಯಬೇಕಾಗುತ್ತದೆ. ಮಾನ್ಯ ಸದಸ್ಯರು ನಮ್ಮ ಉದ್ದೇಶ ಏನಿದೆ, ಸರ್ಕಾರದ ನಿಯಮ ಏನಿದೆ, ನಿಮಗ ಅಧಿಕಾರ ಸಾಲದೆ, ದುಡ್ಡು ಸಾಲದೆ ಹೇಗೆ ಚುರುಕಾಗುತ್ತದೆ. ಚುರುಕಾಗಬೇಕಾದರೆ ಛಟಿ ಏಟು ಬೀಳಬೇಕು ಎಂದು ಮುಂತಾಗಿ ಹೇಳಿದರು. ಚುರುಕು ಮಾಡುವುದಕ್ಕೆ ಎಲ್ಲರಿಗೂ ಛಾಟಿ ಏಟು ಬೇಕಾಗಿಲ್ಲ. ಕೆಲವರು ಸ್ವಲ್ಪ ಮಂದಗಾಮಿಗಳು ಏನಿದ್ದಾರೆ ಅವರಿಗೆ ಸ್ವಲ್ಪ ಬೇಕಾಗುತ್ತದೆ ನಾವು ಈಗಾಗಲೇ ಚುರುಕುಗೊಳಿಸಿರುವುದು ತಮಗೆಲ್ಲಾ ಗೊತ್ತಿದೆ. ಆದರೆ ಮಂದಗಾಮಿಗಳನ್ನು ಬಿಟ್ಟುಕೊಡತಕ್ಕಂಥ ಮನೋಧರ್ಮ ಸರ್ಕಾರಕ್ಕೆ ಇಲ್ಲ. There are two schools of thought in making assessment of current progress. ಒಂದು ಕಡೆ ದೇಶ ಬಹುಬೇಗ ಬಹುಬೇಗ ಬಹುಬೇಗ ಮುಂದುವರೆಯುತ್ತದೆ ಎನ್ನುವ ಮನೋಧರ್ಮವುಳ್ಳಂಥ ಜನ. ಮತ್ತೊಂದು ಕಡೆ.........

ಒಬ್ಬ ಸದಸ್ಯರು. —ಈಗ ತೆಗೆದಿರುವ ಕೊಳವೆ ಬಾವಿಗಳಿಂದ ಎಷ್ಟು ಜನಕ್ಕೆ ನೀರನ್ನು ಒದಗಿಸುತ್ತಿದ್ದೀರಿ ಎಂದು ಹೇಳುತ್ತೀರಾ?

SRI K BHASKARA NAIDU.—Out of the total number of wells, how many are functioning and what is the quantity?

ಶ್ರೀ ಕೆ. ಪ್ರಭಾಕರ್ :— ಹೀಗಾಗಿ ಇದು ಪ್ರಗತಿ ಆಗಬೇಕೆಂಬುದರೊಳಗೆ ನಮಗೆ ೩ ಸಾಧನಗಳು ಅನಿವಾರ್ಯ. ಮೊದಲನೆಯದು, ಮೆಷಿನರಿ ಆಫ್ ಅಡ್ಮಿನಿಸ್ಟ್ರೇಷನ್ ; ಇದರಲ್ಲಿ ಹ್ಯೂಮನ್ ಎಲಿಮೆಂಟ್ ಎನ್ನುವುದು ಇನ್‌ವಾಲ್ವ್ ಆಗುವುದರಿಂದ ನಮ್ಮ ಉದ್ದಕ್ಕೆ ತಕ್ಕಂತೆ ನಮ್ಮ ವೇಗಕ್ಕೆ ತಕ್ಕಂತೆ ಸಾಲದಾಗಿ ಬರುತ್ತದೆ. ಅಂದರೆ ೩ ಕೋಟಿ ಜನರೇನಿದ್ದಾರೆ ಅವರಲ್ಲಿ ಒಂದೂವರೆ ಕೋಟಿ ಜನಕ್ಕೆ ಮಾತ್ರ ಈ ಅನುಕೂಲ ದೊರೆತಿದೆ ಎಂಬುದನ್ನು ತಿಳಿಸುತ್ತಿದ್ದೇನೆ. ಮಂದಗಾಮಿಯಾಗಿ ಅಧಿಕಾರಿಗಳು ಇದ್ದಾಗ ಚಾಟಿ ಏಟು ಬೇಕು, ಏಟು ಬೇಕೆಂದಾಗ ಮುದ್ದಿಸಿ ಕೆಲಸ ಮಾಡಿಸುವುದಕ್ಕೆ ಹೋಗುವುದಿಲ್ಲ. ಆದರೆ ಹೆಚ್ಚಾಗಿ ಕೆಲಸ ಮಾಡಬೇಕಾದರೆ ಯಾವ ಒಂದು ಮಾರ್ಗವನ್ನು ಅನುಸರಿಸಬೇಕೆಂಬುದನ್ನು ಅನುಸರಿಸುತ್ತಿರುತ್ತೇವೆ. ಎಷ್ಟೋ ಜನ ಅಧಿಕಾರಿಗಳನ್ನು ರೂಲ್ಸ್ ೨೮೫ರ ಪ್ರಕಾರ ನಿಷ್ಕರುಣೆಯಿಂದ ಮನೆಗೆ ಕಳುಹಿಸಿದರು ಎಂಬ ಕೂಗು ಕೇಳಿ ಬರುತ್ತಿದೆ. ಅಂಟಿಕರಪ್ಷನ್‌ನಲ್ಲಿ ಎಷ್ಟೋ ಕೇಸುಗಳಿವೆ ಎಂಬುದನ್ನು ನೋಡುತ್ತಿದ್ದೇವೆ. ಒಂದು ಕಡೆ ಅಂಟಿಕರಪ್ಷನ್, ಇನ್ನೊಂದು ಕಡೆ ರೂಲ್ ೨೮೫, ಮತ್ತೊಂದು ಕಡೆ ಕಂಪಲ್ಸರಿ ರಿಟೈರ್‌ಮೆಂಟ್ ಇವೆಲ್ಲ ಆಗಿದೆ.

೩.೦೦ ಪಿ. ಎಂ.

ಇನ್‌ಕ್ರಿಮೆಂಟ್ ಸಹ ನಿಲ್ಲಿಸಿದರು ಎಂಬ ಕೇಸಸ್ ಕೂಡ ಇವೆ. ಆದರೆ ಇದರಲ್ಲಿ ಮಾಡಬಾರದ ಕೆಲಸ ಎಂದರೆ, ಬೇಕಾದವರನ್ನು ಮುದ್ದಿಸುವುದು, ತಪ್ಪು ಮಾಡಿದವರನ್ನು ಮುದ್ದಿಸುವುದು

ಮಹಾಪರಾಧ. ಅದಕ್ಕೆ ಬೆಲೆ ಇಲ್ಲ. ಚೆನ್ನಾಗಿ ಕೆಲಸ ಮಾಡುವವರಿಗೆ ಮಾತ್ರ ಬೆಂಬಲ ಕೊಡಬೇಕೆಂಬ ಮಾತನ್ನು ತಿಳಿಸುತ್ತಿದ್ದೇನೆ. ಇನ್ನು ಒಂದೂವರೆ ಕೋಟಿ ಜನಕ್ಕೆ ೨೦೮೬೧ ಕೊಳವೆ ಬಾವಿಗಳನ್ನು ತೋಡಲಾಗಿದೆ ಎಂದು ಹೇಳುತ್ತೇನೆ. ತಾವು ಕೇಳುತ್ತಿದ್ದಿರಿ, ಕೇವಲ ೨೦ ಸಾವಿರ ಬಾವಿಗಳನ್ನು ತೋಡಿ ರುವಾಗ ೨೮ ಸಾವಿರ ಬಾವಿಗಳು ಹೇಗೆ ರಿಪೇರಿಯಾದವು ಎಂದು ಆಶ್ಚರ್ಯ ಕೂಡ ವ್ಯಕ್ತ ಮಾಡುತ್ತಿದ್ದೀರಿ. ಡೀಫಂಕ್ಟ್ ಬೋರ್‌ವೆಲ್‌ಗಳು ಎನ್. ಆರ್. ಡಬ್ಲ್ಯು. ಎಸ್. ಯೋಜನೆಗೆ ಸೇರಿದವು ಕೂಡ ಇರುತ್ತವೆ. ಅವೆಲ್ಲ ಸೇರಿ ನಾವು ೨೮ ಸಾವಿರ ಬಾವಿಗಳನ್ನು ರಿಪೇರಿ ಮಾಡಿದ್ದೇವೆಂಬುದು ಸಹಜ. ಒಂದೂ ರೂಪಾಯಿ ಕೊಟ್ಟು ಚಿಲ್ಲರೆ ಕೊಡು ಎಂದರೆ ಯಾರೂ ಒಂದೂ ಕಾಲು ರೂಪಾಯಿ ಕೊಡುವುದಿಲ್ಲ. ಒಂದು ವೇಳೆ ಜಾಸ್ತಿ ಕೊಟ್ಟಿದ್ದರೆ, ನಾನು ಕೊಟ್ಟಿದ್ದು ಒಂದು ರೂಪಾಯಿ ಮಾತ್ರ, ೪ ಆಣೆ ವಾಪಸ್ಸು ತೆಗೆದುಕೋ ಎನ್ನುವವರು ಇರುತ್ತಾರೆ ಮತ್ತು ಆ ೪ ಆಣೆಯನ್ನು ಸದ್ದಿಲ್ಲದೆ ಕಿಸೆಯಲ್ಲಿ ಬಿಡುವವರು ಇರುತ್ತಾರೆ. ಹೀಗೆ ೨೦ ಸಾವಿರ ಭಾವಿಗಳನ್ನು ತೆಗೆದಿರುವಾಗ ೨೮ ಸಾವಿರ ಭಾವಿಗಳು ರಿಪೇರಿಯಾಗಿದೆ ಎಂದು ಬರೆದಿರು ವಾಗ, ರಿಪೇರಿ ಕಾಲದಲ್ಲಿ ಏನೋ ಬಂದಿದೆ ಎಂಬುದಾಗಿ ಭಾವಿಸುವುದು ತಪ್ಪು; ಅದು ನಮ್ಮ ೩ ಯೋಜನೆಗಳು ಸೇರಿ ಆಗಿರುವುದು ಆಗಿದೆ. ಓಪನ್ ವೆಲ್ಸ್, ಬೋರ್‌ವೆಲ್ಸ್ ಮತ್ತು ಎನ್.ಆರ್. ಡಬ್ಲ್ಯು.ಎ ಎಸ್. ಯೋಜನೆಯಲ್ಲಿ ಎಷ್ಟು ಭಾವಿಗಳನ್ನು ಈ ವರ್ಷ ತೆಗೆಯುತ್ತೀರೆಂದು ಕೇಳಿದ್ದೀರಿ. ನಾವು ೧೯೭೭-೭೮ನೇ ಸಾಲಿನಲ್ಲಿ ಒಟ್ಟು ನಾವು ೫ ಸಾವಿರ ಬಾವಿಗಳನ್ನು ತೆಗೆಯುತ್ತೇವೆ. ಇಷ್ಟು ಬಾವಿ ಗಳನ್ನು ಒಂದು ವರ್ಷದಲ್ಲಿ ತೆಗೆಯಬೇಕೆಂಬ ಆಸೆ ಇದೆ. ಸ್ವಾತಂತ್ರ್ಯ ಬಂದು ೩೦ ವರ್ಷವಾಯಿತಾದರೂ ಅಲ್ಲಿ ನೀರಿಲ್ಲ, ಇಲ್ಲಿ ನೀರಿಲ್ಲ ಎಂದು ಏನು ಕೇಳುತ್ತೀರಿ. ಅದಕ್ಕೆ ನಾವು ಎಷ್ಟು ಬಾವಿಗಳನ್ನು ತೆಗೆದಿದ್ದೇವೆ. ಈ ವರ್ಷದಲ್ಲಿ ಬರುವ ವರ್ಷದಲ್ಲಿ ಎಷ್ಟು ಬಾವಿಗಳನ್ನು ತೆಗೆಯಬೇಕೆಂದಿದ್ದೇವೆ ಎಂಬುದನ್ನು ತಿಳಿಸಿದ್ದೇನೆ. ಮುಂದೆ ಅಂದರೆ ೧೯೭೭-೭೮ನೇ ಸಾಲಿಗೆ ಓಪನ್ ವೆಲ್ಸ್ ೬೦೦, ಬೋರ್‌ವೆಲ್ಸ್ ೪೧೯ ಪೈಪ್ಡ್ ವಾಟರ್ ೧೮೦ ಹೀಗೆ ಇವುಗಳೆಲ್ಲ ಸೇರಿ ಸುಮಾರು ೫ ಸಾವಿರ ಬಾವಿಗಳನ್ನು ತೋಡಬೇಕಾಗುತ್ತದೆ. ಇದರಲ್ಲಿ ಸ್ಥೂಲವಾಗಿ ಆ ಕಡೆ ೮ ಮತ್ತು ಈ ಕಡೆ ೧೧ ಜಿಲ್ಲೆಗಳಿರುವುದರಿಂದ ೫೦ ಪರ್ಸೆಂಟ್ ರೇಷಿಯೋ ಬರುತ್ತದೆ. ಹೇಗೆಂದರೆ ಕೂರ್ಗ್ ಎಷ್ಟು ಚಿಕ್ಕ ಜಿಲ್ಲೆಯಾಗಿದೆಯೋ ಬಿಜಾಪುರ ಅಷ್ಟೇ ದೊಡ್ಡ ಜಿಲ್ಲೆ ಯಾಗಿದೆ. ಆದ್ದರಿಂದ ಈ ಕಡೆ ೧೧ ಆ ಕಡೆ ೮ ಒಂದೇ ಆಗಿದೆ. ಈ ರೀತಿಯಾಗಿ ನಾರ್ತ್ ಅಂಡ್ ಸೌತ್ ಜೋನಲ್ ಅರೇಂಜ್‌ಮೆಂಟ್ಸ್ ಇದೆ. ಎರಡಕ್ಕೂ ಚೀಫ್ ಇಂಜಿನಿಯರ್ಸ್ ಇದ್ದಾರೆ. ಹಣ ಕೊಡುವಾಗ ಸಮವಾಗಿ ಕೊಡಬೇಕು. ಇದೇ ರೀತಿ ರಿಪೇರಿ ಸೆಲ್ಸ್‌ಗೆ ಕೂಡ ಅನೇಕ ಸಲ ಕೊಟ್ಟಿದ್ದೇವೆ. ರಿಪೇರಿ ಸೆಲ್ಸ್ ಸ್ಥಾಪನೆ ಮಾಡಿ ಅವರಿಗೆ ೧೯ ವೆಹಿಕಲ್ಸ್ ಹೊಸದಾಗಿ ಕೊಟ್ಟಿದ್ದೇವೆ. ಅವುಗಳ ಪೈಕಿ ೧೨ನ್ನು ಯುನಿಸೆಫ್‌ನಿಂದ ತರಿಸಿ ನಾವು ೭ನ್ನು ಕೊಂಡು ಜೊತೆಗೆ ಎಕ್ವಿಪ್‌ಮೆಂಟ್‌ಗಳನ್ನೆಲ್ಲ ಕೊಂಡು ಕೊಟ್ಟಿರು ವುದರಿಂದ ಬಾವಿಗಳ ರಿಪೇರಿ ಏನು ಮಾಡಬೇಕೆಂದು ಇವತ್ತು ಅದಕ್ಕೆ ಹೆಚ್ಚು ನಿಗ ಕೊಟ್ಟು ಮಾಡಿದ್ದೇವೆ. ಈಗ ರಿಪೇರಿ ಮಾಡುವವರಿಲ್ಲ ಕೆಟ್ಟು ಹೋಗಿವೆ ಎಷ್ಟೋ ದಿನಗಳ ನಂತರ ಬಂದು ವಿಚಾರಿಸುತ್ತಾರೆಂಬ ಭಾವನೆ ಇವತ್ತಿನ ದಿವಸ ಸಂಪೂರ್ಣವಾಗಿ ಇಲ್ಲವಾಗಿದೆ. ಆದರೆ, ಮಳೆ ಬಿಟ್ಟರೂ ಮರದ ಹನಿ ಬಿಡದು ಎಂಬಂತಾಗಿದೆ. ಹಿಂದೆ ಅವು ಇನ್ನೂ ಹೊಸದಾಗಿ ಬಂದಿದ್ದಾಗ ನಮ್ಮಲ್ಲಿ ರಿಪೇರಿ ಟೆಕ್ನಿಕ್ ಕೂಡ ಡೆವಲಪ್ ಆಗಿರಲಿಲ್ಲ; ನಮ್ಮಲ್ಲಿ ತಕ್ಕ ಎಸ್ಟಾಬ್ಲಿಷ್‌ಮೆಂಟ್ ಅದಕ್ಕಾಗಿ ಇರಲಿಲ್ಲ: ೨೦ ರಿಪೇರಿ ಶೆಲ್ಸು ಗಳನ್ನು ಮಾಡಿರಲಿಲ್ಲ. ನಾವು ಹೇಳಿ ಹೇಳಿ ಅದು ಸರ್ಕಾರದ ಗಮನದಲ್ಲಿದ್ದುದರಿಂದ ಇವತ್ತು ಸಂಪೂರ್ಣ ವಾಗಿ ಮಾಡಿ ಇಟ್ಟಿದ್ದೇವೆ. ಇವತ್ತು ಆ ಕೊರತೆ ಏನು ಇಲ್ಲ. ಏಕೆಂದರೆ ಅದನ್ನು ಬಹು ಬೇಗ ಸರ್ಕಾರಕ್ಕೆ ತಿಳಿಸುವುದಕ್ಕೆ ಕಾರ್ಡ್ ಸಿಸ್ಟಂ ಬೇರೆ ಮಾಡಿ ಇಟ್ಟಿದ್ದೇವೆ. ಪಂಚಾಯಿತಿ ಮಟ್ಟದಲ್ಲಿ ಇದಕ್ಕೆ ಸಂಬಂಧಪಟ್ಟ ಹಾಗೆ ಹೆಲ್ಪರ್ ಇರುತ್ತಾನೆ. ಅವನು ಸದಾಕಾಲ ಗ್ರಾಮಗಳನ್ನು ಸುತ್ತುತ್ತಿರುತ್ತಾನೆ. ಇಂಥ ಕಡೆ ಕೆಟ್ಟು ಹೋಗಿದೆ ಅಂದ ಕೂಡಲೇ, ವಾರಕ್ಕೊಮ್ಮೆ ತಿಂಗಳಿಗೊಮ್ಮೆ ಇಂಥ ಕಡೆ ಪ್ರೋಗ್ರಾಂ ಎಂದು ಹಾಕಿಕೊಂಡು ಆತ ಬೇಗ ಬೇಗ ಸರಿ ಮಾಡುತ್ತಾನೆ. ಆದ್ದರಿಂದ, ಆ ಕೊರತೆ ಇನ್ನು ಮುಂದೆ ಬರುವುದಿಲ್ಲವೆಂದು ತಿಳಿಸುತ್ತಿದ್ದೇನೆ. ಇದುವರೆಗೆ ರಿಪೇರಿ ವಿಚಾರದಲ್ಲಿ ಜನಗಳಿಗೆ ಏನೊಂದು ಕೊರತೆ ಇತ್ತು ಅದು ಇನ್ನು ಮುಂದೆ ಇರುವುದಿಲ್ಲವೆಂದು ಅಂದುಕೊಳ್ಳುತ್ತೇನೆ. ಇನ್ನೊಂದು ವಿಚಾರವೇನೆಂದರೆ. ಬೋರ್‌ವೆಲ್‌ಗಳನ್ನು ಹಾಕಿರುವ ಕಡೆ ಬಹು ಠೀಕವಾಗಿ ಎಲ್ಲ ಸಾರ್ವಜನಿಕರೂ ಆ ಬಾವಿಗಳಿಂದ ಈಗೀಗ ಸಂತೋಷದಿಂದ ನೀರನ್ನು ತೆಗೆದುಕೊಳ್ಳುತ್ತಾರೆ. ಆದರೆ ಅಲ್ಲಿ, ಇಲ್ಲಿ, ಒಂದೊಂದು ಕಡೆ ಹರಿಜನರಿಗೆ ನೀರು ತೆಗೆದುಕೊಳ್ಳುವುದಕ್ಕೆ ಬಿಡುವುದಿಲ್ಲ. ಆಗ ಅವರು ಬೇರೆ ಬಾವಿ ಮಾಡಿಕೊಡಿ ಅನ್ನುತ್ತಾರೆ. ಆದರೂ ಕೂಡ ನಾವು ಏಕ್‌ದಂ ಬಾವಿ ಮಾಡಿಕೊಡುವುದಕ್ಕೆ ಹೋಗುವುದಿಲ್ಲ. ಮಾಡಿಕೊಟ್ಟರೂ we will be maintaining what is called the devil practice of untouchability at the greatest cost paid by the Government ಎಂಬ ಈ ಒಂದು ದೊಡ

ಸಂಕಟಕ್ಕೆ ಗುರಿಯಾಗಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ ಸೌಜನ್ಯವುಳ್ಳ ಮಾನ್ಯ ಸದಸ್ಯರುಗಳಿಗೆ ತಿಳಿಸಿದರೆ ಅದನ್ನೆಲ್ಲ ಸರಿ ಮಾಡುತ್ತೇವೆಂಬ ಭರವಸೆಯನ್ನು ಕೊಡತಕ್ಕವರು ಇದ್ದಾರೆ. ಆ ಜನರು ನಮಗೆ ಬಾವಿ ಬೇಕೆಂದು ಬಂದಾಗ ೧೬ ಸಾವಿರ ರೂಪಾಯಿಗಳನ್ನು ಏನು ನಾವು ಖರ್ಚು ಮಾಡಬೇಕಾಗುತ್ತದೋ ಅದನ್ನು ಉಳಿಸುವುದಕ್ಕೆ ನೀವೆಲ್ಲ ಸಹಕಾರ ನೀಡುತ್ತೀರೆಂದೂ ಮತ್ತು ಸಾರ್ವಜನಿಕರೂ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಕೈಹಾಕಿ ಸರಿ ಮಾಡಿ ಎಂಬ ಬೇಡಿಕೆಯನ್ನು ಇಡುತ್ತಿದ್ದೇನೆ; ಇಷ್ಟು ಹೇಳಿದ ಮೇಲೆ ನೀರಿನ ಸಮಸ್ಯೆಯನ್ನು ಬಗೆಹರಿಸಿಲ್ಲ ಎಂಬುದಕ್ಕೆ ಒಂದು ಗುಟ್ಟು ಇದೆ. ಅದೇನೆಂದರೆ, ಕರ್ನಾಟಕದಲ್ಲಿ ಬರತಕ್ಕ ಹೊಸ ಗ್ರಾಮಗಳನ್ನು ಮತ್ತು ಹೌಸಿಂಗ್ ಕಾಲೋನಿಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ೩೦ ಸಾವಿರ ಗ್ರಾಮಗಳಿವೆ. ನಮ್ಮ ಲೆಕ್ಕದಲ್ಲಿ. ತಾವು ಯೋಚಿಸುವ ರೀತಿಯಲ್ಲಿ ೩೦ ಸಾವಿರ ಗ್ರಾಮಗಳಿಗೆ ಒಂದೊಂದು ಸೋರ್ಸ್ ಕೊಟ್ಟರೆ ಬೇಗ ಮುಗಿಬಹುದು. ಆದರೆ ಇಲ್ಲಿ ನೂರು. ಸಾವಿರ ಬಾವಿ ತೋರಿಸುತ್ತೀರಿ. ಆಗ ೬೦ ಸಾವಿರ ಹಳ್ಳಿಗಳಿಗೆ ನೀರಿಲ್ಲ ಎಂಬುದು ಬರುತ್ತದೆ; ಇದಕ್ಕೆ ಉತ್ತರಿಸಬೇಕಾಗುತ್ತದೆ. ಇದಕ್ಕೆ ಏನು ಕಾರಣ ಎಂದರೆ ಸುಮಾರು ೩೦ ಸಾವಿರ ಹಳ್ಳಿಗಳಲ್ಲಿ ೨೬ ಸಾವಿರ ಹಳ್ಳಿಗಳಿಗೆ ಇದ್ದಂಥ ಈ ಒಂದು ನೀರಿನ ಸಮಸ್ಯೆ ಬಗೆಹರಿದಿತ್ತು; ಇದರಲ್ಲಿ ಉಳಿದ ೪ ಸಾವಿರ ಹಳ್ಳಿಗಳಿಗೆ ನೀರನ್ನು ಕೊಟ್ಟರೆ ಈ ನೀರಿನ ಸಂಸ್ಥೆಯೇ ಬಗೆಹರಿಯುತ್ತದೆ ಎನ್ನತಕ್ಕಂಥ ಸಂತೋಷ ನಮಗೆ ಇತ್ತು; ಆದರೆ ದೈವದತ್ತವಾಗಿ ಬರಗಾಲಬಂದು ಈ ಜಲಕ್ಷಾಮ ಉಂಟಾದುದರಿಂದ in most of the exi ting open wells. the water column automatically went down. ಇದಿಷ್ಟೂ ಇರತಕ್ಕಂಥ ವಿಚಾರ. ಆದರೆ ೩ ಸಾವಿರ ಗ್ರಾಮಗಳಿಗೆ ನೀರು ಇಲ್ಲ ಎಂದು ಲೆಕ್ಕ ಮಾಡಿ ೬೦ ಸಾವಿರ ಬಾವಿ ಹಾಕಿದರೂ ನೀರು ಇಲ್ಲ ಎಂಬುದು ನಿಮಗೆ ಆಶ್ಚರ್ಯಕರವಾಗಿ ಕಾಣುತ್ತಿದೆ. ಇದರಲ್ಲಿ ಅನಾವಶ್ಯಕವಾಗಿ ಪ್ರಜೆಗಳ ಹಣವನ್ನು ಖರ್ಚು ಮಾಡಬೇಕೆಂಬ ಆಶೆ ನಮಗೆ ಇಲ್ಲ. ಈ ದೃಷ್ಟಿಯಿಂದ ನಮ್ಮ ಪಿ.ಎಚ್.ಇ. ಇಲಾಖೆಯವರು ೧೯೭೪ನೇ ಇಸವಿಯಲ್ಲಿ ಈ ವಿಚಾರದಲ್ಲಿ ಒಂದು ಸರ್ವೆ ಮಾಡಿ ೧೦ ಸಾವಿರ ಗ್ರಾಮಗಳಿಗೆ ನೀರು ಇಲ್ಲ ಎಂದು ಲೆಕ್ಕ ಮಾಡಿದರು. ಇದಾದಮೇಲೆ ಬರಗಾಲ ಕ್ಷೋಭೆಯಿಂದ ಇದರ ಸಂಖ್ಯೆ ಇನ್ನಷ್ಟು ಹೆಚ್ಚಿತು. ಇದು ಪಿ.ಎಚ್.ಇ. ಇಲಾಖೆಯವರಿಗೆ ಗೊತ್ತಾಗಲಿಲ್ಲ ಅವರಿಗೆ ಗೊತ್ತಾಗಲಿಲ್ಲ ಎಂಬುದರ ಅರ್ಥ ಏನೆಂದರೆ ಅವರು ಮತ್ತೊಂದು ಸಲ ಸರ್ವೆ ಮಾಡದೇಹೋದುದರಿಂದ that is exactly opposed to thy policy of administration of seeing the most suffered. ಆದ್ದರಿಂದ ಆ ಸಂಖ್ಯೆ ಎಷ್ಟು ಹೆಚ್ಚಾಗಿದೆ ಎಂಬುದನ್ನು ಹೇಳುವುದು ಕಷ್ಟ ನೀವು ಈ ಬಗ್ಗೆ ಕೇಳುವುದು ಸುಲಭ, ಇದನ್ನು ಮನಗಂಡು ೧೯೭೬ನೇ ಇಸವಿಯಲ್ಲಿ ನಮ್ಮ ಬ್ಯಾಂಕ್‌ನಿಂದ ನಾವು ಒಂದು ಸರ್ವೆ ಮಾಡಿಸಿದ್ದೇವೆ. ಅದರ ಪ್ರಕಾರ ೮ ಸಾವಿರ ಹಳ್ಳಿಗಳಿಗೆ ನೀರು ಇಲ್ಲ ಎಂದು ಕಂಡು ಬಂತು. ಪಿ.ಎಚ್.ಇ. ಯವರು ಸರ್ವೆ ಮಾಡಿದಾಗ ೧೦ ಸಾವಿರ ಗ್ರಾಮಗಳಿಗೆ ನೀರು ಇಲ್ಲವೆಂಬುದು ಕಂಡು ಬಂತು. ಇದನ್ನು ನಾವು ಮನಸ್ಸಿಗೆ ಹಚ್ಚಿಕೊಳ್ಳುವುದು ಬೇಡ, ನಾವು ಪಟ್ಟಿ ಪ್ರಕಾರವಾಗಿ ಕೆಲಸಮಾಡಿಕೊಂಡು ಹೋಗೋಣ, ಇದೆಲ್ಲಾ ಮುಗಿದಮೇಲೆ ಇನ್ನೂ ಯಾರೂ ಈ ಬಗ್ಗೆ ಕೇಳುವುದಿಲ್ಲ ಎನ್ನತಕ್ಕಂಥ ತೀರ್ಮಾನ ಮಾಡಿದೆವು. ಈ ವಿಚಾರದಲ್ಲಿ ಏನಾಗುತ್ತದೆ ಎಂದರೆ ಮಾನ್ಯ ಸದಸ್ಯರುಗಳು ಇಂತಹ ಕಡೆ ನೀರು ಇಲ್ಲ ಎಂದು ಹೇಳುತ್ತಿದ್ದಾರೆ, ಇಂತಹ ಕಡೆ ಬಾವಿ ತೆಗೆಸಿ ಎಂದು ನಮ್ಮ ಅಧಿಕಾರಿಗಳಿಗೆ ಸುಗ್ರೀವಾಜ್ಞೆ ಕೊಟ್ಟರೆ ಅವರು ಎರಡು ಪಟ್ಟಿಯನ್ನು ಹೋಲಿಸಿ ನೋಡಿ 'ಸ್ವಾಮಿ, ಬೋರ್‌ವೆಲ್ ಹಾಕುವುದಕ್ಕೆ ಇಂತಿಂತಹ ಹಳ್ಳಿಗಳು ಈ ಪಟ್ಟಿಯಲ್ಲೂ ಇಲ್ಲ, ಆ ಪಟ್ಟಿಯಲ್ಲೂ ಇಲ್ಲ, ನಾನು ಏನು ಮಾಡಲಿ, ಎಂದು ಪತ್ರ ಬರೆಯುತ್ತಾರೆ. ಅವರಿಗೆ ನಾವು 'ಪಟ್ಟಿಯನ್ನು ನೋಡಬೇಡಿ, ಇಂತಿಂತಹ ಕಡೆ ಬಾವಿ ತೆಗೆಯಿರಿ' ಎಂದು ಹೇಳಿಬಿಟ್ಟರೆ ಪಟ್ಟಿಯಲ್ಲಿ ಇರುವ ಹಳ್ಳಿಗಳನ್ನು ಬಿಟ್ಟು ಇಷ್ಟ ಬಂದಕಡೆ ಬಾವಿ ತೆಗೆಯುತ್ತಾರೆ. ಇದು ಏನು ಕರ್ಮವೋ ಗೊತ್ತಿಲ್ಲ, 'ನೀವು ಇಲ್ಲಿ 'ಸ್ವಾಮಿ, ನಾವು ನಮ್ಮ ಊರಿಗೆ ನೀರು ಕೇಳಿ ೬ ತಿಂಗಳಾಯಿತಕೆ, ಇನ್ನೂ ಕೊಟ್ಟಿಲ್ಲ' ಎಂದು ಹೇಳುತ್ತೀರಿ. ಈ ಒಂದು ಸಮಸ್ಯೆಯನ್ನು ನಿವಾರಿಸಲು ನಾವು ಈಗ ಒಂದು ಉಪಾಯವನ್ನು ಹುಡುಕಿದ್ದೇವೆ. ಅದರಂತೆ ಇನ್ನು ಮುಂದೆ ಈ ಪಟ್ಟಿ ಡೆಪ್ಯುಟಿ ಕಮಿಷನರ್‌ಗೆ ಹೋಗುತ್ತದೆ: ಅವರಿಗೆ ಎಮರ್ಜೆನ್ಸಿ ವೆಲ್ ಫಂಡ್ ಎಂದು ಕೊಟ್ಟರೆ ಅದರಿಂದ ಅವರು ಬಾವಿಗೆ ಮಂಜೂರಾತಿ ಕೊಡುತ್ತಾರೆ; ಇಂಜಿನಿಯರ್‌ಗೆ ಹೇಳಿ ಪಟ್ಟಿಯಲ್ಲಿರತಕ್ಕಂಥ ದೋಷಗಳನ್ನು ತಪ್ಪಿಸಿ ಬಾವಿಯನ್ನು ತೆಗೆಸುತ್ತಾರೆ ಎನು ವ ಒಂದು ಪದ್ಧತಿಯನ್ನು ಅನುಸರಿಸಬೇಕೆಂದಿದ್ದೇವೆ. ಬಾವಿ ರೀಫೇರಿ ವಿಚಾರವಾಗಲೀ, ನೀರು ಇಲ್ಲದ ಊರುಗಳನ್ನಾಗಲೀ ನಾವು ಕೈಬಿಡುತ್ತೇವೆ ಎನ್ನುವ ವಿಚಾರವಿಲ್ಲ. ಗ್ರಾಮಗಳಿಗೆ ನೀರನ್ನು ಒದಗಿಸುವುದರಲ್ಲಿ ೭ ವಿಧದ ಕ್ರಮಗಳು ಇವೆ. ಆ ರೀತಿ ನಾವು ಕಷ್ಟಪಟ್ಟು ಬಾವಿಯನ್ನು ತೆಗೆಸುತ್ತೇವೆ. ನೀರು ಅದರಲ್ಲಿ ಕಲ್ಮಷದಿಂದ ಕೂಡಿದ, ವಾಸನೆಯಿಂದ ಕೂಡಿದ ರೀತಿಯಲ್ಲಿ

ಆರೋಗ್ಯವನ್ನು ಸೂರೆ ಮಾಡತಕ್ಕಂಥ ರೀತಿಯಲ್ಲಿ ಇರುತ್ತದೆ. ಇದಕ್ಕೆ ಒಂದು ಮದ್ದು ನಮಗೆ ಸರಿಯಾಗಿ ಸಿಕ್ಕಿಲ್ಲ ಇದಕ್ಕೆ ಒಂದು ಮದ್ದು ಕಂಡು ಹಿಡಿದರೆ ಆಯಿತು. ೧೮ ಸಾವಿರ ಬೋರ್‌ವೆಲ್ ತೆಗೆದರೂ ಇವರಿಗೆ ಭೂಗರ್ಭ ವಿಚಾರ ಏನು ಗೊತ್ತು ? ನೀರು ಚನ್ನಾಗಿ ಇದೆಯೋ ಇಲ್ಲವೇ ಎಂಬುದು ಹೇಗೆ ಗೊತ್ತಾಗುತ್ತೆ' ಎಂದು ನೀವು ಭಾವಿಸಬಹುದು. ನಮ್ಮ ಇಂಜಿನಿಯರ್‌ಗಳು ಬಹಳ ಬುದ್ಧಿವಂತರು ಇದ್ದಾರೆ. ಈ ಸಮಸ್ಯೆಗೆ ಏನು ಪರಿಹಾರ ಕಂಡುಹಿಡಿದಿದ್ದಾರೆ ಎಂದರೆ in all zones or the bel of the bad wa er ಎನ್ನುವುದನ್ನು ಬಿಟ್ಟು ಅದರ ಸರಹದ್ದಿನಲ್ಲಿ ಫಸ್ಟ್ ಸರ್ಕಲ್, ಸೆಕೆಂಡ್ ಸರ್ಕಲ್, ಥರ್ಡ್ ಸರ್ಕಲ್ ಎಂದು ಮಾಡಿಕೊಂಡು ಅಲ್ಲಿ ಡೈನಾಮೊಮೀಟರ್ ಇಟ್ಟು ಹುಡುಕಿ ಒಳ್ಳೆಯ ನೀರು ಇರುವ ಜಾಗದಲ್ಲಿ ಬಾವಿ ತೋಡಿದು ನೀರನ್ನು ಸಂಗ್ರಹಿಸಿ ಪೈಪ್‌ಗಳ ಮುಖಾಂತರ ಪ್ರತಿಯೊಂದು ಗ್ರಾಮಕ್ಕೂ ನೀರನ್ನು ಕೊಡುತ್ತಾರೆ. ಈ ರೀತಿ ಅದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿದಿದ್ದೇವೆ ಈ ವಿಚಾರದಲ್ಲಿ ಇನ್ನು ಮುಂದೆ ನೀರಿನ ಕ್ಷೋಭೆ ಇರುವುದಿಲ್ಲ. ೧೦ ಸಾವಿರ ಹಳ್ಳಿಗಳಲ್ಲಿ ನೀರು ಇಲ್ಲ ಎಂದಾಗ ಅಲ್ಲಿ ಬಾವಿ ತೆಗೆಯುವಾಗ ಜಲಕ್ಷಾಮ ಬಂದು ಅದರ ಜೊತೆಗೆ ಮತ್ತಷ್ಟು ಹಳ್ಳಿಗಳು ಸೇರಿದವು ಹೀಗೆ ಎಷ್ಟು ಹಳ್ಳಿಗಳು ಸೇರುತ್ತವೆ ಎಂಬುದನ್ನು ನಾವು ನೋಡಿ ನಮ್ಮ ಕಾರ್ಯಕ್ರಮ ಪಟ್ಟಿಯ ಪ್ರಕಾರ ಇನ್ನು ೨ ವರ್ಷದಲ್ಲಿ ನೀರಿನ ಕ್ಷೋಭೆಯನ್ನು ಮುಗಿಸಬೇಕೆಂದು ಯೋಚನೆ ಮಾಡಿದ್ದೇವೆ. ಯಾವುದೇ ಗ್ರಾಮ ಇರಲಿ ಅಲ್ಲಿ ರೀಸರ್ವ್ ಮಾಡಿ ತಮ್ಮೆಲ್ಲರ ಅಭಿಪ್ರಾಯವನ್ನು ಕ್ರೋಢೀಕರಿಸಿ. ಈ ಮಧ್ಯೆ ಒಂದು ಸ್ಟೆಪ್–ಅಪ್ ಸ್ಕೀಮ್ ಮಾಡಿ ಪ್ರಜಾಕೀಯಟಿಗೆ ಈ ಒಂದು ನೀರಿನ ಕೊರತೆ ಇಲ್ಲದಂತೆ ಸರ್ಕಾರದವರು ವ್ಯವಸ್ಥೆ ಮಾಡುತ್ತಾರೆ ಎಂದು ನಾನು ತಮಗೆ ತಿಳಿಸಬಯಸುತ್ತೇನೆ. ಇನ್ನು ಕೆಲವು ಚಿಕ್ಕಚಿಕ್ಕ ವಿಚಾರಗಳಿವೆ ಅದನ್ನು ನೀವು ಪ್ರಸ್ತಾಪ ಮಾಡಿದ್ದರಿಂದ ಆ ವಿಷಯವನ್ನೂ ನಾನು ತಿಳಿಸಬೇಕಾಗಿದೆ. ಈಗ ಸದ್ಯಕ್ಕೆ ನಮ್ಮ ಇಲಾಖೆಯಲ್ಲಿ ಒಂದು ಕೊರತೆ ಇದೆ. ಆ ಕೊರತೆ ಏನೆಂದರೆ ಈ ಡಿ.ಪಿ.ಎ.ಪಿ. ಕಾರ್ಯಕ್ರಮಕ್ಕೆ ಇಟ್ಟಿರತಕ್ಕಂಥ ಹಣ ಮತ್ತು ಎಸ್.ಎಫ್ ಡಿಗೆ ಇಟ್ಟಿರತಕ್ಕಂಥ ಹಣ ಒಂದು ಕಾಲಮಿತಿಯಲ್ಲಿ ಖರ್ಚಾಗದೇ ಇದ್ದರೆ ಅದು ಲ್ಯಾಪ್ಸ್ ಆಗುತ್ತದೆ. ಇಟ್ಟಂತಕ್ಕಂಥ ಹಣದಲ್ಲಿ ಕಡಿಮೆ ಖರ್ಚು ಮಾಡಿದರೆ ಉಳಿದ ಹಣ ವಾಪಸ್ ಹೋಗುವುದರಿಂದ ಏನಾಗುತ್ತದೆ ಎಂದರೆ ಕಷ್ಟಪಟ್ಟು ಮೀನು ಹಿಡಿದು ಅದನ್ನು ಕೈಯಲ್ಲಿ ಹಿಡಿದುಕೊಳ್ಳತಕ್ಕ ಚಮತ್ಕಾರ ಇಲ್ಲದಿದ್ದರೆ ಅದು ಹೇಗೆ ತಪ್ಪಿಸಿಕೊಂಡು ನೀರಿಗೆ ಬೀಳುತ್ತದೆಯೋ ಹಾಗೆ ಆಗತಕ್ಕಂಥ ಪರಿಸ್ಥಿತಿ ನಮ್ಮಲ್ಲಿ ಇತ್ತು ಇದನ್ನು ತಪ್ಪಿಸಬೇಕು ಎಂದು ಹೇಳಿ ನಮ್ಮ ತಜ್ಞರು ೧೯೭೮ನೇ ಇಸವಿಯಲ್ಲಿ ಡಿಸ್ಟ್ರಿಕ್ಟ್ ರೂರಲ್ ಡೆವಲಪ್‌ಮೆಂಟ್ ಸೊಸೈಟೀಸ್ ಎಂದು ಮಾಡಿದ್ದಾರೆ. ಇದನ್ನು ಮಾಡಿ ಹಣ ಯಾವುದೇ ಕಾಲದಲ್ಲಿ ಲ್ಯಾಪ್ಸ್ ಅಥವಾ ಕೊಲ್ಯಾಪ್ಸ್ ಆಗದಂತೆ ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಿಕೊಳ್ಳಲು ಅನುಕೂಲವಾಗುವಂತೆ ಈ ಸೊಸೈಟಿ ಮಾಡಿಕೊಟ್ಟಿದ್ದಾರೆ. ಎಲ್ಲಾ ಕಡೆ ಇದಕ್ಕೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ ; ಶಾಸಕರುಗಳು ಸದಸ್ಯರಾಗಿ ಇರುತ್ತಾರೆ. ಇದರಲ್ಲಿ ನಾವು ಹಣವನ್ನು ಇಟ್ಟು ಯಾವಾಗ ಬೇಕಾದರೂ ಉಪಯೋಗಿಸಿಕೊಳ್ಳಬಹುದು. ನಮ್ಮಲ್ಲಿ ಏನಾಗುತ್ತದೆ ಎಂದರೆ ಪ್ರತಿವರ್ಷವಲ್ಲಿ ಏಪ್ರಿಲ್ ೧ನೇ ತಾರೀಖು ಮುಗಿದಮೇಲೆ ಹಣಕಾಸಿಗೆ ಸಂಬಂಧಪಟ್ಟ ಹಾಗೆ ಹೊಸ ವರ್ಷ ಪ್ರಾರಂಭವಾಗುತ್ತದೆ. ಆ ಸಂದರ್ಭದಲ್ಲಿ ಇಲ್ಲಿ ಬಜೆಟು ಪಾಸ್ ಮಾಡಬೇಕು, ಲ್ಯಾಪ್ಸ್ ಆಗಿರತಕ್ಕ ಹಣವನ್ನು ಚೆಕ್ ಮಾಡಬೇಕು, ಇದರ ಬಗ್ಗೆ ಅಕೌಂಟ್ ಕೊಡಬೇಕು—ಇವೆಲ್ಲಾ ಕಾರ್ಯಗಳು ಮುಗಿದ ಮೇಲೆ ನಮಗೆ ಜುಲೈ, ಆಗಸ್ಟ್, ಸೆಪ್ಟೆಂಬರ್ ಹೊತ್ತಿಗೆ ನಮಗೆ ದುಡ್ಡು ಸಿಕ್ಕುತ್ತದೆ. ಇದರಿಂದ ಕೆಲಸಕಾರ್ಯಗಳಲ್ಲಿ ಡಿಲೇ ಆಗುತ್ತದೆ. Delay is a kind of unavoidable delay but it takes away the responsibility of the well-meant officers in the executive.

ಇದಕ್ಕೆ ನಾವು ಒಂದು ಪರಿಹಾರವನ್ನು ಕಂಡುಹಿಡಿದಿದ್ದೇವೆ. ಅದೇನೆಂದರೆ ಮೊದಲೇ ಈ ಹಣವನ್ನೆಲ್ಲಾ ಸೊಸೈಟಿಗೆ ಹಾಕಿರುತ್ತೇವೆ. ಬಡ್ಜೆಟ್ ದುಡ್ಡು ಯಾವಾಗಲಾದರೂ ಬರಲಿ, ಈ ಹಣದಲ್ಲಿ we can go on spending and make progress according to the desire of the Government and the expectation of the members of the legislature.

ಅದರಲ್ಲಿ ಈಗ ಬೇಕಾದಷ್ಟು ಹಣ ಇದೆ. ಇದರಿಂದ ಉಪಕಾರವಾಯಿತು ; ಈ ಕಮ್ಯುನಿಟಿ ಇರಿಗೆ ಷನ್ ವೆಲ್ ತೆಗೆಯಲು ಅವರು ನಾವು ಬಜೆಟ್ ಹಣವನ್ನು ಕೊಡುವವರೆಗೆ ಕಾಯಬೇಕಿದ್ದು ಇಲ್ಲ. ಈ ವಿಚಾರದಲ್ಲಿ ಹಿಂದೆ ಇದ್ದಂಥ ಅಡ್ಮಿನಿಸ್ಟ್ರೇಟಿವ್ ಡಿಸಿಷನ್ ಅಥವಾ ಅಡ್ಮಿನಿಸ್ಟ್ರೇಟಿವ್ ಹ್ಯಾಂಡಿಕ್ಯಾಪ್ ಇದರಿಂದ ಕಡಿಮೆಯಾಗಿದೆ ಎಂದು ನಾನು ನಿಮಗೆ ತಿಳಿಸುತ್ತಿದ್ದೇನೆ. ಇದರಲ್ಲಿ ಚಿಕ ಚಿಕ್ಕ ವಿಚಾರಗಳೇ

ನೆಂದರೆ ನಮ್ಮಲ್ಲಿ 'ಕರ್ನಾಟಕ ವಿಕಾಸ' ಎನ್ನತಕ್ಕಂಥ ಒಂದು ಅಫಿಷಿಯಲ್ ಮ್ಯಾಗಜೈನ್ ಇದೆ. ಹಳ್ಳಿಗಳಲ್ಲಿ ರೇಡಿಯೋಗಳು ಇಲ್ಲದೇ ಇರುವುದರಿಂದ ಸರ್ಕಾರದ ಮಟ್ಟದಲ್ಲಿ ಯಾವ ಯಾವ ಕಾರ್ಯಗಳು, ಯಾವ ಯಾವ ಯೋಜನೆಗಳು ನಡೆಯುತ್ತಿವೆ ಎನ್ನುವುದು ಸಾಮಾನ್ಯ ಜನರಿಗೆ ತಿಳಿಯುವುದು ಕಷ್ಟ. ಸರ್ಕಾರದ ಯೋಜನೆಗಳು ಅವರಿಗೆ ತಿಳಿಯಲಿ ಎಂದು ಹೇಳಿ ಸರ್ಕಾರ ಅಬ್ಜೆಕ್ಟಿವ್ ಹೈಲೈಟ್, ಅಂದರೆ ದೀಪವನ್ನು ಮೇಲಕ್ಕೆ ಎತ್ತಿ ಹಿಡಿಯುವುದು ಎಂದು ಅರ್ಥವಲ್ಲ, to carry the knowledge to the ear of every well-meant citizen of the country ಎಂದು ಅರ್ಥವಾಗುತ್ತದೆ: ಒಬ್ಬರು ಕೇಳಿದರು 'ಹೈಲೈಟ್ ಎಂದರೆ ದೀಪವನ್ನು ತಲೆಯ ಮೇಲೆ ಎತ್ತಿ ಹಿಡಿಯುವುದು ಎಂದು ಅರ್ಥವಾಗುತ್ತದೆಯೋ' ಎಂದು; ನಾನು ಹೇಳಿದೆ ತಲೆಯ ಒಳಗೆ ಸರ್ಕಾರದ ಯೋಜನೆಗಳ ಬಗ್ಗೆ ವಿಚಾರ ತಿಳಿದುಕೊಳ್ಳುವುದಕ್ಕೋಸ್ಕರ ಇದನ್ನು ಮಾಡಿದ್ದೇವೆ ಎಂದು. ಇದನ್ನು ತಾವು ತಿಳಿದುಕೊಳ್ಳಬೇಕು. ಅಲ್ಲದೇ ಈ ಸಲ ನಾವು ಅಭಿವೃದ್ಧಿ ಕಾರ್ಯಗಳಿಗಾಗಿ ಒಂದಕ್ಕೆ ಮೂರರಷ್ಟು ಹಣವನ್ನು ಖರ್ಚು ಮಾಡಿ, ವಿಚಾರದಲ್ಲಿ ಒಂದು ಸ್ಟಾಂಡರ್ಡ್ ಹೆಚ್ಚಿಸಬೇಕು. ಎಂದು ನಮಗೆ ಆಶೆ ಇದೆ. ಇನ್ನು ಟ್ರೈನಿಂಗ್ ವಿಚಾರದಲ್ಲಿ ಹೇಳಬೇಕು ಎಂದರೆ ಈ ಟ್ರೈನಿಂಗ್ ಕೊಡತಕ್ಕಂಥಾದರಲ್ಲಿ ೩ ತರಹ ಇದೆ; ಅಧಿಕಾರಿಗಳಿಗೆ ಟ್ರೈನಿಂಗ್ ಕೊಡತಕ್ಕಂಥಾದ್ದು ಒಂದು ತರಹ, ಪಂಚಾಯತಿಯ ಸೆಕ್ರೆಟರಿಗೆ ಚೇರ್‌ಮನ್‌ಗೆ ಹಾಗೂ ವೈಸ್ ಚೇರ್‌ಮನ್‌ಗೆ ಟ್ರೈನಿಂಗ್ ಕೊಡತಕ್ಕಂಥದ್ದು ಒಂದು ತರಹ, ಹೆಣ್ಣು ಮಕ್ಕಳಿಗೆ ಟ್ರೈನಿಂಗ್ ಕೊಡ ತಕ್ಕಂಥಾದ್ದು ಮತ್ತು ಟಿ ಡಿ. ಬಿ ಮೆಂಬರ್ಸ್‌ಗೆ ಟ್ರೈನಿಂಗ್ ಕೊಡತಕ್ಕಂಥಾದ್ದು ಇನ್ನೊಂದು ತರಹ; ಎಲ್ಲಾ ಡಿಸ್ಟ್ರಿಕ್ಟ್‌ಗಳಲ್ಲಿ ಈ ಬಗ್ಗೆ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ಗಳು ಇವೆ. ಹೆಣ್ಣು ಮಕ್ಕಳಿಗೆ ಟ್ರೈನಿಂಗ್ ಕೊಡತಕ್ಕಂಥ ಕೇಂದ್ರಗಳು ಇದೆ. ಇಲ್ಲಿ ನಾವು ಹೇಳತಕ್ಕಂಥ ವಿಷಯಗಳು ಅವರಿಗೆ ತಿಳಿಯುವ ಹಾಗೆ ಮತ್ತು ಅವರು ಹೇಳುವ ವಿಷಯಗಳು ನಮಗೆ ತಿಳಿಯುವ ಹಾಗೆ ಅವರಿಗೆ ಟ್ರೈನಿಂಗ್ ಕೊಟ್ಟು ಅವರ ಸಂಖ್ಯೆಯನ್ನು ಹೆಚ್ಚಿಸಬೇಕೆಂಬ ದೃಷ್ಟಿಯಿಂದ ಈ ಏರ್ಪಾಡನ್ನು ನಾವು ಮಾಡಿದ್ದೇವೆ.

ಇನ್ನು ಗೋಬರ್ ಗ್ಯಾಸ್ ಅನ್ನತಕ್ಕದ್ದು ಒಂದು ಯೋಜನೆ, ೧೯೭೮ರ ವರೆಗೆ ನಾವು ಈ ಯೋಜನೆಯಲ್ಲಿ ೫ ಸಾವಿರ ಚಿಲ್ಲರೆ ಗೋಬರ್ ಗ್ಯಾಸ್ ಮಾಡಿ ಆಗಿತ್ತು. ಇದಕ್ಕೆ ಇಂಡಿಯಾ ಗವರ್ನಮೆಂಟಿನವರು ಸಬ್ಸಿಡಿ ಶೇಕಡ ೨೦ ರಷ್ಟು ಕೊಡುತ್ತಾರೆ. ಕಮರ್ಷಿಯಲ್ ಬ್ಯಾಂಕ್ ಮುಖಾಂತರ ನಮ್ಮ ಕರ್ನಾಟಕ ಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ಡೆಪ್ಯುಟಿ ಕಮಿಷನರ್ ಅವರು ಮತ್ತು ಬ್ಲಾಕ್‌ಮಟ್ಟದಲ್ಲಿ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಕೂಡ ಇದರ ಬಗ್ಗೆ ಅರ್ಜಿಗಳನ್ನು ತೆಗೆದುಕೊಂಡು ಇತ್ಯರ್ಥ ಮಾಡಿಕೊಡುವುದು, ಸಹಾಯ ಒದಗಿಸಿಕೊಡುವುದನ್ನು ಮಾಡುತ್ತಾರೆ. ಇದರ ಬಗ್ಗೆ ೧೯೭೮ರ ವರೆಗೆ ೩೧ ಲಕ್ಷ ಅವರಿಗೆ ಸಬ್ಸಿಡಿ ಅಮೌಂಟ್ ಕೊಟ್ಟಿದ್ದೇವೆ. ಬರುವ ವರ್ಷಕ್ಕೆ ೫ ಸಾವಿರಕ್ಕೂ ಮೇಲ್ಪಟ್ಟು ಮಾಡಬೇಕೆಂದು ಆಸೆ ಇದೆ. ೧೦ ಲಕ್ಷ ರೂಪಾಯಿ ಅಡ್ವಾನ್ಸ್ ತೆಗೆದು ಸಬ್ಸಿಡಿ ಬಗ್ಗೆ ಇರುವ ಹಣವನ್ನು ಒದಗಿಸಿಟ್ಟಿದ್ದೇವೆ ಇದು ಸೌದೆ ಅಭಾವ ಇರುವ ಕಾಲದಲ್ಲಿ ಸೌದೆ ಅಭಾವವನ್ನು ನೀಗುತ್ತದೆ. ಎಲೆಕ್ಟ್ರಿಸಿಟಿ ಅಭಾವ ತಪ್ಪಲಿಕ್ಕೆ ಸಹಾಯವಾಗುತ್ತದೆ. ಆದುದರಿಂದ ಇವುಗಳನ್ನು ಹೆಚ್ಚು ಹೆಚ್ಚು ಮಾಡಿಸಬೇಕೆಂದು ಇದ್ದೇವೆ. ಇವುಗಳನ್ನು ಕಾಣದೇ ಇರತಕ್ಕ ಜನರಿಗೆ, ಇದರ ಅನುಕೂಲವನ್ನು ಪ್ರಚಾರ ಮಾಡಿ ಇದು ಜಯಪ್ರದವಾಗುವಂತೆ ತಿಳಿಸಬೇಕಾಗುತ್ತದೆ. ಇನ್ನು ಎ.ಎನ್.ಪಿ ಇದು ಮಕ್ಕಳ ಆಹಾರದ ಬಗ್ಗೆ ಇದೆ. ಯೂನಿಸೆಫ್ ಮತ್ತು ವರ್ಲ್ಡ್ ಬ್ಯಾಂಕ್ ಸಹಾಯ ಪಡೆದು ಮತ್ತು ಕೇಂದ್ರ ಸರ್ಕಾರದ ಸಹಾಯ ತೆಗೆದುಕೊಂಡು ೧೭೫ ಬ್ಲಾಕುಗಳ: ೧೨೭ ಬ್ಲಾಕುಗಳನ್ನು ತೆಗೆದುಕೊಂಡಿದ್ದೇವೆ. ನಾವು ಸಸಿ ಹಾಕಿದ ಕೂಡಲೇ ಹಣ್ಣು ಕಾಯಿ ಬಿಡುವುದಿಲ್ಲ. ಎರಡು ಮೂರು ವರ್ಷಗಳ ಕಾಲ ಕಾಯಬೇಕಾಗುತ್ತದೆ.

ಶ್ರೀ ಹೆಚ್. ಡಿ. ಚೌಡಯ್ಯ.—ಸ್ವಾಮಿ, ಮಾನ್ಯ ಮಂತ್ರಿಗಳು ಯೂನಿಸೆಫ್ ಮತ್ತು ವರ್ಲ್ಡ್ ಬ್ಯಾಂಕ್ ಎಂದು ಹೇಳುತ್ತಿದ್ದಾರೆ. ಇದರಲ್ಲಿ ವರ್ಲ್ಡ್ ಬ್ಯಾಂಕ್ ಪಾತ್ರ ಏನು ಅನುವುದನ್ನು ತಿಳಿಸಬೇಕು.

ಶ್ರೀ ಕೆ. ಪ್ರಭಾಕರ್.—ಯೂನಿಸೆಫ್ ಎಂದು ಹೇಳಿದ್ದು. ಇನ್ನು ಲ್ಯಾಂಡ್ ಆರ್ಮಿ ಎಂದರೆ ಒಂದು ಆಕ್ಟಿವಿಟಿ. ಗೌರ್ನಮೆಂಟಿನವರಿಗೆ ಬೇಕಾದ ಬೆಂಬಲ ಕೊಡುವುದರಿಂದ ೨-೩ ಪ್ರಯೋಜನ ಆಗುತ್ತದೆಂದು ಕಂಡುಕೊಂಡು ಮಾಡಿಸುತ್ತಿದ್ದೇವೆ. ಇವೊತ್ತು ಲ್ಯಾಂಡ್ ಆರ್ಮಿ ಅಂದಕೂಡಲೇ ಯುದ್ಧಕ್ಕೆ ಹೋಗಿ ಸೈನಿಕರಂತೆ ದುಡಿದು ಸಂಬಳ ತೆಗೆದುಕೊಳ್ಳುವವರು ಎಂದು ಅರ್ಥವಲ್ಲ. "they train the rural unemployed youths in matters of discipline, so that

they could organise themselves as better agencies for execution of works.'' ಎಂದು ಆ ರೀತಿಯಲ್ಲಿ ಇದೆ. ಅದಕ್ಕೆ ನಾವು ಪಿ.ಡಬ್ಲ್ಯು.ಡಿ. ಇಲಾಖೆಯಿಂದ..............

ಶ್ರೀ ಕೆ. ಭಾಸ್ಕರ್‌ನಾಯ್ಡು.—ಅಧ್ಯಕ್ಷರೆ, ಹೈ ಸ್ಕೂಲ್, ಲ್ಯಾಂಡ್ ಆರ್ಮಿ, ವಿಚಾರ ಹೇಳುತ್ತಿದ್ದಾರೆ. ಇದು ಏನೂ ಗೊತ್ತಾಗುವುದಿಲ್ಲ.

ಒಬ್ಬ ಸದಸ್ಯರು.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕತೆ ಹೇಳುತ್ತಿದ್ದಾರೋ ಏನೋ ಗೊತ್ತಾಗುತ್ತಿಲ್ಲ.

ಶ್ರೀ ಕೆ. ಪ್ರಭಾಕರ್.—ಅಧ್ಯಕ್ಷರೆ, ಲ್ಯಾಂಡ್ ಆರ್ಮಿಯವರು ರಸ್ತೆಗಳನ್ನು ಮಾಡುವುದು, ಮೈನರ್ ಇರಿಗೇಷನ್ ವರ್ಕ್ಸ್ ಮಾಡುವುದು. ಸರ್ಕಾರದವರು ಮಾಡುವ ಕೆಲಸದ ಜೊತೆಗೆ ಅವರೂ ಕೂಡ ಸಾಕಷ್ಟು ಸೇವೆಯನ್ನು ಮಾಡುತ್ತಿದ್ದಾರೆ. ಅದಕ್ಕಾಗಿ ಸರ್ಕಾರದವರು ಹಣ ಕೊಡುವುದು, ಕೆಲಸ ಕೊಡುವುದನ್ನು ಮಾಡಿ ಹೆಚ್ಚು ಜನ ಅನ್‌ಎಂಪ್ಲಾಯಡ್ ಯೂತ್ಸ್‌ಗೆ ಸಹಾಯ ಮಾಡಲಿಕ್ಕೆ ಮಾಡುತ್ತಿದ್ದೇವೆ. ಇನ್ನು ಬನ್ನೇರುಘಟ್ಟದ ಹತ್ತಿರ ನ್ಯಾಷನಲ್ ಪಾರ್ಕ್ ಎಂದು ಮಾಡಿಕೊಟ್ಟಿದ್ದೇವೆ. ಹೆಚ್ಚು ಅನ್‌ಎಂಪ್ಲಾಯಡ್ ಯೂತ್ಸ್‌ಗಳಿಗೆ ಇವೆಲ್ಲವುಗಳಿಂದ ಹೆಚ್ಚು ಪ್ರಯೋಜನವಾಗುತ್ತದೆಂದು ತಿಳಿಸುತ್ತೇನೆ. ಈಗ ಮಾನ್ಯ ಸದಸ್ಯರು ಕೇಳಿದಂತಹ ಎಲ್ಲಾ ವಿಚಾರಗಳಿಗೂ ಕೂಡ ಸಮಂಜಸವಾದ ಉತ್ತರವನ್ನು ಕೊಡಲಿಕ್ಕೆ ಪ್ರಯತ್ನಪಟ್ಟು ಒಂದು ತೃಪ್ತಿಪಡಿಸಿದ್ದೇನೆ ಎಂದು ನನ್ನ ಭಾವನೆ. ಇನ್ನು ಹೆಚ್ಚು ಕಾಲ ಇದರ ಮೇಲೆ ಕಳೆಯುವುದು ಬೇಡ ಎಂದು ಹೇಳಿ, ಈ ಬೇಡಿಕೆಗೆ ತಾವು ಏಕೈಕವಾಗಿ ಒಪ್ಪಿ ಸರ್ವಾನುಮತದಿಂದ ಒಪ್ಪಿಗೆ ಕೊಡಬೇಕೆಂದು ಕೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI M. V. RAJASHEKARAN.—I want to bring to the notice of the Government, firstly the position of the Government with regard to Kondajji Basappa Committee's report. In 1970 the Government came out with a proposal to amend the 1959 Act and a Bill was introduced in the House; ultimately the Bill got lapsed. Whether the Government is going to bring a comprehensive Bill which includes the recommendations of the Kondajji Basappa Committee as well as Ashok Mehtha Committee. If that is so, when the Government is bringing such a Bill ?

Secondly, with regard to sharing of the resources he just mentioned about the revenue, how revenues are being shared both by Taluk boards and Panchayathis. I had made specifically clear that the Government should not only give land revenue but also should give a portion of the sales tax and other taxes recently introduced. What is the stand of the Government with regard to all these things?

Thirdly, the Hon. Minister has not answered my specific suggestion about the constituting the Monitoring and Evaluation cell. May I know whether the Government will introduce this Monitoring and Evaluation Agency to have overall vigilence about activities of the Rural Development programmes?

ಶ್ರೀ ಕೆ. ರಾಮಾಭಟ್.—ಸ್ವಾಮಿ, ಮಲೆನಾಡು ಪ್ರದೇಶದಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಆದಾಯ ಕಡಿಮೆ ಉಂಟು. ಅಂತಹ ಸಂದರ್ಭದಲ್ಲಿ ಉತ್ತರ ಕನ್ನಡದಲ್ಲಿ ಈ ಫಾರೆಸ್ಟ್ ರೆವಿನ್ಯೂ ಒಂದು ಅಂಶವನ್ನು ತಾಲ್ಲೂಕು ಅಭಿವೃದ್ಧಿ ಮಂಡಳಿಗೆ ಕೊಟ್ಟಿದ್ದಾರೆ. ಅದೇ ರೀತಿ ಎಲ್ಲೆಲ್ಲಿ ಫೈನಾನ್ಸ್ ರಿಸೋರ್ಸ್ ಕಡಿಮೆ ಇದೆ ಅಂತಹ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ರೆವಿನ್ಯೂ ಇನ್‌ಕಂ ಒಂದು ಅಂಶವನ್ನು ಕೊಡುವ ಯೋಜನೆಯನ್ನು ಸರ್ಕಾರದ ಮುಂದೆ ಇಡುತ್ತೇನೆ. ಇನ್ನು ವಿಲೇಜ್ ಟೌನ್ ವಾಟರ್ ಸಪ್ಲೈ ಸ್ಕೀಮ್ ೧೦ ವರ್ಷದಿಂದ ಹಾಗೆ ಇದೆ ಅದನ್ನು ಹೇಗೆ ಮಾಡುತ್ತೀರಾ ಅನ್ನುವುದನ್ನು ತಿಳಿಸಬೇಕು.

ಶ್ರೀ ಹೆಚ್. ಡಿ. ಚೌಡಯ್ಯ.—ಸ್ವಾಮಿ, ಪಂಚಾಯಿತಿಗಳಲ್ಲಿ ಪೂರ್ಣವಾಗಿ ಪ್ರತ್ಯೇಕವಾದ ಕಾರ್ಯದರ್ಶಿ ಇಲ್ಲ. ಹೋದ ವರ್ಷ ಕೂಡ ಈ ಬೇಡಿಕೆ ಸಂದರ್ಭದಲ್ಲಿ ಆ ಸಲಹೆಯನ್ನು ಕೊಟ್ಟಿದ್ದೇವೆ, ಇವೊತ್ತು ಪ್ರತ್ಯೇಕವಾದ ಕಾರ್ಯದರ್ಶಿಗಳನ್ನು ಪಂಚಾಯಿತಿಗಳಿಗೆ ನೇಮಕ ಮಾಡತಕ್ಕ ವಿಷಯದಲ್ಲಿ ಸರ್ಕಾರದ ನಿರ್ಧಾರ ಏನು ? ಇನ್ನು ೪೦ ಲಕ್ಷ ರೂಪಾಯಿ ಬಡ್ಜೆಟ್ ಏನಿದೆ ಅದನ್ನು ಅಪ್ರೋಪ್ರಿಯೇಟ್ ಮಾಡಿ ಬಹುಭಾಗ ಪಂಚಾಯಿತಿಗಳಿಗೆ ಕೊಡತಕ್ಕದ್ದಕ್ಕೆ ನಿರ್ದಿಷ್ಟ ಉತ್ತರ ಏನು ?

ಶ್ರೀ ಜೆ. ಹೆಚ್. ಪಟೇಲ್.—ಸ್ವಾಮಿ, ಸಾಮಾಜಿಕ ನ್ಯಾಯವನ್ನು ಒದಗಿಸಿ ಕೊಡುವ ಸಲುವಾಗಿ ತಾಲ್ಲೂಕು ಮಟ್ಟದಲ್ಲಿ ಒಂದು ಹೊಸ ಸಮಿತಿಯನ್ನು ಮಾಡುವುದಾಗಿ ತಾವು ಹೇಳಿದಿರಿ. ಆದರೆ ತಮ್ಮ ಉತ್ತರದಲ್ಲಿ ಏನು ಹೇಳಿದಿರಿ ಅಂದರೆ ತಾಲ್ಲೂಕು ಬೋರ್ಡ್‌ಗಳಾಗಲಿ, ಪಂಚಾಯಿತಿಗಳಾಗಲಿ ಸರಿಯಾಗಿ ತಮ್ಮ ಕೆಲಸಗಳನ್ನು ಮಾಡಲು ಅತ್ಯವಶ್ಯಕವಾಗಿ ಬೇಕಾದ ಹಣ ಇಲ್ಲದೇ ಇರುವುದರಿಂದ ತೀರಾ ಕೆಳ ಮಟ್ಟದಲ್ಲಿರತಕ್ಕ ಮನುಷ್ಯನನ್ನು ಮೇಲಕ್ಕೆತ್ತುವುದಕ್ಕೆ ಸಾಧ್ಯವಾಗುತ್ತಿಲ್ಲ ಎಂದು. ಹಾಗಾದರೆ ತಾವು ನೇಮಕ ಮಾಡಿರತಕ್ಕ ಈ ನ್ಯಾಯ ಸಮಿತಿ ಪರಿಣಾಮಕಾರಿಯಾಗಿ ಕೆಲಸಮಾಡಲು ಸಾಧ್ಯವೆ ಎಂಬುದನ್ನು ತಾವು ಹೇಳಬೇಕು.

೩-೩೦ ಪಿ.ಎಂ.

ಶ್ರೀ ಕೆ. ಪ್ರಭಾಕರ್.—ಮಾನ್ಯ ಸದಸ್ಯರಾದ ರಾಜಶೇಖರ್‌ರವರು ಕೋರಿರುವುದು ಕೊಂಡಜ್ಜಿ ಬಸಪ್ಪನವರ ಹಾಗೂ ಅಶೋಕ ಮೆಹ್ತಾ ಸಮಿತಿಯ ಶಿಫಾರಸ್ಸುಗಳನ್ನು ಕೈಬಿಡುತ್ತೀರೋ? ಅಥವಾ ಉಪಯೋಗಿಸಿಕೊಳ್ಳುತ್ತೀರೋ ಎಂಬುದು. ಆದರೆ ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಸರ್ಕಾರದವರು ಈ ಸಮಿತಿಯ ವರದಿಯನ್ನು ಕೈಬಿಡುವ ಪ್ರಶ್ನೆಯೇ ಇಲ್ಲ. ಇಲ್ಲಿ ಏನಾಗಿದೆ ಎಂದರೆ ಕೊಂಡಜ್ಜಿ ಬಸಪ್ಪ ಕಮಿಟಿ ವರದಿ ನಮ್ಮ ಮುಂದಿದ್ದಾಗ ಅಶೋಕ್ ಮೆಹ್ತಾ ಕಮಿಟಿ ರಿಪೋರ್ಟ್ ಬಂತು. ಇದು ಚುಕ್ಕಿ ಮೇಲೆ ಚಂದ್ರ ಬಂದಂತಾಗಿದೆ. ಈಗ ಕಟ್ಟಕಡೆಯದಾಗಿ ಈ ಅಶೋಕ್ ಮೆಹ್ತಾ ಕಮಿಟಿ ರಿಪೋರ್ಟ್‌ನ್ನು ಏನು ಮಾಡಬೇಕೆಂದು ಭಾರತ ಸರ್ಕಾರದವರು ಮುಖ್ಯ ಮಂತ್ರಿಗಳ ಸಮಿತಿಯನ್ನು ಏರ್ಪಾಡು ಮಾಡಿದ್ದಾರೆ. ಇದರ ಬಗ್ಗೆ ನಮ್ಮ ಅಭಿಪ್ರಾಯವನ್ನು ಕೊಟ್ಟು ವರದಿಯ ಉಪಯುಕ್ತ ಭಾಗಗಳನ್ನು ಬಡ ಜನಗಳಿಗೆ ಲಾಭದಾಯಕವಾಗುವಂತೆ ಉಪಯೋಗಿಸಿಕೊಳ್ಳಬೇಕೆಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಂ. ವಿ. ರಾಜಶೇಖರ್.—ಇದನ್ನು ಯಾವಾಗ ಮಾಡುತ್ತೀರಿ ?

ಶ್ರೀ ಕೆ. ಪ್ರಭಾಕರ್.—ಅದು ಆದಾಗ ಇದು

(ನಗು)

ಇನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಭೂಮಿಯನ್ನು ಸಾಗುವಳಿಗೆ ಕೊಡುವಂತೆ ಇತರ ಜಿಲೆಗಳಲ್ಲಿರತಕ್ಕ ಭೂಮಿಯನ್ನೂ ಏತಕ್ಕೆ ಕೊಡಬಾರದೆಂದು ಕೇಳಿದ್ದಾರೆ. ಇದು ಎಲ್ಲಿ ಫಾರೆಸ್ಟ್ ಭೂಮಿ ಕಡಿಮೆ ಇರುತ್ತದೆ ಅಲ್ಲಿ ರೆವಿನ್ಯೂ ಜಾಸ್ತಿ ಇರುತ್ತದೆ, ಎಲ್ಲಿ ರೆವಿನ್ಯೂ ಜಮೀನು ಜಾಸ್ತಿ ಇರುತ್ತದೆ, ಅಲ್ಲಿ ಫಾರೆಸ್ಟ್ ಇನ್‌ಕಂ ಕಡಿಮೆ ಇರುತ್ತದೆ ಇದು Slidi g scale arrangement in the progress. ಇದನ್ನು ಸರಿದೂಗಿಸಬೇಕೆಂದು ಹೀಗೆ ಮಾಡಿದ್ದೇವೆ. ಈ ತಾಲ್ಲೂಕು ಬೋರ್ಡ್‌ಗಳಿಗೆ ಮತ್ತು ಪಂಚಾಯ್ತಿಗಳಿಗೆ ಹೆಚ್ಚು ಹಣವನ್ನು ಒದಗಿಸಬೇಕೆಂದು ಮಾನ್ಯ ಸದಸ್ಯರುಗಳು ಹೇಳಿರುವುದನ್ನು ನಾವು ಗಮನದಲ್ಲಿಟ್ಟುಕೊಂಡಿದ್ದೇವೆ.

ಇನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಚೌಡಯ್ಯನವರು ಮಾತನಾಡುತ್ತಾ ಈ ಬಾಬಿಗಾಗಿ ಪ್ರಸಕ್ತ ವರ್ಷದಲ್ಲಿ ೪೦ ಲಕ್ಷ ರೂಪಾಯಿಗಳನ್ನು ಒದಗಿಸಿರುವುದಕ್ಕೆ ಸಂತೋಷವನ್ನು ವ್ಯಕ್ತಪಡಿಸುತ್ತಾ, ಪಂಚಾಯ್ತಿಗಳಿಗೆ ರೆಮ್ಯುನರೇಟೀವ್ ಅಸೆಟ್ ಜಾಸ್ತಿಬರುವಂತೆ ಮಾಡಬೇಕೆಂದು ಹೇಳಿದ್ದಾರೆ. ಇದು ಒಪ್ಪತಕ್ಕ ವಿಚಾರ. ನಾವು ಈಗ ಏನು ಹಣ ಕೊಟ್ಟಿದ್ದೇವೆ, ಇದು ಜನಗಳಿಗೆ ಲಾಭದಾಯಕವಾಗುವಂತೆ ಬಹಳ ಎಚ್ಚರಿಕೆಯಿಂದ ಉಪಯೋಗಿಸಬೇಕೆಂದಿದ್ದೇವೆ. ಇದಕ್ಕಾಗಿ ಈ ಸಾರಿ ಹೆಚ್ಚಿನ ಆಸಕ್ತಿ ಹಾಗೂ ಶ್ರದ್ಧೆಯಿಂದ ಕೆಲಸಮಾಡುತ್ತೇವೆ. ಇನ್ನು ಪಂಚಾಯ್ತಿಗಳಲ್ಲಿ ಪೂರ್ಣಕಾಲದ ಪ್ರತ್ಯೇಕ ಸೆಕ್ರೆಟರಿಯವರನ್ನು ನೇಮಕ ಮಾಡಬೇಕೆಂದು ಮಾನ್ಯ ಸದಸ್ಯರು ಸೂಚಿಸಿದ್ದಾರೆ. ಈ ವಿಚಾರ

ಈ ಸಭೆಯ ಮುಂದೆ ಅನೇಕ ರೀತಿಯಲ್ಲಿ ಬರುತ್ತಿದೆ. ಆದರೆ ಇವತ್ತು ಎಷ್ಟೋ ಪಂಚಾಯಿತಿಗಳಲ್ಲಿ ತಮ್ಮ ಸೆಕ್ರೆಟರಿಗೆ ಸಂಬಳ ಕೊಡಲು ಹಣವೇ ಇರುವುದಿಲ್ಲ ಆ ಪಂಚಾಯ್ತಿಯ ವರಮಾನವೆಲ್ಲಾ ಸೆಕ್ರೆಟರಿ ಒಬ್ಬನ ಸಂಬಳಕ್ಕೆ ಸಾಕಾಗುವುದಿಲ್ಲ. ತಾವು ಈಗ ಹೇಳುವುದನ್ನು ಏಕಾಏಕಿಯಾಗಿ ತುರಾತುರಿಯಾಗಿ ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದರೂ ತಮ್ಮ ಸಲಹೆ ಕ್ರಮ ತೆಗೆದುಕೊಳ್ಳಲು ಯೋಗ್ಯವಾಗದುದಾಗಿದೆ.

ಇನ್ನು ಮಾನ್ಯ ಸದಸ್ಯರಾದ ಶ್ರೀ ಜೆ. ಹೆಚ್. ಪಟೇಲ್‌ರವರು ಮಾತನಾಡುತ್ತಾ, ಸರ್ಕಾರದವರು ಮಾಡಿರುವ ಸೋಷಿಯಲ್ ಜಸ್ಟೀಸ್ ಕಮಿಟಿಗಳಿಗೆ ಸಾಕಷ್ಟು ಹಣವನ್ನೊದಗಿಸದೇ ಇರುವುದರಿಂದ ಅವು ತಮ್ಮ ಕೆಲಸವನ್ನು ಸಮರ್ಪಕವಾಗಿ ಕೆಲಸಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ನಾವು ಪಂಚಾಯ್ತಿಯವರಿಗೆ ರೆವಿನ್ಯೂ ಅಸೈನ್‌ಮೆಂಟ್ ಕೊಡುವಾಗ ಇಂಥಿಂಥಾದ್ದೇ ಮಾಡಿ ಎಂದು ಅವರಿಗೆ ಆಬ್ಜೆಕ್ಟೀವ್ಸ್ ನಿಗದಿ ಮಾಡಿ ದುಡ್ಡು ಕೊಟ್ಟಿಲ್ಲ. ಆದರೆ ಪಂಚಾಯ್ತಿ ಆಕ್ಟ್‌ನಲ್ಲಿರತಕ್ಕ ಡ್ಯೂಟೀಸ್‌ನಲ್ಲಿ ಆಪ್ಷನಲ್ ಮತ್ತು ಕಂಪಲ್ಸರಿ ಡ್ಯೂಟೀಸ್ ಏನಿವೆ ಅವುಗಳನ್ನು ಪಂಚಾಯ್ತಿಯವರೇ ತಿಳಿದುಕೊಂಡು ಮಾಡುತ್ತಾರೆಂದು ನಾವು ನಂಬಿ ಪ್ರತಿಯೊಬ್ಬ ಬಡವನಿಗೂ ಅನುಕೂಲವಾಗುವ ರೀತಿಯಲ್ಲಿ ಹಣವನ್ನು ಖರ್ಚುಮಾಡುವಂತೆ ಹೇಳುತ್ತೇವೆ ಇದರ ಜೊತೆಗೆ ಈ ಪಂಚಾಯ್ತಿಗಳಿಗೆ ಹೆಚ್ಚಿನ ವರಮಾನ ಬರುವಂತೆ ಮಾಡುವುದರ ಜೊತೆಗೆ ಖರ್ಚುಗಳನ್ನು ಯಾವರೀತಿ ಕಡಿಮೆ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ ಈಗಾಗಲೇ ೯ ಎಕರೆಗೆ ಕಡಿಮೆ ನೀರಾವರಿಯಾಗತಕ್ಕ ಕೆರೆಗಳ ಕೆಲಸವನ್ನು ತಾಲ್ಲೂಕು ಬೋರ್ಡ್‌ನವರು ಮಾಡುತ್ತಿದ್ದಾರೆ. ಈ ಬಜೆಟ್‌ನಲ್ಲಿ ಮನೆಗಳನ್ನು ಕಟ್ಟುವುದಕ್ಕೆ, ರಸ್ತೆಗಳನ್ನು ನಿರ್ಮಿಸುವುದಕ್ಕೆ, ಪ್ಲಾಂಟೇಷನ್ ಮಾಡುವುದಕ್ಕೆ, ಇನ್‌ಲ್ಯಾಂಡ್ ಫಿಷರೀಸ್ ಡೆವಲಪ್‌ಮೆಂಟ್ ಮಾಡುವುದಕ್ಕೆ ಸಾಕಷ್ಟು ಅವಕಾಶವಿದೆ. ಈ ಕಮಿಟಿ ತಬ್ಬಲಿಯಾಗದೆ ಬಡ ಜನಗಳಿಗೆ ಅನುಕೂಲವಾಗುವಂತೆ ತನ್ನ ಕೆಲಸಮಾಡುತ್ತದೆ. The Committee becomes a justifiable committee; not only justice committee.

MR. CHAIRMAN.—The question is :

"That the respective sums not exceeding the amounts mentioned in the list of Demands inclusive of the sum granted on account be granted to the Government to defray the charges which will come in course of payment during the financial year for the period ending with the 31st Day of March, 1980 in respect of Demands Nos. 56, 57 and 58."

The Motion was adopted and the respective sums were granted.

As ordered by the Chair the motion of Demands for grants adopted by the House are reproduced below :

"That a sum not exceeding Rs. 12 61,64,000 inclusive of the sum granted 'on account' be Granted to the Government to defray the charges which will come in course of payment during the financial year ending 31st day of March 1980 in respect of Demand No. 56 "Community Development".

"That a sum not exceeding Rs. 13,44.00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No. 57 "Programme for Drought Prone Areas and Small farmers Development Agency"

"That a sum not exceeding Rs. 23,71,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No. 58 "Compensations and Assignments to Local Bodies and Panchayati Raj".

Demand Nos. 5, 7, 53 and 8

SRI AZEEZ SAIT, (Minister for Industries and Commerce and Wakfs).—

Sir, on the recommendations of the Governor, I beg to move :

"That a sum not exceeding Rs. 33,85,99,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No. 5, "Industries (Excluding Small Scale Industries and Sericulture)".

"That a sum not exceeding Rs. 10,40,01,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No. 7 "Small Scale Industries."

"That a sum not exceeding Rs. 23,80,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No. 53, "Wakfs".

The Question was proposed

Sir, I request the Hon. Members of this August House to note these Demands without any discussion.

MR. CHAIRMAN.—That is your desire.

SRI K. B SHIVAIAH (Minister for Horticulture and Sericulture).—Sir, on the recommendation of the Governor, I beg to move :

"That a sum not exceeding Rs. 12,90,42,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No 8 "Sericulture".

The Question was proposed

MR. CHAIRMAN.—Now all the Demands are before the House for discussion.